ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ನೀವು ಹೇಳುವುದು ಸರಿ. ಆ ಸಂಸ್ಥೆ ಲಾಭ ಮಾಡಬೇಕೆಂಬ ಉದ್ದೇಶ ಮಾತ್ರ ಅಲ್ಲ. ರೈತರಿಗೆ ಸಾಧ್ಯವಾದಷ್ಟು ಮಟ್ಟಿಗೆ ನ್ಯಾಯಯುತವಾದ ಬೆಲೆಯನ್ನು ಕೊಡಬೇಕು, ಖಾಸಗಿಯವರು ಮೋಸ, ಶೋಷಣೆಯನ್ನು ಮಾಡುತ್ತಿದ್ದಾರೆ ಎಂಬ ಕಾರಣಕ್ಕೋಸ್ಕರವಾಗಿ ಮಧ್ಯವರ್ತಿಗಳಿಂದ ರೈತರನ್ನು ತಪ್ಪಿಸಿ ಅನುಕೂಲ ಮಾಡಿಕೊಡಬೇಕೆಂದು...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರು ದಲ್ಲಾಳಿಗಳ ಕೆಲಸವನ್ನು ಹಾಪ್‌ಕಾಮ್ಸ್‌ನವರು ಮಾಡಬೇಡಿ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ತಾವುಗಳು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ. ಆದರೆ ಈ ಲೋಪದೋಷಗಳನ್ನು ಸರಿಪಡಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸಚಿವರು ಹೇಳಿದ ಹಾಗೆ ಅಲ್ಲಿ ಬೇಕುಬೇಕಾದಂತೆ ಸಿಬ್ಬಂದಿ ವರ್ಗವನ್ನು ತುಂಬಿಕೊಂಡಿದ್ದಾರೆ. ಅವರನ್ನು ತೆಗೆಯಲು ಬಾರದ ಸ್ಥಿತಿ ಆಗಿದೆ.

ಉಪಾಧ್ಯಕ್ಷರು : 1990 ರಿಂದ 1996ವರೆಗೆ ಬೇಕಾದ ಹಾಗೆ ಸಿಬ್ಬಂದಿ ತುಂಬಿಕೊಂಡಿದ್ದಾರೆ ಎಂದು ಹೇಳುವ ನೀವು 1996ರಲ್ಲಿ ಏಕೆ ಮತ್ತೆ ತೆಗೆದುಕೊಳ್ಳುತ್ತಿದ್ದೀರಿ?

ಶ್ರೀ ಹೆಚ್.ಡಿ. ಬಸವರಾಜು : ಸಂಸ್ಥೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಸಿಬ್ಬಂದಿಯನ್ನು ತೆಗೆದುಕೊಂಡಿದ್ದಾರೆ. ಹಿಂದಿನಿಂದಲೂ ಹೆಚ್ಚು ಸಿಬ್ಬಂದಿ ಇದೆ ಎಂದು ಗೊತ್ತಿದ್ದೂ ನೀವು ಏಕೆ ಮತ್ತೆ ಭರ್ತಿ ಮಾಡಿಕೊಂಡಿದ್ದೀರಿ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, ಖಾಸಗಿಯವರು 200-300ರೂ. ಸಂಬಳ ಕೊಟ್ಟರೆ ನಾವು ಮಳಿಗೆಯಲ್ಲಿರುವವರಿಗೂ 2000ರೂಗಳ ವರೆಗೆ ಕೊಡಬೇಕು. 4000 ರೂ.ಗಳ ಸಂಬಳದವರೂ ಇದ್ದಾರೆ. ಅವರನ್ನು ತೆಗೆದು ಹಾಕಿದರೆ ನೀವೇ ಮತ್ತೆ ಕೇಳುತ್ತೀರಿ. ಮಾನ್ಯ ಪುಟ್ಟಣ್ಣಯ್ಯನವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿನ ಬಿಜಾಪುರ ಅಥವಾ ಬೇರೆ ಯಾವುದಾದರೂ ಒಂದು ಜಿಲ್ಲೆಯನ್ನು ದತ್ತು ಜಿಲ್ಲೆಯಾಗಿ ತೆಗೆದುಕೊಂಡು ಅದನ್ನು ಪೂರ್ಣವಾಗಿ ತೋಟಗಾರಿಕೆ ಜಿಲ್ಲೆಯಾಗಿ ಮಾಡಿ, ಮಾದರಿಯಾಗಿ ಮಾಡಿ ಅಲ್ಲಿ ಉತ್ಕೃಷ್ಟವಾಗಿ ಹಣ್ಣುಹಂಪಲುಗಳನ್ನು ಬೆಳೆಯುವ ಹಾಗೆ ಮಾಡಿ ಎಂದು ಹೇಳಿದ್ದಾರೆ. ಆ ಸಲಹೆಗಳನ್ನು ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

## ಪಶುಸಂಗೋಪನಾ ಮತ್ತು ಪಶು ವೈದ್ಯಕೀಯ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೇ, ಕಳೆದ ಮೂರು ನಾಲ್ಕು ದಿವಸಗಳಿಂದ ಪಶುಪಾಲನ ಮತ್ತು ಪಶುವೈದ್ಯ ಇಲಾಖೆ ಮೇಲೆ ಸದನದಲ್ಲಿ

ನಾಲ್ಕಾರು ಸದಸ್ಯರು ಮಾತನಾಡುತ್ತಾ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಕೆಲವರು ಉತ್ತಮವಾದ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಹಾಗೇ ಕೆಲವು ಸಮಸ್ಯೆಗಳನ್ನೂ ಎತ್ತಿದ್ದಾರೆ. ಮತ್ತು ಕೆಲವು ಗಹನವಾದ ಟೀಕೆಗಳನ್ನು ಕೂಡ ಮಾಡಿದ್ದಾರೆ. ಅವುಗಳಿಗೆ ಉತ್ತರಿಸುವುದಕ್ಕಿಂತ ಮೊದಲು ಈ ಇಲಾಖೆ ಬೆಳೆದುಬಂದ ಬಗ್ಗೆ ಮತ್ತೆ ಇದಕ್ಕಿರುವ ಮಹತ್ವ, ಇಲ್ಲಿ ಆಗಬೇಕಾಗಿರುವ ಕೆಲಸಗಳ ಬಗ್ಗೆ ಸ್ವಲ್ಪ ನಾವು ಪರಿಚಯ ಮಾಡಿಕೊಳ್ಳುವುದು ಅಗತ್ಯವಿದೆಯೆಂಬುದು ನನ್ನ ಭಾವನೆ. ಅಧ್ಯಕ್ಷರೇ, ನಮ್ಮದು ಕೃಷಿ ಪ್ರಧಾನವಾದ ರಾಷ್ಟ್ರ. ಶೇಕಡ 70ಕ್ಕೂ ಹೆಚ್ಚು ಜನ ಇವತ್ತು ಹಳ್ಳಿಗಳಲ್ಲಿ ಕೃಷಿಯನ್ನೇ ಅವಲಂಬಿಸಿ ಜೀವನ ಮಾಡತಕ್ಕದ್ದು, ಬೆಳಿಗ್ಗೆಯಿಂದ ಮಾತನಾಡಿದ ಕೃಷಿಸಚಿವರು ನಂತರ ತೋಟಗಾರಿಕೆ ಸಚಿವರು ಅದರ ಬಗ್ಗೆ ವಿಸ್ತಾರವಾಗಿ ಮಾತನಾಡಿದರು ಆದ್ದರಿಂದ ಅದರ ಬಗ್ಗೆ ಹೆಚ್ಚು ಹೋಗದೆ ಸೀಮಿತವಾಗಿ ನನ್ನ ಇಲಾಖೆ ಬಗ್ಗೆ ಹೇಳುವುದಾದರೆ ನನ್ನ ಇಲಾಖೆ ಮೇಲೆ ಶ್ರೀಯುತ ಎನ್. ರಾಜಣ್ಣ, ಚಂದ್ರಕಾಂತ ಬೆಲ್ಲದ್, ಕಾಗೋಡು ತಿಮ್ಮಪ್ಪ, ಪುಟ್ಟಣ್ಣಯ್ಯ, ಜಯರಾಮಶೆಟ್ಟಿ ಮತ್ತು ಸುರೇಶ್‌ಕುಮಾರ್‌ರವರುಗಳು ಮಾತನಾಡಿ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಾಮಾನ್ಯವಾಗಿ ರೈತರನ್ನು ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ಹಾಗೇ ಪಶುಸಂಗೋಪನೆ ಆ ರೈತನ ಬೆನ್ನೆಲುಬು ಅಂದರೆ ತಪ್ಪಾಗಲಾರದು. ಶೇಕಡ 80ರಷ್ಟು ಕೃಷಿ ಜಾನುವಾರು ಅವಲಂಬಿಸಿ ನಡೆಯುತ್ತಿದೆ. ಇಡೀ ಭಾರತದ ಗ್ರಾಮೀಣ ಅರ್ಥವ್ಯವಸ್ಥೆಯನ್ನು ನೋಡಿದಾಗ ನನಗನ್ನಿಸುತ್ತದೆ, ಪಶುಸಂಗೋಪನೆ ಬಿಟ್ಟು ಕೃಷಿ, ಕೃಷಿಯನ್ನು ಬಿಟ್ಟು ಪಶು ಸಂಗೋಪನೆ ಎಂದೂ ಇಲ್ಲ. ನಮ್ಮ ದೇಶದ ಇಂದಿನ ಜಾನುವಾರು ಸಂಪತ್ತು ನೋಡಿದಾಗ 1990ರ ಜಾನುವಾರು ಗಣತಿ ಪ್ರಕಾರ ದೇಶದಲ್ಲಿ 244 ಮಿಲಿಯನ್ ಜಾನುವಾರುಗಳಿವೆ ಅಂದರೆ ಪ್ರಪಂಚದ ಶೇಕಡ 23 ರಷ್ಟು ಜಾನುವಾರುಗಳು ಭಾರತದಲ್ಲೇ ಇವೆ ಮತ್ತು ಸಮ ಅರ್ಧದಷ್ಟು ಎಮ್ಮೆಗಳಿವೆ. ಅಲ್ಲದೆ ಪಶುಸಂಗೋಪನೆಯಿಂದ 1.83 ಲಕ್ಷ ಸಹಸ್ರಕೋಟಿ ಉತ್ಪಾದನೆ ಇದೆಯೆಂದು ಒಂದು ಸಮೀಕ್ಷೆ 1992ರಂದು ತಿಳಿಸುತ್ತದೆ. ಅಲ್ಲದೆ ನಿಮಗೆ ಆಶ್ಚರ್ಯವಾಗಬಹುದು ಭಾರತದ ಒಟ್ಟು ಆದಾಯಕ್ಕೆ ಪಶುಸಂಗೋಪನೆಯಿಂದ ಶೇಕಡ 15ರಷ್ಟು ಕೊಡುಗೆ ಇದೆ. ಅಲ್ಲದೆ ಇಡೀ ಕೃಷಿಯಿಂದ ಬರುವ ಆದಾಯದಲ್ಲಿ ಶೇಕಡ 25 ರಷ್ಟು ಪಶುಸಂಗೋಪನಾ ಇಲಾಖೆಯಿಂದಲೇ ಬರುತ್ತದೆ. ಆದರೆ ಒಂದು ದುಃಖದ ಸಂಗತಿಯೆಂದರೆ ಅಧ್ಯಕ್ಷರೇ, ಈ ರಾಷ್ಟ್ರದಲ್ಲಿ ಮೊದಲಿನಿಂದಲೂ ಪಶುಸಂಗೋಪನೆಯನ್ನು ಒಂದು ಮುಖ್ಯಕಸುಬಾಗಿ ಕೃಷಿಕರು ತೆಗೆದುಕೊಳ್ಳದೇ ಇದ್ದ ಕಾರಣ ದೇಶದ ಕೃಷಿ ಇಲಾಖೆ ಅಥವಾ ಕೃಷಿ ಆಯೋಗ ಇದಕ್ಕೆ ಎಷ್ಟು ಒತ್ತು ಪಶುಸಂಗೋಪನೆಗೆ ಕೊಡಬೇಕಾಗಿತ್ತೋ ಅಷ್ಟು ಕೊಡಲಿಲ್ಲ. ನಾವು ಕೃಷಿಯ ಒಟ್ಟು ಆದಾಯದ ಪೈಕಿ ಶೇಕದ 25 ರಷ್ಟು ಕೊಡುತ್ತಿದ್ದರೂ ನಮಗೆ ಸಿಗುತ್ತಿರುವ ಬೆಂಬಲ ಕೇವಲ 8 ಅಥವಾ 9 ಪರ್ಸೆಂಟ್ ಮಾತ್ರ ಕೃಷಿಗೆ ಬರುವುದರಲ್ಲಿ ನಮಗೆ ಕೊಡುತ್ತಾರೆ. ಹಾಗಾಗಿ ಇಲ್ಲಿ ಪುಟ್ಟಣ್ಣಯ್ಯನವರು ಇದ್ದಾರೆ ಹಿರಿಯ ಸದಸ್ಯರುಗಳಿದ್ದಾರೆ. ಅವರುಗಳು ಪದೇ ಪದೇ ಈ ಇಲಾಖೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಇಲಾಖೆಯಲ್ಲಿ ವಿಸ್ತರಣೆ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ಕೊಡಬೇಕೆಂದು ಹೇಳುತ್ತಿರುತ್ತಾರೆ. ನಾನು ಯಾಕೆ ಇದನ್ನು ಹೇಳುತ್ತಿದ್ದೇನೆಂದರೆ ನಮ್ಮ ಇಲಾಖೆ ಹೆಚ್ಚು ಬೆಳವಣಿಗೆ

ಆಗದಿರುವುದಕ್ಕೆ ಕೃಷಿ ಕ್ಷೇತ್ರ ಇದರ ಬಗ್ಗೆ ತೋರಿದ ಒಂದು ಮಲತಾಯಿಧೋರಣೆ, ರಾಷ್ಟ್ರಮಟ್ಟದಲ್ಲಿ ಇದಕ್ಕೆ ಕಾರಣ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ ಆದರೂ ಇವತ್ತು ಏನೇ ಆಗಲಿ, ಮತ್ತೊಂದು ಪ್ರಮುಖ ವಿಚಾರ ಹೇಳಲಿಕ್ಕೆ ಬಯಸುತ್ತೇನೆ. ದೇಶದಲ್ಲಿ 71.5 ಪರ್ಸೆಂಟ್ ಎತ್ತುಗಳು, 7.5 ಮಿಲಿಯನ್ ಕೋಣಗಳು, ಸುಮಾರು ಇವುಗಳಿಂದ 47 ಸಾವಿರ ಮೆಗಾವ್ಯಾಟ್ ಶಕ್ತಿಯಷ್ಟು ಇವತ್ತು ಬಳಸುತ್ತಿದ್ದಾರೆ. ಅಂದರೆ ರಾಷ್ಟ್ರದ ರೈಲುಮಾರ್ಗದಲ್ಲಿ ಸಾಗಿಸುವ ಸಾಮಾನುಗಳೇನಿವೆ ಅವುಗಳಿಗೆ ತಗಲುವ ವೆಚ್ಚಕ್ಕೆ ಎಷ್ಟು ಮೌಲ್ಯವಾಗುತ್ತದೆ ಅದಕ್ಕೆ ಸಮಾನವಾಗಿ ಜಾನುವಾರುಗಳ ಶಕ್ತಿ ಕೃಷಿಯಲ್ಲಿ ಬಳಕೆಯಾಗುತ್ತದೆ ಅಂದರೆ ನಿಜಕ್ಕೂ ಈ ಇಲಾಖೆಯ ಮಹತ್ವ ಎಷ್ಟಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. ಅಲ್ಲದೆ ಇವತ್ತು ಇಡೀ ಕೃಷಿಗೆ ಕೊಟ್ಟಿಗೆ ಗೊಬ್ಬರವನ್ನು ಬಳಸುತ್ತೇವೆ. ಕೃಷಿ ಮತ್ತು ತೋಟಗಾರಿಕೆಗಳು ನಮ್ಮ ಕೊಟ್ಟಿಗೆ ಗೊಬ್ಬರ ಇಲ್ಲದಿದ್ದರೆ ಸಾಧ್ಯವಿಲ್ಲ. ಇವತ್ತು ರಾಷ್ಟ್ರದಲ್ಲಿ ಎಷ್ಟು ಕೊಟ್ಟಿಗೆ ಗೊಬ್ಬರ ಇದೆ ಅಂದರೆ ಒಂದು ವರ್ಷಕ್ಕೆ 800 ಮೆಟ್ರಿಕ್‌ಟನ್ ಎಂದು ಇಲ್ಲಿ ಹೇಳಿದ್ದಾರೆ, ಅದು ತಪ್ಪಾಗಿರಬಹುದು, ಇನ್ನು ನಮ್ಮ ರಾಜ್ಯಕ್ಕೆ ಸೀಮಿತವಾಗಿ ಬರುವುದಾದರೆ ರಾಜ್ಯದಲ್ಲಿನ 1990ರ ಪಶುಗಣತಿ ಪ್ರಕಾರ ಸುಮಾರು 4.06 ಲಕ್ಷ ಜಾನುವಾರುಗಳಿವೆ ಎಂದು ಅಂಕಿಅಂಶಗಳು ಹೇಳುತ್ತವೆ. ದನಗಳು 101.75 ಲಕ್ಷಗಳು, ಎಮ್ಮೆಗಳು 40.37 ಲಕ್ಷಗಳು ಕುರಿಗಳು 47.57 ಲಕ್ಷಗಳು ಹಾಗೆಯೇ ಮೇಕೆಗಳು 39.89 ಲಕ್ಷಗಳು, ಹಂದಿಗಳು 3.04 ಲಕ್ಷಗಳಿವೆ ಇತರೆ 18.35 ಲಕ್ಷಗಳು, ಮತ್ತೆ ಕೋಳಿಗಳು 156.96 ಲಕ್ಷ ಒಟ್ಟು ಸೇರಿ 406 ಲಕ್ಷಕ್ಕೂ ಹೆಚ್ಚು ಜಾನುವಾರುಗಳಿವೆ. ಅಲ್ಲದೆ ಈ ಬಾರಿ ನಾವು 16ನೇ ಜಾನುವಾರು ಗಣತಿಯನ್ನೂ ನಡೆಸಿದ್ದೇವೆ. ಅದರ ಸಂಪೂರ್ಣ ವರದಿ ಬಂದಿಲ್ಲ. ನನ್ನ ದೃಷ್ಟಿಯಲ್ಲಿ ಜನಸಂಖ್ಯೆಗನುಗುಣವಾಗಿ ಜಾನುವಾರುಗಳ ಸಂಖ್ಯೆಯು ವೃದ್ಧಿಯಾಗಿರಬಹುದು, ಇದರ ಮಾಹಿತಿ ಮುಂದೆ ನಾನು ಕೊಡುತ್ತೇನೆ. ಇಷ್ಟು ಜಾನುವಾರುಗಳ ಆರೋಗ್ಯ ತಪಾಸಣೆ ಅಭಿವೃದ್ಧಿ ಮಾಡಲಿಕ್ಕಾಗಿ ಇಡೀ ರಾಜ್ಯದಲ್ಲಿ 3638 ಸಿಬ್ಬಂದಿ ವಿವಿಧ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ. ಜಾನುವಾರುಸಂಖ್ಯೆಗನುಗುಣವಾಗಿ ಇಷ್ಟು ಪ್ರಮಾತದಲ್ಲಿ ಅವರು ಇರಬೇಕೆಂದು ಭಾರತೀಯ ಕೃಷಿ ಆಯೋಗ ನಿಗದಿ ಮಾಡಿದೆ. ಆ ಸೂಚನೆಗೆ ನಮ್ಮ ಇಲಾಖೆ ಸಂಪೂರ್ಣ ಪೂರೈಸಿದೆ. ಜಾನುವಾರು ಆಸ್ಪತ್ರೆಗಳನ್ನು ಒದಗಿಸುವುದರಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ನಾನು ಕಳೆದ 15 ದಿವಸಗಳ ಹಿಂದೆ ಒಂದು ಹಳ್ಳಿಯಲ್ಲಿ ನಮ್ಮ ಇಲಾಖೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾಗ ಅಲ್ಲಿನ ರೈತರು ನನಗೆ ನೇರವಾಗಿ ಪ್ರಶ್ನೆ ಮಾಡಿದಾಗ ನನಗನ್ನಿಸಿತು, ಅಧ್ಯಕ್ಷರೇ, ಇವತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕೊಟ್ಟಿದ್ದ ಒತ್ತನ್ನು ಜಾನುವಾರು ಇಲಾಖೆಗೆ ಕೊಡಲು ಸಾಧ್ಯವಾಗಿಲ್ಲ. ಅದನ್ನು ಮನಗಂಡು ನನ್ನ ಮನಸ್ಸಿನಲ್ಲೇ ಅವಲೋಕನೆ ಮಾಡುತ್ತಿದ್ದಾಗ ಕರ್ನಾಟಕದಲ್ಲಿ 6 ಸಾವಿರಕ್ಕೂ ಹೆಚ್ಚು ಗ್ರಾಮಪಂಚಾಯಿತಿಗಳಿವೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಒಂದೊಂದು ಆಸ್ಪತ್ರೆ ತೆಗೆಯುವ ಅವಶ್ಯಕತೆ ಇದೆ ಅನ್ನುವುದು ನನ್ನ ಮನಸ್ಸಿಗೆ ಬಂದಿತು. ಆದ್ದರಿಂದ ಬರುವ ವರ್ಷಗಳಲ್ಲಿ ವರ್ಷಕ್ಕಿಷ್ಟು ಆಸ್ಪತ್ರೆಗಳಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ತಲಾ ಪಶುವೈದ್ಯಶಾಲೆ ಕೊಡಬೇಕೆಂಬ ಆಲೋಚನೆ ಹೊಂದಿದ್ದೇನೆ. ಅಲ್ಲದೆ ಇಷ್ಟು ಆಸ್ಪತ್ರೆಗಳನ್ನೂ ಸಮರ್ಪಕವಾಗಿ ನಡೆಸಲು ಬೇಕಾದ ಸುಮಾರು 15

ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಮಂಜೂರಾತಿ ಆಗಿದೆ. ಅದು ಎ ಬಿ ಸಿ ಡಿ ದರ್ಜೆಗಳಲ್ಲಿರಬಹುದು. ಈಗಾಗಲೇ 11 ಸಾವಿರಕ್ಕೂ ಹೆಚ್ಚು ಜನ ಭರ್ತಿಯಾಗಿದ್ದು ಇನ್ನು ಮೂರು ಸಾವಿರ ಚಿಲ್ಲರೆ ಜನರನ್ನು ತುಂಬಿಕೊಳ್ಳಬೇಕಾಗಿದೆ. ಅದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡು, ವೈದ್ಯರು ಇರಬಹುದು.......

6.50 ಪಿ.ಎಂ

ಅಥವಾ ಕೆಳಹಂತದ ಸಿಬ್ಬಂದಿಗಳು ಇರಬಹುದು, ಅವೆಲ್ಲವನ್ನೂ ತುಂಬಲಿಕ್ಕೆ ಕ್ರಮವನ್ನು ನಾವು ಕೈಗೊಂಡಿದ್ದೇವೆ. ಇವತ್ತು ರಾಜ್ಯದಲ್ಲಿ ನಾನು ಮೊದಲೇ ಹೇಳುತ್ತಾ ಒಂದು ಅಂಕಿಅಂಶವನ್ನು ಕೊಟ್ಟೆ. ಎಷ್ಟು ಜಾನುವಾರುಗಳು ಇದ್ದಾವೆ ಎಂದು ಅದರಿಂದ ಬಹುಶಃ ಎಷ್ಟು ಮೌಲ್ಯ ಇವತ್ತು ನಮಗೆ ಬರುತ್ತಿದೆ ಎನ್ನುವ ಬಗ್ಗೆ ಕೂಡ ಹೇಳಬಯಸುತ್ತೇನೆ. ಜಾನುವಾರುಗಳ ಮೌಲ್ಯ ಈ ರಾಜ್ಯದಲ್ಲಿ 6,91,369 ಲಕ್ಷ ರೂಪಾಯಿಗಳು ಇದೆ. ಪ್ರಾಣಶಕ್ತಿ ಮೌಲ್ಯಗಳಿಂದ ನಾನು ಮೊದಲೇ ಹೇಳಿದೆ. ಸುಮಾರು 47 ಸಾವಿರ ಮೆಗಾವ್ಯಾಟ್‌ನಷ್ಟು ಶಕ್ತಿಯನ್ನು ಕೃಷಿಗೆ ನಾವು ಬಳಸುತ್ತಿದ್ದೇವೆ. ಅದರ ಮೌಲ್ಯ ಎಷ್ಟಾಗುತ್ತಿದೆ ಎಂದರೆ ಪ್ರಾಣಶಕ್ತಿಮೌಲ್ಯ 33,600 ಲಕ್ಷ ರೂಪಾಯಿಗಳು. ಅಷ್ಟಲ್ಲದೆ ಜಾನುವಾರುಗಳ ಉತ್ಪನ್ನಗಳು ಬೇರೆ ಬೇರೆಯದು ಎಂದರೆ ಹಾಲಿನಿಂದ ಆಗಿರಬಹುದು, ಉಣ್ಣೆಯಿಂದ ಆಗಿರಬಹುದು, ಮೊಟ್ಟೆಯಿಂದ ಆಗಿರಬಹುದು. ಮಾಂಸದಿಂದ ಆಗಿರಬಹುದು. ಉಪ ಉತ್ಪನ್ನಗಳು ಎಂದರೆ ಚರ್ಮ, ಸಗಣಿ ಬೇರೆ ಬೇರೆ ಇವೆ ಎಂದು ಹೇಳಿದೆ. ಅದೆಲ್ಲಾ ಸೇರಿ 5,35,684 ಲಕ್ಷ ರೂಪಾಯಿಗಳಷ್ಟು ಇವತ್ತು ನಮ್ಮ ರಾಜ್ಯದಲ್ಲಿ ಈ ಒಂದು ಆದಾಯ ಬರುತ್ತಿದೆ. ಒಟ್ಟು ಈ ರಾಜ್ಯದಲ್ಲಿ ಸುಮಾರು 12,607 ಕೋಟಿ ರೂಪಾಯಿಗಳ ಉತ್ಪಾದನೆ ಒಂದು ವರ್ಷಕ್ಕಿತ್ತು. ಪ್ರತಿ ದಿನಕ್ಕೆ 35 ಕೋಟಿ ರೂಪಾಯಿ ಒಂದು ಮೌಲ್ಯ ಮತ್ತು ಉತ್ಪನ್ನ ಅಥವಾ ಆದಾಯ ಈ ರಾಜ್ಯದಲ್ಲಿದೆ. ಕರ್ನಾಟಕದ ಮಟ್ಟಿಗೆ ಇರುವ ಆದಾಯದ ಬಗ್ಗೆ ಹೇಳಿದ್ದೇನೆ. ಇವತ್ತು ನಮ್ಮ ಕರ್ನಾಟಕ ರಾಜ್ಯದ ಒಂದು ವರ್ಷದ ಆಯವ್ಯಯ 12-13 ಸಾವಿರ ಕೋಟಿ ರೂಪಾಯಿಗಳಾದರೆ ಅಷ್ಟೇ ಸಮನಾಗಿ ಇದರ ಮೌಲ್ಯ ಅಥವಾ ಆದಾಯ ಈ ಒಂದು ಕ್ಷೇತ್ರದಲ್ಲಿದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಇಲಾಖೆಯ ಬಗ್ಗೆ ತಮಗೆ ಹೇಳುತ್ತಿದ್ದೆ. ಇವತ್ತು ನಮ್ಮ ಜಾನುವಾರು ಆರೋಗ್ಯದ ಬಗ್ಗೆ ತಮಗೆ ಹೇಳುತ್ತಿದ್ದೆ. ಕರ್ನಾಟಕದಲ್ಲಿ ಹೆಬ್ಬಾಳದಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಎಂದು ಒಂದು ಸಂಸ್ಥೆ ಇದೆ. ಇಡೀ ಕರ್ನಾಟಕರಾಜ್ಯದಲ್ಲಿರುವ ಎಲ್ಲಾ ಜಾನುವಾರುಗಳಿಗೆ ಏನು ಸಾಂಕ್ರಾಮಿಕ ರೋಗಗಳು ಅಥವಾ ಸೋಂಕು ರೋಗಗಳು ಬರುತ್ತವೆ, ಅವುಗಳಿಗೆ ಮುಫತ್ತಾಗಿ ಲಸಿಕೆಯನ್ನು ತಯಾರು ಮಾಡಿ ಎಲ್ಲಾ ಜಾನುವಾರುಗಳ ಆರೋಗ್ಯವನ್ನು ಕಾಪಾಡುವ ಕೆಲಸವನ್ನು ಈ 3638 ಸಂಸ್ಥೆಗಳಿಂದ ಮಾಡುತ್ತಿದ್ದೇವೆ. ಅಷ್ಟಲ್ಲದೆ ಇವತ್ತು ನಮಗೆ ಭಾರತ ಸರ್ಕಾರದಿಂದ ಬರುವ ಧನಸಹಾಯದಿಂದ ಕಾಲು ಮತ್ತು ಬಾಯಿ ಜ್ವರ ಅಥವಾ ಇವತ್ತು ದೊಡ್ಡ ರೋಗ ಎಂದು ಪ್ರಾಣಿಗಳಲ್ಲಿ ಬರುವ ಅತ್ಯಂತ ಭಯಾನಕ ರೋಗ ಇದೆ ಅದರ ನಿವಾರಣೆಗಾಗಿ ಐರೋಪ್ಯ ರಾಷ್ಟ್ರಗಳಿಂದ ಮತ್ತೆ ಭಾರತ ಸರ್ಕಾರದ ಸಹಾಯದಿಂದ ಮತ್ತು ನಮ್ಮ ರಾಜ್ಯ ಸರ್ಕಾರದ ಸಹಾಯದಿಂದ ಇವತ್ತೇನು ದೊಡ್ಡರೋಗ

ಎಂದು ಇದೆ, ಈ ರಾಜ್ಯದಲ್ಲಿ ಕಳೆದ 1954 ನೇ ಇಸವಿಯಿಂದ ಇದು ಬಹಳ ವರ್ಷಗಳಿಂದ ಇದೆ. ಆದರೆ ಈ ದೇಶದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು 1954ನೇ ಇಸವಿಯಲ್ಲಿ. ಅವತ್ತಿನಿಂದ ಬಹಳಷ್ಟು ಭಾರತ ಸರ್ಕಾರ ಮತ್ತೆ ಕರ್ನಾಟಕ ಸರ್ಕಾರಗಳು ಈ ರೋಗವನ್ನು ನಿಯಂತ್ರಣ ಮಾಡಲಿಕ್ಕಾಗಿ ಬಹಳಷ್ಟು ಪ್ರಯತ್ನಮಾಡಿ ಇತ್ತೀಚೆಗೆ 1995-96ನೇ ಇಸವಿಯಲ್ಲಿ ನನಗೆ ಸಿಕ್ಕಿರುವ ಅಂಕಿಅಂಶಗಳ ಪ್ರಕಾರ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಕೂಡ ಈ ದೊಡ್ಡ ರೋಗ ಕಂಡುಬಂದಿಲ್ಲ. ಆದ್ದರಿಂದ ಬಹಳ ಸಂತೋಷದಿಂದ ಈ ಸಂದರ್ಭದಲ್ಲಿ ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ ಕರ್ನಾಟಕ ರಾಜ್ಯವನ್ನು 'ದೊಡ್ಡ ರೋಗ ಶೂನ್ಯ ರಾಜ್ಯ' ಎಂದು ಹೇಳಿ ತಾತ್ಕಾಲಿಕವಾಗಿ ಘೋಷಿಸಲಾಗಿದೆ. ಸಂಪೂರ್ಣವಾಗಿ ಈ ರೋಗ ಈ ರಾಜ್ಯದಲ್ಲಿ ಎಲ್ಲೂ ಕೂಡ ಕಂಡಿಲ್ಲ. ಇದೊಂದು ದೊಡ್ಡ ಸಾಧನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಜಾನುವಾರು ಆರೋಗ್ಯ ರಕ್ಷಣೆ ವಿಚಾರದಲ್ಲಿ ಮುಂದುವರೆದು ಹೇಳುವುದಾದರೆ ಬರತಕ್ಕಂಥ ಸಾಂಕ್ರಾಮಿಕ ರೋಗಗಳು ಮತ್ತೆ ಏನು ಸೋಂಕು ರೋಗಗಳಿವೆ, ಅವುಗಳನ್ನು ನಾವು ಸಾಮಾನ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಣೆ ಮಾಡುತ್ತೇವೆ. ಅದು ಅತೀ ಸೂಕ್ಷ್ಮಾಣುವಿನಿಂದ ಬರುವ ವೈರಸ್ ಏನು ಡಿಸೀಸ್ ಎಂದು ಹೇಳುತ್ತೇವೆ, ಸೂಕ್ಷ್ಮಾಣುವಿನಿಂದ ಬರುವುದು ಬ್ಯಾಕ್ಟೀರಿಯಾ ಡಿಸೀಸ್ ಎಂದು ಹೇಳುತ್ತೇವೆ ಹಾಗೆಯೇ ಪರಾವಲಂಬಿ ಜೀವಿಗಳಿಂದ ಬರುವುದು. ಜಂತು ಹುಳುಗಳು ಮತ್ತೊಂದು ಹುಳುವಿನಿಂದ ಬರುವುದು, ಪ್ಯಾರಾಸೈಟ್ಸ್‌ನಿಂದ ಬರುವುದು, ಹಾಗೆಯೇ ಆಹಾರದ ಕೊರತೆಯಿಂದ. ಒಂದು ನ್ಯೂಟ್ರಿಷನ್ ಡಿಫಿಷಿಯೆನ್ಸಿಯಿಂದ ಬರುವ ರೋಗಗಳು ಎಂದು ಹೇಳಿ ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. ಎಲ್ಲವನ್ನು ಕೂಡ ನಾವು ಮೊದಲೇ ಹೇಳಿದಹಾಗೆ ಕರ್ನಾಟಕ ರಾಜ್ಯದಲ್ಲಿರುವ ಈ ಸಂಸ್ಥೆ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಇಡೀ ದೇಶದಲ್ಲೇ ಅತ್ಯುತ್ತಮ ಸಂಸ್ಥೆ ಎಂದು ಹೇಳಿ ಆ ಸಂಸ್ಥೆಗೆ ಒಂದು ಸರ್ಟಿಫಿಕೇಟನ್ನು ಭಾರತ ಸರ್ಕಾರ ಕೊಟ್ಟಿದೆ. ಇದನ್ನು ನಾನು ಹೆಮ್ಮೆಯಿಂದ ಹೇಳುತ್ತೇನೆ. ಕಳೆದ ಎರಡು-ಮೂರು ವರ್ಷದಲ್ಲಿ ಆ ಸಂಸ್ಥೆ ಅತ್ಯುತ್ತಮವಾಗಿ ಕೆಲಸ ಮಾಡಿಕೊಂಡು ಬಂದಿದೆ ಎನ್ನುವ ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಜೈವಿಕ ಆಹಾರ ಮತ್ತು ಪಶು ಸಂಸ್ಥೆಗಳಿಂದ ಬರುವುದು ಅಲ್ಲದೇ ಕರ್ನಾಟಕ ರಾಜ್ಯ ಸರ್ಕಾರ ಕೂಡ ಪ್ರತಿ ವರ್ಷ ಈ ಔಷಧಿಗಳನ್ನು ಕೊಳ್ಳುವುದಕ್ಕೆ ನಮಗೆ ಆಯವ್ಯಯದಲ್ಲಿ 41 ಲಕ್ಷ ರೂಪಾಯಿಗಳನ್ನು ಯೋಜನೆಯಡಿಯಲ್ಲಿ ಮತ್ತು 2 ಲಕ್ಷ ರೂಪಾಯಿಗಳನ್ನು ಯೋಜನೆಯಡಿಯಲ್ಲಿ ಒಟ್ಟು 443 ಲಕ್ಷ ರೂಪಾಯಿಗಳನ್ನು ಕಳೆದ ವರ್ಷ ಬಿಡುಗಡೆ ಮಾಡಿತ್ತು. ವರ್ಷದಲ್ಲಿ ಎರಡು ಸಾರಿ ಆ ಔಷಧಿಗಳನ್ನು ಇಡೀ ರಾಜ್ಯದಲ್ಲಿರುವ ಜಾನುವಾರುಗಳನ್ನು ಜಿಲ್ಲಾವಾರು ಅಗತ್ಯ ಇರುವುದನ್ನು ಗಮನದಲ್ಲಿಟ್ಟುಕೊಂಡು ಈ ಔಷಧಿಗಳನ್ನು ವರ್ಷದಲ್ಲಿ ಎರಡು ಸಾರಿ ಮೊದಲರ್ಧ ವರ್ಷ, ಕೊನೆಯರ್ಧ ವರ್ಷ ಎಂದು ಹೇಳಿ ಎರಡು ಸಾರಿ ಕೊಳ್ಳುತ್ತೇವೆ.

ಶ್ರೀ ಎನ್. ರಾಜಣ್ಣ : ಎರಡೂವರೆ ಕೋಟಿ ಜಾನುವಾರುಗಳಿವೆ. 4 ಕೋಟಿ 54 ಲಕ್ಷ ರೂಪಾಯಿಗಳನ್ನು ಔಷಧಿಗಾಗಿ ಕಾದಿರಿಸಿದ್ದೀರಿ. ಅಂದರೆ ಒಂದು ವರ್ಷಕ್ಕೆ ಒಂದು ಪ್ರಾಣಿಗೆ 1.70 ರೂಪಾಯಿಗಳು ಸಾಕೆ? ಇದನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಇಲ್ಲಿ ಪೌಷ್ಟಿಕ ಆಹಾರವನ್ನು

ಕೊಡುವುದಕ್ಕೆ ಚೈಲ್ಡ್ ಅಂಡ್ ಮದರ್ ಡೆವಲಪ್‌ಮೆಂಟ್‌ಗೋಸ್ಕರ 265 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆರೋಗ್ಯಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಆದರೆ ಪ್ರಾಣಿ ಆರೋಗ್ಯವನ್ನು ಕಾಪಾಡುವುದಕ್ಕೆ 4 ಕೋಟಿ 50 ಲಕ್ಷ ರೂಪಾಯಿಗಳು ಎಂದರೆ ಬಹಳ ಕಡಿಮೆಯಾಯಿತು. ಇದರ ಬಗ್ಗೆ ಚಿಂತನೆ ಮಾಡಬೇಕು. ಇದಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳು ಸಾಲುವುದಿಲ್ಲ. ಅಟ್‌ಲೀಸ್ಟ್ ಈ ಬಾರಿಯಾದರೂ 20 ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ಅವರು ನನ್ನ ನೆರವಿಗೆ ಬಂದಿದ್ದಾರೆ. ಅವರಿಗೆ ತಮ್ಮ ಮೂಲಕ ನಾನು ಅಭಿನಂದನೆಗಳನ್ನು ಮತ್ತು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ನನ್ನ ಇಲಾಖೆಗೆ ಇರುವ ಜಾನುವಾರುಗಳಿಗೆ ಅನುಗುಣವಾಗಿ ಇವತ್ತೊಂದು ನಮ್ಮ ಅಧಿಕಾರಿಗಳು ಕೊಟ್ಟ ವರದಿ ಎಂದರೆ ನಮಗೆ ವರ್ಷಕ್ಕೆ 70 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೆ ಇವತ ಕೊಟ್ಟಿರುವ ಹಣ ಏನು ಇದೆ, 4 ಕೋಟಿ 65 ಲಕ್ಷ ಈ ವರ್ಷ ನಮಗೆ ಆಯವ್ಯಯದಲ್ಲಿ ಒದಗಿಸಿರುವುದು. ಅದು ಯಾವುದಕ್ಕೂ ಸಾಲದು. ಒಟ್ಟಾರೆ ತಮಗೆ ಹೇಳುವುದಾದರೆ 15 ರಿಂದ 20 ದಿನ ಅಥವಾ ಒಂದು ತಿಂಗಳಿಗೆ ಮಾತ್ರ ಔಷಧಿಗಾಗಿ ಸಾಕಾಗುತ್ತದೆ. ಆದರೂ ಈ ಔಷಧಿಗಳನ್ನು ಕೊಂಡು ಎಲ್ಲಾ ಕರ್ನಾಟಕ ರಾಜ್ಯದಲ್ಲಿರುವ 3638 ಸಂಸ್ಥೆಗಳಿಗೂ ನಾವು ಔಷಧಿಗಳನ್ನು ಒದಗಿಸುವ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದಲೂ ನಾವು ಮಂತ್ರಿಗಳ ರಿಪ್ಲೈ ಕೇಳುತ್ತಿದ್ದೇವೆ. ಒಬ್ಬ ಮಂತ್ರಿಯಾದರೂ ತನ್ನ ಇಲಾಖೆ ಬಗ್ಗೆ ಉತ್ತರ ಕೊಡುವಂಥ ಕಾಲದಲ್ಲಿ, ಈಗಾಗಲೇ ನಿಮ್ಮ ಆಡಳಿತಾವಧಿ ಮೂರೂವರೆ ವರ್ಷ ಕಳೆಯುತ್ತಾ ಬಂದಿದ್ದು ಇನ್ನೂ ಒಂದೂವರೆ ವರ್ಷ ಮಾತ್ರ ಉಳಿದಿದೆ. ಕಳೆದ ವರ್ಷಗಳಲ್ಲಿ ಬೇಕಾದ ಸವಲತ್ತುಗಳಿಗೆ ಹಣವನ್ನು ತೆಗೆದಿಡುವುದಕ್ಕಾಗಲಿಲ್ಲ, ಜಾನುವಾರುಗಳ ಸಂಖ್ಯೆ ಜಾಸ್ತಿ ಇರುವಂಥ ಈ ಕಾಲದಲ್ಲಿ ಮತ್ತು ಔಷಧಿಗಳ ಬೆಲೆ ದುಪ್ಪಟ್ಟು ಜಾಸ್ತಿ ಇರುವ ಕಾಲದಲ್ಲಿ ನಾನು ನನ್ನ ಇಲಾಖೆಯಲ್ಲಿ ಹೋರಾಟ ಮಾಡಿ ನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ಜಾಸ್ತಿ ತಂದಿದ್ದೇನೆ ಎನ್ನುವಂಥ ಈ ತರಹದ ಏನಾದರೊಂದು ಕಾರ್ಯಕ್ರಮವನ್ನು ಘೋಷಣೆ ಮಾಡಬೇಕು. ಇಲ್ಲದಿದ್ದರೆ, ಸುಮ್ಮನೆ ಹರಿಕಥೆ ಹೇಳಿದಂತಾಗುತ್ತದೆ. ನೀವು ಇನ್ನೂ ತರುಣರಿದ್ದೀರಿ, ಹೋರಾಟ ಮಾಡುತ್ತಿದ್ದೀರಿ, ನೀವು ಈ ದಿಸೆಯಲ್ಲಿ ಹಣಕಾಸು ಮಂತ್ರಿಗಳ ಜೊತೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಇಂತಹ ಪ್ರಮುಖ ಇಲಾಖೆಗೆ ಜಾಸ್ತಿ ಹಣ ಒದಗಿಸಿಕೊಡಬೇಕು, ಗ್ರಾಮೀಣ ರೈತರಿಗೆ ಅನುಕೂಲ ಮಾಡಿಕೊಡಬೇಕು, ಇದಕ್ಕೆ ನಾವು ಸಹಕಾರ ಕೊಡುತ್ತೇವೆ. ಇಲ್ಲದಿದ್ದರೆ, ಏನಾಗುತ್ತದೆಂದರೆ, ಯಾವುದೋ ಅಗತ್ಯವಿರದ ಇಲಾಖೆಯಲ್ಲಿ ಹಣ ಖರ್ಚಾಗಿ, ಅಗತ್ಯವಿರುವ ಇಲಾಖೆಯಲ್ಲಿ ಖರ್ಚಾಗುವುದಿಲ್ಲ. ಇವೊತ್ತು ರೈತ ಜಾನುವಾರುಗಳನ್ನು ಉಳಿಸಿಕೊಳ್ಳುವುದಕ್ಕಾಗದಿರುವ ಧಾರುಣ ಸ್ಥಿತಿಗೆ ಸಿಲುಕಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ ಏನಾದರೊಂದು ಸುಧಾರಣೆ ತರಬೇಡವೇ? ನಿಮ್ಮ ಇಲಾಖೆಯಲ್ಲಿ ಏನಾದರೂ

ಕಾರ್ಯಕ್ರಮ ಘೋಷಿಸಬೇಡವೇ? ಇದರ ಬಗ್ಗೆ ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ, ದಯಮಾಡಿ ತಾವು ಇದರ ಬಗ್ಗೆ ಚಿಂತನೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಮಗೆ ಎಂತಹ ರೋಗ ಬಂದಿದೆಯೆಂದು ಮನುಷ್ಯ ಮಾತನಾಡಬಹುದು. ಆದರೆ, ಮೂಕ ಪ್ರಾಣಿಗಳು ಏನು ಹೇಳುತ್ತವೆ? ಆದುದರಿಂದ, ಇದರ ಬಗ್ಗೆ ಪ್ರಾಮಾಣಿಕ ಚಿಂತನೆಯಾಗಬೇಕು. ಅವರು ಹೇಳುವುದು ನೋಡಿದರೆ ನಮಗೆ ನೋವಾಗುತ್ತದೆ. ಕನಿಷ್ಠ ಐವತ್ತು ಭಾಗದಷ್ಟು ಹಣವನ್ನಾದರೂ ಒದಗಿಸಬೇಡವೇ?

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಎಲ್ಲಾ ಹಿರಿಯ ಮುಖಂಡರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅದು ನನ್ನ ಗಮನದಲ್ಲೂ ಕೂಡ ಇದೆ. ಈಗಾಗಲೇ ಮಾನ್ಯ ಉಪಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದು, ಹೆಚ್ಚು ಹಣ ಒದಗಿಸುವುದರ ಬಗ್ಗೆ ಇನ್ನೊಮ್ಮೆ ಅವರೊಂದಿಗೆ ಮಾತನಾಡಿ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸುವುದರ ಮೂಲಕ ಮೂಕ ಪ್ರಾಣಿಗಳ ಬಗ್ಗೆ ಬಹುಶಃ ನಾನು ಮುಂದೆ ಹೇಳುವವನಿದ್ದೇನೆ. ಪಶು ಚಿಕಿತ್ಸಾ ಔಷಧಿಗಳನ್ನು ರಾಜ್ಯ ಮಟ್ಟದಲ್ಲಿ ಕೊಳ್ಳತಕ್ಕಂಥಾದ್ದು ಅಲ್ಲದೆ ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳಲ್ಲೂ ಸ್ವಲ್ಪ ಮಟ್ಟಿಗೆ ಕೊಂಡು ಸಮಸ್ಯೆಗಳನ್ನು ನಿವಾರಿಸುವುದಕ್ಕೆ ಪ್ರಯತ್ನ ನಡೆದಿದೆ. ಅದೇ ರೀತಿ ಕುರಿ ಅಭಿವೃದ್ಧಿ ಮಂಡಳಿಗೂ ಹಣ ಒದಗಿಸಿಕೊಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೇಂಟೆನೆನ್ಸ್ ಆಫ್ ಅನಿಮಲ್ಸ್ ಬರೀ ನಿಮ್ಮ ಕೈಯಲ್ಲಿಲ್ಲ; ಇದನ್ನು ಕೆ.ಎಂ.ಎಫ್.ನವರು, ಕುರಿ ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾಪಂಚಾಯಿತಿಯವರು ಮಾಡುತ್ತಿದ್ದಾರೆ. ನೀವು ಅದನ್ನೆಲ್ಲಾ ಒಟ್ಟಿಗೆ ಸೇರಿಸಿ ಇಲ್ಲಿ ಹೇಳಬೇಕು. ಮೆಜಾರಿಟಿ 60 ಪರ್ಸೆಂಟ್ ಆಫ್ ದಿ ಕ್ಯಾಟಲ್ ಈಸ್ ಕವರ್ಡ್ ಬೈ ಕೆ.ಎಂ.ಎಫ್ ಅಲ್ಲಿಯೂ ಮೇಂಟೆನೆನ್ಸ್‌ಗೆ ಮತ್ತು ಟ್ರೀಟ್‌ಮೆಂಟ್‌ಗಾಗಿ ಖರ್ಚು ಮಾಡುತ್ತಿದ್ದಾರೆ. ಅದನ್ನೆಲ್ಲವನ್ನೂ ಸೇರಿಸಿ ಒಟ್ಟಾಗಿ ಹೇಳಿದರೆ ಇಷ್ಟೊಂದು ಮೀಗರ್ ಅಮೌಂಟ್ ಎಂದು ಅನ್ನಿಸುವುದಿಲ್ಲ. ಸ್ವಲ್ಪ ದಯವಿಟ್ಟು ಬಿಡಿಸಿ ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ : ನಾನು ಅದರ ಬಗ್ಗೆಯೇ ಹೇಳುವವನಿದ್ದೆ. ನಾವು ರಾಜ್ಯ ಮಟ್ಟದಲ್ಲಿ ನೇರವಾಗಿ ಕೊಳ್ಳುತ್ತಿದ್ದು, ಇದಕ್ಕಾಗಿ ಯೋಜನೆಯಲ್ಲಿ 443 ಲಕ್ಷ ರೂಪಾಯಿಗಳನ್ನಿಡಲಾಗಿದೆ. ಅಲ್ಲದೆ, ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಇವೊತ್ತು ಸುಮಾರು 10 ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆ. ಕುರಿ ಅಭಿವೃದ್ಧಿ ಮಂಡಳಿಗೆ ಮೂರು ಕೋಟಿ ರೂಪಾಯಿಗಳಷ್ಟು ಒದಗಿಸಿಕೊಟ್ಟಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣ ಒದಗಿಸಿಕೊಡುವ ಕೆಲಸ ಮಾಡಿದ್ದೇವೆ. ನಾನು ಈಗಾಗಲೇ ಹಣಕಾಸು ಸಚಿವರ ಜೊತೆ ಎರಡು ಸಲ ಮಾತನಾಡಿದ್ದು, ಇನ್ನು ಹೆಚ್ಚು ಹಣ ಒದಗಿಸಿಕೊಡುವ ಬಗ್ಗೆ ಒತ್ತಾಯ ತಂದಿದ್ದೇನೆಂದು ಹೇಳುತ್ತಾ ಪಶುಪಾಲನಾ ಇಲಾಖೆಯಲ್ಲಿನ ಕಾರ್ಯ ಚಟುವಟಿಕೆಗಳನ್ನು ತಾವು ನೋಡುತ್ತಾ ಬಂದಿದ್ದೀರಿ; ವಿಶಾಲ ತಳಹದಿಯ ಮೇಲೆ ಹನ್ನೊಂದು ಭಾಗಗಳನ್ನಾಗಿ ವಿಂಗಡಿಸಿ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ನಾನು ಈಗಾಗಲೇ ಹೇಳಿರುವಂತೆ ರಾಜ್ಯದಲ್ಲಿ ಸುಮಾರು ಎರಡೂವರೆ ಕೋಟಿ

ಸಂಖ್ಯೆಯಷ್ಟು ಜಾನುವಾರುಗಳಿದ್ದು ಒಂದೂವರೆ ಕೋಟಿಯಷ್ಟು ಕೋಳಿಗಳ ಸಂಖ್ಯೆ ಇವೆ. ಅವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ 3,638 ಸಂಸ್ಥೆಗಳು ಕೆಲಸ ಮಾಡುತ್ತಿದ್ದು, ರಾಜ್ಯದಲ್ಲಿ 11 ಜಾನುವಾರು ಕ್ಷೇತ್ರಗಳಿದ್ದು ಅವುಗಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ನಾನು ಎರಡು ಪ್ರಮುಖ ವಿಚಾರಗಳ ಬಗ್ಗೆ ಹೇಳಬೇಕಾಗುತ್ತದೆ. ಹಾಲು ಕೊಡತಕ್ಕಂಥ ಮಿಶ್ರ ತಳಿ ಹಸುಗಳ ಅಭಿವೃದ್ಧಿಗಾಗಿ ವೀರ್ಯ ಸಂಕಲನ ಕೇಂದ್ರಗಳನ್ನು ಸ್ಥಾಪಿಸುವುದು. ರಾಜ್ಯದಲ್ಲಿ ಒಟ್ಟು ಐದು ತಳಿಗಳ ಹಸುಗಳಿದ್ದು, ಅವು ಅಮೃತ ಮಹಲ್, ಹಳ್ಳಿಕಾರ್, ಕಿಲಾರಿ, ಜವಣಿ ಮತ್ತು ಕೃಷ್ಣ ವ್ಯಾಲಿ, ಇದ್ದು, ಈ ತಳಿಗಳನ್ನು ಜಾನುವಾರು ಕ್ಷೇತ್ರಗಳಲ್ಲಿ ಸಾಕುವುದಷ್ಟೇ ಅಲ್ಲದೆ ಇವುಗಳ ಅಭಿವೃದ್ಧಿಗಾಗಿ ಧಾರವಾಡ, ಮುನಿರಾಬಾದ್, ಹೆಸರಘಟ್ಟ ಮತ್ತು ಹೆಬ್ಬಾಳದಲ್ಲಿ ನಾಲ್ಕು ಘನೀಕೃತ ವೀರ್ಯ ಕೇಂದ್ರಗಳನ್ನು ತೆರೆದಿದ್ದೇವೆ. ಸದರಿ ನಾಲ್ಕು ಕೇಂದ್ರಗಳಲ್ಲಿ ಇವುಗಳ ವೀರ್ಯ ಸಂಕಲನ ಮಾಡಿ ನಂತರ ಅದನ್ನು ಘನೀಕೃತಗೊಳಿಸುತ್ತೇವೆ. ಉದಾಹರಣೆಗೆ, ಅಮೃತ ಮಹಲ್ ತಳಿ ಆರು ಜಿಲ್ಲೆಗಳಲ್ಲಿವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಈ ತಳಿಗಳು ಹಳ್ಳಿಗಳಲ್ಲಿ ನಾಶವಾಗುತ್ತಿರುವುದರಿಂದ ಇವುಗಳನ್ನು ಉಳಿಸಿ ಬೆಳೆಸುವುದಕ್ಕೆ ಸರ್ಕಾರದಿಂದ ಯಾವ್ಯಾವ ತರಹದ ಫಾರ್ಮ್‌ಗಳನ್ನು ತಾವು ಮಾಡಿದ್ದೀರೆಂಬುದನ್ನು ಹೇಳಬೇಕು.

ಶ್ರೀ ಬಿ.ಬಿ. ನಿಂಗಯ್ಯ : ಅಮೃತ ಮಹಲ್ ತಳಿ ಕರ್ನಾಟಕದಲ್ಲಿ ಮಹಾರಾಜರ ಕಾಲದಿಂದಲೂ ಇದೆ, ಆದರೆ, ಸುಮಾರು ನಾಲ್ಕು ನೂರು ವರ್ಷಗಳಷ್ಟು ಇತಿಹಾಸವಿದೆ. ತಮಗೆ ಗೊತ್ತಿರುವಂತೆ, ತಾವು ಮೈಸೂರು ಜಿಲ್ಲೆಯ ಭಾಗದಿಂದ ಬಂದವರಾಗಿದ್ದು ಹಿಂದಿನಿಂದಲೂ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಬೆಣ್ಣೆ ಚಾವಡಿ ಎಂದು ಮಾಡಿಕೊಂಡು ಬರಲಾಗುತ್ತಿದ್ದು, ಈಗ ಅದು 55 ಸಾವಿರಕ್ಕೆ ಇಳಿದಿದೆ, ಅದೇ ರೀತಿ ಅಮೃತ ಮಹಲ್ ಕಾವಲು ಎಂದು ಐದು ಲಕ್ಷ ಎಕರೆಗಳಷ್ಟು ಜಾನುವಾರು ಕ್ಷೇತ್ರವಿದ್ದು, ಇವೊತ್ತು 55 ಸಾವಿರ ಎಕರೆಯಷ್ಟಾಗಿದೆ. ವಿಶೇಷವಾಗಿ ಅಜ್ಜಂಪುರದಲ್ಲಿ ಬಹಳಷ್ಟು ವರ್ಷಗಳಿಂದ ಸದರಿ ತಳಿಯ ಅಭಿವೃದ್ಧಿಗಾಗಿ ನಾವು ಕಾರ್ಯಕ್ರಮ ಹಾಕಿಕೊಂಡು ಬರುತ್ತಿದ್ದೇವೆ, ಇದನ್ನು ಆರು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಇಷ್ಟೇ ಅಲ್ಲದೆ, ಈ ತಳಿಯನ್ನು ಉಳಿಸುವ ದೃಷ್ಟಿಯಿಂದಲೂ ರಾಜ್ಯದಲ್ಲಿ ಇವೊತ್ತು ಕಾರ್ಯಕ್ರಮ ಹಮ್ಮಿಕೊಂಡು ಮಾಡುತ್ತಿದ್ದೇವೆ. ಇನ್ನು ಕಿಲಾರಿ, ಹಳ್ಳಿಕಾರ್, ಜವಣಿ ತಳಿಗಳು ಎಲ್ಲೆಲ್ಲಿ ಇವೆಯೋ ಪ್ರತಿ ತಳಿಯಿಂದ 25 ಡೋಸ್‌ನಷ್ಟು ಸೆಮೆನ್‌ಅನ್ನು ಲಕ್ಷದಷ್ಟು ಪಮಾಣದಲ್ಲಿ ಎಲ್ಲಾ ತಳಿಗಳಿಂದ ಅಂದರೆ ರಾಜ್ಯಾದ್ಯಂತ ಇರುವ 3,638 ಸಂಸ್ಥೆಗಳಿಂದಲೂ ಸಂಗ್ರಹಿಸಿ ಸದರಿ ತಳಿಗಳನ್ನು ಅಭಿವೃದ್ಧಿಪಡಿಸಲು ಸಂಪೂರ್ಣ ಕಾರ್ಯಕ್ರಮ ಹಮ್ಮಿ ಕೊಂಡಿದ್ದೇವೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಜವಣಿ ತಳಿಯ ಹಸು ಹೆಚ್ಚು ಪ್ರಮಾಣದಲ್ಲಿ ಹಾಲು ಕೊಡುವಂಥದ್ದಾಗಿದ್ದು, ಈ ತಳಿಯ ಬೇಡಿಕೆ ರಾಜ್ಯದಲ್ಲಿ ಸಾಕಷ್ಟಿರುವುದರಿಂದ, ಇದನ್ನು ಕ್ರಾಸ್‌ಬ್ರೀಡ್ ಮಾಡಿಕೊಡುವಂಥ ಕಾರ್ಯ ನಡೆದಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ : ಆ ತಳಿ ಧಾರವಾಡ ಜಿಲ್ಲೆ ಮತ್ತು ಮಹಾರಾಷ್ಟ್ರದ ಗಡಿ ಭಾಗಗಳಲ್ಲಿ ಸಿಗುತ್ತದಾದ್ದರಿಂದ ಅದರ ಬಗ್ಗೆಯೂ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ತಮಗೆ ಗೊತ್ತಿರುವಂತೆ ಧಾರವಾಡದಲ್ಲಿ ಘನೀಕೃತ ವೀರ್ಯ ಕೇಂದ್ರದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡು ಮಾಡುತ್ತಿದ್ದು ಇದನ್ನು ಇನ್ನಷ್ಟು ಬಲಗೊಳಿಸುವ ದೃಷ್ಟಿಯಿಂದ ಇವೊತ್ತು ರಾಜ್ಯಾದ್ಯಂತ ಇರುವ ನಾಲ್ಕು ವೀರ್ಯ ಸಂಕಲನ ಕೇಂದ್ರಗಳನ್ನು ಉನ್ನತೀಕರಣಗೊಳಿಸುವುದಕ್ಕೆ ಎನ್.ಡಿ.ಡಿ.ಬಿಯನ್ನು ಕೇಳಿಕೊಂಡಿದ್ದೇವೆ. ಕಳೆದ ಬಾರಿ ಇದನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಒಂದು ಷರತ್ತಿನ ಮೇಲೆ ಸುಮಾರು 372 ಲಕ್ಷ 55 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆ. ಘನೀಕೃತ ವೀರ್ಯವನ್ನು ಕೃತಕ ಗರ್ಭಧಾರಣೆ ಮೂಲಕ ಮಾಡುವಾಗ ಶುಲ್ಕ ವಿಧಿಸಬೇಕೆಂಬ ಒಂದು ಷರತ್ತು ಹಾಕಿದ್ದರಿಂದ ಈ ಬಗ್ಗೆ ನಾವು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ಪ್ರತಿ ಕೃತಕ ಗರ್ಭಧಾರಣೆಗೆ ಐದು ರೂಪಾಯಿಗಳಂತೆ ಶುಲ್ಕ ವಿಧಿಸುವ ಕುರಿತು ತೀರ್ಮಾನ ಮಾಡಿದ ನಂತರ ಎನ್.ಡಿ.ಡಿ.ಬಿ.ಯಿಂದ ಮಂಜೂರಾತಿ ಪಡೆದುಕೊಂಡು ಇವೊತ್ತು ರಾಜ್ಯದಲ್ಲಿರುವ ನಾಲ್ಕು ಘನೀಕೃತ ವೀರ್ಯ ಸಂಕಲನ ಕೇಂದ್ರಗಳನ್ನು ಉನ್ನತಿಕರಿಸಿ ಟಿ.ಎಂ.ಡಿ.ಡಿ (ಟೆಕ್ನಾಲಜಿ ಮಿಷನ್ ಫಾರ್ ಡೈರಿ ಡೆವಲಪ್‌ಮೆಂಟ್) ಕಾರ್ಯಕ್ರಮದಡಿಯಲ್ಲಿ ಯೋಜನೆ ಹಮ್ಮಿಕೊಂಡು ಟರ್ನ್‌ಕೀ ಬೇಸಿಸ್ ಮೇಲೆ ಕೆಲಸ ನಡೆಯುತ್ತಿದೆ. ಬಹಳಷ್ಟು ಜನ ಸ್ನೇಹಿತರು ಮಾತನಾಡುತ್ತಾ, ರಾಜ್ಯದ ಬಹಳಷ್ಟು ಕಡೆಗಳಲ್ಲಿ ಸರಿಯಾಗಿ ಕೃತಕ ಗರ್ಭಧಾರಣೆಯಾಗುತ್ತಿಲ್ಲ, ಕೇಂದ್ರಗಳನ್ನು ಉನ್ನತೀಕರಿಸಿಲ್ಲವೆಂದಿದಾರೆ. ಇದರ ಬಗ್ಗೆ ನಾವು ರಾಜ್ಯದಲ್ಲಿ ಕಾರ್ಯಕ್ರಮ ಹಮ್ಮಿಕೊಂಡು ಇನ್ನು ಮುಂದೆ ಹೆಚ್ಚು ಅರ್ಥಪೂರ್ಣವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಇವೊತ್ತು ಇಲಾಖೆಯ ಕಾರ್ಯ ಚಟುವಟಿಕೆಗಳಿಗನುಗುಣವಾಗಿ 11 ವಿಭಾಗಗಳನ್ನು ಮಾಡುವ ಬಗ್ಗೆ ಹೇಳಿದ್ದೇನೆ. ಇನ್ನು ಕುರಿ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಕುರಿ ಸಾಕಾಣಿಕೆ ಇವೊತ್ತು ರಾಜ್ಯದಲ್ಲಿ ಉತ್ತಮವಾದ ಉದ್ಯಮವಾಗಿದ್ದು ಕುರಿಗಳನ್ನು ಸಾಕುವ ಬಹಳಷ್ಟು ರೈತರಿಗೆ ಸದರಿ ಉದ್ಯಮ ಲಾಭದಾಯಕವಾಗಿದೆ. ರಾಜ್ಯದಲ್ಲಿ ಇವೊತ್ತು ಆರು ಕುರಿ ಅಭಿವೃದ್ಧಿ ಕ್ಷೇತ್ರಗಳನ್ನು ಕಾಣಬಹುದು. ಇವತ್ತು ಹನಗೂರು ಇರಬಹುದು ಅಥವಾ ಇಲ್ಲಿಯೇ ಇರುವ ದನಗೂರು ಅನಗವಾಡಿ, ಕುರಿಕುಪ್ಪೆ, ಗುತ್ತಲ ಹಾಗೂ ಸುತ್ತಟ್ಟಿ ಇಲ್ಲಿ ಈ ಕುರಿ ಸಾಕಾಣಿಕೆ ಕ್ಷೇತ್ರಗಳನ್ನು ನಾವೇನು ಮಾಡಿದ್ದೇವೆ, ಅದರಲ್ಲಿ ಸುತ್ತಟ್ಟಿ ಮತ್ತು ಗುತ್ತಲ ಇವೆರಡು ಕಡೆಗೆ ಇವತ್ತು ಈ ಕುರಿ ಮಂಡಳಿಗೆ ಇದನ್ನು ವಹಿಸಿದ್ದೇವೆ. ಅದೆಲ್ಲದರ ಮೂಲಕ ಸಾಕಷ್ಟು ಇವತ್ತು ಈ ಕುರಿ ಸಾಕಾಣೆದಾರರಿಗೆ ಒಂದು ತರಬೇತಿ ಮತ್ತು ತಿಳಿವಳಿಕೆಯನ್ನು ಕೊಡುವುದು ಅಷ್ಟೇ ಅಲ್ಲದೆ ಸುಮಾರು ಈ ರಾಜ್ಯದಲ್ಲಿ 47.27 ಕುರಿಗಳಿದ್ದು ನಮ್ಮ ರಾಷ್ಟ್ರದಲ್ಲಿ ಸುಮಾರು 400 ಟನ್‌ನಷ್ಟು ಇದರಿಂದ ಉಣ್ಣೆ ಉತ್ಪಾದನೆಯಾಗುತ್ತದೆ. ಇದರ ಒಂದು ಸ್ಥಾನಮಾನ ಈ ರಾಷ್ಟ್ರದಲ್ಲಿ ನಮ್ಮ ಕುರಿ ಸಾಕಾಣಿಕೆ ಇದ್ದು ವರ್ಷಕ್ಕೆ ಸುಮಾರು 300 ಕೋಟಿ ರೂಪಾಯಿಯಷ್ಟು ಮೊತ್ತದ ಚರ್ಮದ ಉಡುಪನ್ನು ರಫ್ತು ಮಾಡಿರುವ ಬಗ್ಗೆ ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ಇದರ ಕಾರ್ಯ ಚಟುವಟಿಕೆಗಾಗಿ ಪ್ರತಿ ವರ್ಷ ನಾವು 300 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇವತ್ತು ಇಡೀ ರಾಜ್ಯದಲ್ಲಿ 200 ಕುರಿ ಸಾಕಾಣಿಕೆ ಸಹಕಾರ ಸಂಘಗಳನ್ನು

ತೆರೆಯಬೇಕು ಎನ್ನುವ ಯೋಜನೆಯನ್ನು ಹಾಕಿಕೊಂಡು ಈಗಾಗಲೇ 60 ಸಹಕಾರ ಸಂಘಗಳು ಈ ರಾಜ್ಯದಲ್ಲಿ ನೊಂದಾಣಿಯಾಗಿದ್ದು ಇಡೀ ರೈತರು ಬೆಳೆಯುವ ಕುರಿಗಳು ಏನು ಇದ್ದಾವೆ, ಉಣ್ಣೆ ಏನು ಇದೆ, ಅವರಿಗೆ ಮಾರುಕಟ್ಟೆ ಒದಗಿಸುವುದು, ಅವರಿಗೆ ತರಬೇತಿ ಕೊಡುವ ಎಲ್ಲಾ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಜೊತೆ ಹಂದಿ ಸಾಕಾಣಿಕೆ, ಈ ರಾಜ್ಯದಲ್ಲಿ ಸುಮಾರು 3.03 ಲಕ್ಷ ಹಂದಿಗಳು ಇದ್ದು ಅವುಗಳನ್ನು ಮೂರು ಭಾಗಗಳನ್ನಾಗಿ ಮಾಡಬಹುದು. ಸ್ಥಳೀಯ ಹಂದಿಗಳು, ವಿದೇಶಿತಳಿ ಹಂದಿಗಳು ಮತ್ತು ದೇಶಿ ಮಿಶ್ರತಳಿ ಹಂದಿಗಳು. ಇವುಗಳು ಸುಮಾರು 370 ಸಣ್ಣ ಮತ್ತು ಮಧ್ಯಮ ಹಾಗೂ ಬೃಹತ್ ಹಂದಿ ಸಾಕಾಣಿಕೆ ಕೇಂದ್ರಗಳು ಈ ರಾಜ್ಯದಲ್ಲಿವೆ. ಇದಕ್ಕಾಗಿ ನಾವು ಮೂರು ಕೇಂದ್ರಗಳನ್ನು ಮಾಡಿದ್ದೇವೆ. ಒಂದು ಹೆಸರಘಟ್ಟದಲ್ಲಿದೆ. ಕೊಯಿಲಾದಲ್ಲಿದೆ ಮತ್ತು ಮೂರನೆಯದು ಕೊಡಗಿನಲ್ಲಿದೆ. ಇವುಗಳು ಹೆಚ್ಚು ಕೆಲಸ ಮಾಡುತ್ತಿದ್ದು ಹಂದಿಯ ಸಾಕಾಣಿಕೆಯ ಬಗ್ಗೆ ರಾಜ್ಯ ಮಟ್ಟದಲ್ಲಿ ಸಹಕಾರ ಸಂಘವನ್ನು ಮಾಡಿ ಮಾರಾಟಕ್ಕೆಲ್ಲ ನಾವು ಸಿದ್ಧ ಮಾಡಿದ್ದೇವೆ.

ಅಧ್ಯಕ್ಷರು : ಇದರಲಿ ವಿದೇಶಿ ತಳಿ ಯಾರ್ಕ್‌ಷೈರಾ?

ಶ್ರೀ ಬಿ.ಬಿ. ನಿಂಗಯ್ಯ : ನಾವು ಇಲ್ಲಿ ಯಾರ್ಕ್‌ಷೈರ್ ಹಂದಿಯನ್ನು ಸಾಮಾನ್ಯವಾಗಿ ಬಳಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಪಟ್ಟಣಗಳಲ್ಲಿ ಹಂದಿ ಸಾಕುವವರು ಇದ್ದಾರೆ. ಅವರು ಬಡವರು ಮತ್ತು ಬಹಳ ಹಿಂದುಳಿದಿರುವ ಜನ. ಆದರೆ ಪಟ್ಟಣಗಳಲ್ಲಿ ಅಂದರೆ ನಗರ ಪ್ರದೇಶದಲ್ಲಿ ಅವು ತುಂಬಾ ಕೊಳಚೆ ಮಾಡುತ್ತವೆ. ಮತ್ತು ಅದರಿಂದಾಗಿ ಕೆಲವು ರೋಗ ಬರುತ್ತದೆ ಎನ್ನುವ ದೂರುಗಳು ಬಂದಿವೆ. ಇದರಿಂದಾಗಿ ಅಲ್ಲಿ ಪುರಸಭೆಯವರು ಹಂದಿಗಳನ್ನು ಕೊಲ್ಲುವ ಕಾರ್ಯಕ್ರಮವನ್ನು ಮಾಡುತ್ತಾರೆ. ಇವತ್ತು ಹಂದಿಯ ಪ್ರಾಮುಖ್ಯತೆ ಜಾಸ್ತಿಯಾಗುತ್ತಿದೆ. ಕುರಿ ಮಾಂಸ ಯಾವಾಗ ದುಬಾರಿಯಾಯಿತೋ ಇವತ್ತು ಈ ಹಂದಿ ಮಾಂಸವನ್ನು ಬೇರೆಯವರೂ ಕೂಡ ಉಪಯೋಗ ಮಾಡುವ ಪರಿಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ. ಆದ್ದರಿಂದ ನಗರಪ್ರದೇಶಗಳಲ್ಲಿ ಯಾರ್ಯಾರು ಹಂದಿ ಸಾಕುವವರು ಇದ್ದಾರೆ, ಅವರಿಗೆ ಆ ನಗರ ಪ್ರದೇಶದ ಆಜುಬಾಜಿನಲ್ಲಿ ಅವರಿಗೆ ಒಂದು ಹಂದಿ ಸಾಕಾಣಿಕೆಗೆ ಕೆಲವು ನಿವೇಶನಗಳನ್ನು ಕೊಟ್ಟು ಅವರಿಗೆ ತಾವು ತರಬೇತಿಯನ್ನು ಕೊಡಬೇಕು. ನಮ್ಮ ಕೋಲಾರದ ಕಡೆಗೆ ಹೋದರೆ ನಮ್ಮ ಬೈರೇಗೌಡರ ಕ್ಷೇತ್ರದಲ್ಲಿ ಹಂದಿಯನ್ನು ಸಾಕುತ್ತಾರೆ ಗೋಡೆಯನ್ನು ಕಟ್ಟಿ ನಮ್ಮ ಬಚ್ಚೇಗೌಡರಿಗೆ ಚೆನ್ನಾಗಿ ಗೊತ್ತಿದೆ. ಆ ರೀತಿ 20,30,40, ಹಂದಿಗಳನ್ನು ಸಾಕುವುದಕ್ಕೆ ಬೇಕಾದ ತರಬೇತಿಯನ್ನು ಕೊಡಿ. ಅವರು ಬಹಳ ಬಡವರು ಇದ್ದಾರೆ. ಅವುಗಳನ್ನೇ ಸಾಕಿಕೊಂಡು ಜೀವನ ಮಾಡುತ್ತಾರೆ. ದಯವಿಟ್ಟು ಅವರಿಗೆ ನಿವೇಶನವನ್ನು ಕೊಟ್ಟು ಆ ಹಂದಿ ಸಾಕುವುದಕ್ಕೆ ಅವರಿಗೆ ಪ್ರೋತ್ಸಾಹ ಕೊಡುವ ಒಂದು ವಿಶೇಷ ಕಾರ್ಯಕ್ರಮವನ್ನು ಮಾಡಿ. ನಮ್ಮ ಜಯಕುಮಾರ್‌ರವರು ಹೇಳಿದ ಹಾಗೆ ಮನೆಯ ಹತ್ತಿರ ತೋಟ ಮಾಡಿದರೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು, ಹಾಗೆಯೆ ಅವರಿಗೂ

ಸಬ್ಸಿಡಿಯನ್ನು ಕೊಟ್ಟು ಅದನ್ನು ಹಿಂದುಳಿದ ಅಭಿವೃದ್ಧಿ ನಿಗಮದಿಂದಲಾದರೂ ಕೊಡಿಸಿ. ಅಥವಾ ಹರಿಜನ ಗಿರಿಜನ ನಿಗಮದಿಂದಲಾದರೂ ಕೊಡಿ. ಬೇರೆಯವರು ಆದರೆ ಬೇರೆ ಯಾವ ರೂಪದಲ್ಲಾದರೂ ಕೊಡಿಸಿ. ಅವರಿಗೆ ಸಬ್ಸಿಡಿಯನ್ನು ಕೊಟ್ಟು ನೀವು ವ್ಯಾಪಕ ಪ್ರಮಾಣದಲ್ಲಿ ಹಂದಿ ಸಾಕುವುದಕ್ಕೆ ಮಾಡಿ. ಆ ಬಡವರನ್ನೂ ರಕ್ಷಣೆ ಮಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮ್ಮ ಕ್ಷೇತ್ರದಲ್ಲಿ ಕೆಂಪಾಬುದಿ ಕೆರೆ ಹತ್ತಿರ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಮೊನ್ನೆ ನಮ್ಮ ಶಿವಮೊಗ್ಗದಲ್ಲಿ ಹಂದಿ ಹೊಡೆಯುವ ಗಲಾಟೆಯಲ್ಲಿ ಸಾಗರದಿಂದ ಒಬ್ಬನು ಬಂದು ಅವನಿಗೆ ಗುಂಡು ತಾಗಿ ಅವನು ಪಾಪ, ಬದುಕಿ ಉಳಿದ. ದಯವಿಟ್ಟು ಇದೊಂದು ಕೆಲಸವನ್ನು ಮಾಡಿ. ಈ ಕುರಿಯನ್ನು ಸಾಕುವವರು ಇದ್ದಾರಲ್ಲಾ, ಅವರು ಊರೆಲ್ಲಾ ತಿರುಗುತ್ತಾರೆ, ಕಾಡೆಲ್ಲಾ ತಿರುಗುತ್ತವೆ, ಅವು ಎಲ್ಲಿ ಹೋಗುತ್ತವೆ ಅಲ್ಲಿಯೇ ಮಲಗುತ್ತಾರೆ, ಅವರಿಗೆ ಏನಾದರೂ ಸಹಾಯ ಮಾಡಬೇಕು. ಅವರು ಎಂದೋ ತೆಗೆದುಕೊಂಡಿರುವ ಚಪ್ಪಲಿ. ಅವರು ಓಡಾಡಿ ಓಡಾಡಿ ಆ ಚಪ್ಪಲಿಗೆದಾರ ಕಟ್ಟಿ ಅವರನ್ನು ನೋಡುವುದಕ್ಕಾಗುವುದಿಲ್ಲ. ಅದಕ್ಕೆ ಕುರಿ ಕಾಯುವ ಜನರು ಎಲ್ಲೆಲ್ಲಿ ಇದ್ದಾರೆ, ಅವರೆಲ್ಲ ಬಡವರು. ಹಿಂದುಳಿದಿರುವವರು ಅವರಿಗೆ ದಯವಿಟ್ಟು ಒಂದು ಸೋಷಿಯಲ್ ಸೆಕ್ಯುರಿಟಿ; ಅವರು ಇನ್ನೊಬ್ಬರ ಕುರಿಯನ್ನು ಕಾಯುತ್ತಾರೆ. ಅವರು ಅಲ್ಲಿಯೇ ಊಟ ಮಾಡುವುದು, ಅಲ್ಲಿಯೇ ಮಲಗುವುದು, ಮುಂದೆ ಹೋಗುವುದು, ಇದು ನಡೆಯುತ್ತದೆ. ಇವರು ಒಂದು ರೀತಿ ಅಲೆಮಾರಿ ಇದ್ದಂತೆ. ಕುರಿ ಕಾಯುವವರನ್ನು ದಯವಿಟ್ಟು ಗುರುತಿಸಿ ಬೇರೆ ಏನೆಲ್ಲಾ ಮಾಡದಿದ್ದರೂ ಚಿಂತೆಯಿಲ್ಲ. ಅವರನ್ನು ಗುರುತಿಸಿ ಅವರಿಗೆ ಸೋಷಿಯಲ್ ಸೆಕ್ಯುರಿಟಿಯನ್ನು ಸಾಮಾಜಿಕ ರಕ್ಷಣೆಯನ್ನು ಕೊಡತಕ್ಕಂಥದ್ದು.

ಅಧ್ಯಕ್ಷರು : ಸ್ವಲ್ಪ ಹೆಚ್ಚು ಕಡಿಮೆ ನನ್ನ ಹಾಗೆ ಇರುತ್ತಾರೆ. ಎಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದ ಅವರಿಗೆ ಏನಾದರೂ ಪ್ರೋತ್ಸಾಹ ಕೊಡುವ, ಸಹಾಯ ಮಾಡುವ ಒಂದು ಯೋಜನೆಗಳನ್ನು ನಮ್ಮ ಹಣಕಾನಿಸಿನ ಸಚಿವರು ಇಲ್ಲಿಯೇ ಇದ್ದಾರೆ. ಅವರ ಗಮನಕ್ಕೆ ತರುವುದಾದರೂ ತನ್ನಿ. ಯಾವುದಾದರೂ ಒಂದನ್ನು ಉಳಿಸಿ ದಯವಿಟ್ಟು ಅವರಿಗೆ 100 ರೂಪಾಯಿಯೋ 200 ರೂಪಾಯಿ, 300 ರೂಪಾಯಿಯ ಚಪ್ಪಲಿ ಅವರಿಗೆ ಒಂದು ಕಂಬಳಿ ಏನಾದರೂ ಒಂದನ್ನು ಕೊಡಿ. ಏನಾದರೂ ಇನ್‌ಸೂರೆನ್ಸನ್ನು ಮಾಡುವುದಾದರೆ ಸರ್ಕಾರದಿಂದಲೇ ಪ್ರೀಮಿಯಮ್‌ನ್ನು ಕಟ್ಟಿ ಅವರಿಗೆ ಇನ್‌ಸೂರೆನ್ಸ್ ಮಾಡಿಸಿ ಅವರೇನಾದರೂ ನಿಧನರಾದರೆ ಅವರಿಗೆ ಆ ಹಣ ಬರುವ ರೀತಿಯಲ್ಲಿ ಮಾಡಬೇಕು. ದಯವಿಟ್ಟು ಆ ಕುರಿಯನ್ನು ಸಾಕುವವರು ಇದ್ದಾರಲ್ಲಾ, ಅವರ ಬಗ್ಗೆ ವಿಶೇಷವಾದ ಒಂದು ಆಸ್ಥೆಯನ್ನು ವಹಿಸಿ ಒಂದು ಸಣ್ಣ ಕಾರ್ಯಕ್ರಮವನ್ನಾದರೂ ಮಾಡಿ. ನಮ್ಮ ಜಯಕುಮಾರ್‌ರವರ ಒಂದು ಕಾರ್ಯಕ್ರಮ ನೋಡಿ ನನಗೆ ತುಂಬಾ ಸಂತೋಷವಾಯಿತು. ಆ ರೀತಿ ದಯವಿಟ್ಟು ಮಾಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ತಾವು ಹೇಳಿದಂತೆ ಒಂದು ಸಾರಿ ಊಟಕ್ಕೆ ಸೇರಿದ್ದೆವು. ಒಬ್ಬ ಐಎಎಸ್ ಆಫೀಸರ್ ಹೇಳಿದ್ದು. ನಾನು ಯಾವುದೇ ಜಾತಿಯ ಬಗ್ಗೆ

ಮಾತನಾಡುತ್ತಿಲ್ಲ. ಕುರಿ ಸಾಕುವ ಜಾತಿಗೆ ಸಂಬಂಧಪಟ್ಟಿದ್ದು. ನಮ್ಮನ್ನು ದಡ್ಡರು ಎನ್ನುತ್ತಾರಲ್ಲಾ; ಏಕೆ ಎಂದು ನನ್ನ ಜೊತೆ ಪ್ರಶ್ನೆ ಮಾಡಿದ. ನಾನು ಹೇಳಿದೆ, ಕುರಿ ಸಾಕಾಣಿಕೆ ಮಾಡುವವರು ಯಾರೂ ದಡ್ಡರಲ್ಲ ಎಂದೆ. ಈ ಪ್ರಪಂಚಕ್ಕೆ ಅತ್ಯಂತ ದಡ್ಡ ಪ್ರಾಣಿ ಎಂದರೆ ಕುರಿ. ಆ ಕುರಿಯನ್ನು ಸಾಲಿಗೆ ಹೊಡೆದುಕೊಂಡು ಹೋಗಿ ಸಾಲಿಗೆ ಬರುತ್ತೀರಲ್ಲಾ, ನಿಮಗಿಂತ ಬುದ್ಧಿವಂತರು ಯಾರು ಇಲ್ಲ ಎಂದೆ. ಜೊತೆಗೆ ಸಾವಿರ ಕುರಿಯಲ್ಲಿ ಒಂದು ಕುರಿ ತಪ್ಪಿಸಿಕೊಂಡು ಹೋಗಿ ಬೇರೆ ಕುರಿ ಕಡೆಗೆ ಸೇರಿಕೊಂಡು ಬಿಟ್ಟರೆ ಅದನ್ನು ಗುರುತಿಸಿ ಹಿಡಿದುಕೊಂಡು ಬರುತ್ತಾರೆ. ಇವರಿಗಿಂತ ದೊಡ್ಡ ವಿಜ್ಞಾನಿಗಳು ಯಾರು ಇದ್ದಾರೆ ಎಂದೆ. ಅವನು ಏನು ಎಂದ, ಈ ವಿಷಯ ನನಗೆ ಗೊತ್ತೇ ಇಲ್ಲ ಎಂದು ಹೇಳಿ ಪಕ್ಕದವನಿಗೆ ಹಿಡಿದುಕೊಂಡು ಹೊಡೆದುಬಿಟ್ಟ. ನಾನು ಇಷ್ಟು ಬುದ್ಧಿವಂತ ಎಂದು ನನಗೇ ಗೊತ್ತಿಲ್ಲ ಎಂದ.

ಶ್ರೀ ಎನ್. ರಾಜಣ್ಣ : ಹಂದಿ ಊರುಗಳಿಗೆ ಬಂದು ಕೊಳಚೆ ಎಲ್ಲಾ ತಿಂದು ಹೋಗುತ್ತದೆ. ಆದರೆ ಸನ್ಮಾನ್ಯ ಸದಸ್ಯರು ಹೇಳಿದಂತೆ ಅದರಿಂದ ಖಾಯಲೆ ಬರುವ ಹಾಗಿದ್ದರೆ ಹಂದಿ ಇಟ್ಟಿರುವವನಿಗೆ ಮಾತ್ರ ಏಕೆ ಖಾಯಿಲೆ ಬರುವುದಿಲ್ಲ ಸಾರ್. ಯಾರೋ ಇದನ್ನು ಕ್ರಿಯೇಟ್ ಮಾಡಿ ಅವನು ಬಡವ ಎಂದು ಅವನ ಮೇಲೆ ಹಾಕುತ್ತಿದ್ದಾರೆ ಹಂದಿ ಇಟ್ಟಿರುವವರಿಗೆ ಯಾರಿಗೆ ಆಗಲೀ ಖಾಯಿಲೆ ಬರುವುದಿಲ್ಲ

ಅಧ್ಯಕ್ಷರು : ನಿಂಗಯ್ಯನವರೇ, ನಾನು ಮಧ್ಯೆ ಇಂಟರ್‌ಫಿಯರ್ ಆಗುವುದಿಲ್ಲ. ಇದು ಸುಮಾರು ವರ್ಷಗಳಿಂದ ಹೀಗೆ ಅವರು ಹೇಳಿದ್ದನ್ನೇ ಹೇಳಿಬಿಡುತ್ತೀರಿ. ರ್‍ಯಾಮ್ ಎಂದು ಬಂದಾಗ ಕಾರ್ಡಿಯಲ್, ಫಿಪ್ ಎಂದು ಬಂದಾಗ Catlog Common Corp, ಹಂದಿ ಎಂದು ಬಂದಾಗ ಯಾರ್ಕ್‌ಫೈರ್ ವೆರೈಟಿ. ಇದು ಬಿಟ್ಟು ಬೇರೆ ಏನೂ ಹೇಳಲೇ ಇಲ್ಲ. ಎಷ್ಟೋ ವರ್ಷಗಳಿಂದ ಮುಂದಕ್ಕೆ ಹೋಗಿಲ್ಲ. ಪಿಗ್ಗರಿ ಯಾವ ಮಟ್ಟಕ್ಕೆ ಬೆಳೆಯಬೇಕಾಗಿತ್ತೋ ಯಾವ ಮಟ್ಟಕ್ಕೆ ಜನರಿಗೆ ಅದು ಒಂದು ಉಪಕಸುಬಾಗಬೇಕಾಗಿತ್ತೋ ಆಗಿಲ್ಲ. That is a most profitable activity one can take up. ಅದರ ಕಡೆಗೆ ಗಮನವನ್ನೇ ಕೊಟ್ಟಿಲ್ಲ. ಬೇಕಾದರೆ ವಿಚಾರಿಸಿ ಆ ಇಲಾಖೆಯಲ್ಲಿ ನಾನು ಟೇಬಲ್ ಟು ಟೇಬಲ್ ಎಲ್ಲಾ 10-15 ವರ್ಷದ ಕೆಳಗೆ ಸುತ್ತಿದ್ದೇನೆ. ನಾವು ಸ್ವಲ್ಪ ಅದರಲ್ಲಿ ತೊಡಗಿದ್ದೇವೆ. They are not devoting proper attention to that. It is a very unfortunate thing. ಬೆಂಗಳೂರು ಸುತ್ತಮುತ್ತ ಹೋಟೆಲ್ ವೇಸ್ಟ್ ಸಿಗುತ್ತದೆ, ಯಾರೋ ಕೆಲವರು ಮಿಷಿನರೀಸ್ ನವರು ಅವರು ಇವರು ಫೈವ್‌ಸ್ಟಾರ್ ಹೋಟೆಲ್‌ನಿಂದ ಏನು ವೇಸ್ಟ್ ಸಿಗುತ್ತದೆ, ಅದನ್ನು ತೆಗೆದುಕೊಂಡು ಹೋಗಿ ಸಾಕುವವರಿಗೆ ಸ್ವಲ್ಪ ಲಾಭವಾಗುತ್ತದೆಯೇ ಹೊರತು ದೂರದಿಂದ ತರುವವರಿಗೆ ಸ್ಲಾಟರ್ ಹೌಸಸ್ ಕೂಡ ಇಲ್ಲ, ಪ್ರೊಟೆಕ್ಷನ್ನೂ ಇಲ್ಲ. ಲಾಭವೂ ಇಲ್ಲ. ಎಲ್ಲೋ ಸಂತೆಯಲ್ಲಿ ತೆಗೆದುಕೊಂಡು ಹೋಗಿ ಮಾರಿಕೊಂಡು ಹೋಗುತ್ತಿದ್ದಾರೆ ಅಷ್ಟೇ. Piggery is not properly organised. I do not know whether your officers have briefed you properly or not.

7.20 ಪಿ.ಎಂ.

Take it as a challenge and do it ಮಾನ್ಯ ಬಚ್ಚೆಗೌಡರಿದ್ದಾರೆ ಕೇಳಿ. You take his advice. He knows it.

ಶ್ರೀ ಬಿ.ಎನ್. ಬಚ್ಚೆಗೌಡ : ಸನ್ಮಾನ್ಯ ಅಧ್ಯಕ್ಷರೇ it is not well organised. ಮಾರ್ಕೆಟ್ ಆಗಲಿ ವ್ಯವಸ್ಥೆಯಾಗಲಿ ಇಲ್ಲ.

ಅಧ್ಯಕ್ಷರು : ಕ್ಯಾಪ್ಸೀಸ್ ಎನ್‌ಕೆಫಿಲಿಟೀಸ್ ಬರುತ್ತದೆಂದು ಇಂಪ್ರೆಷನ್ ಇದೆ. ಹಂದಿ ಇರುವ ಕಡೆ ಅದು ಬ್ರೀಡ್ ಆಗುತ್ತದೆ, ಅದಕ್ಕೋಸ್ಕರ ಹಂದಿ ಸಾಕಬಾರದೆಂದು ಹೇಳಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ : ಅದೂ ಸಹ ಹಂದಿಗಳಿಂದ ಬರುತ್ತದೆಂದು ಖಾತಿಯಾಗಿಲ್ಲ. ಹಂದಿ ಸಾಕಾಣಿಕೆಯ ಬಗ್ಗೆ ಎಷ್ಟು ಪ್ರಮಾಣದಲ್ಲಿ ಪ್ರಚಾರವಾಗಬೇಕಿತ್ತೋ ಅದು ಆಗಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಆ ವಿಚಾರದಲ್ಲಿ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಇವತ್ತು ಕುರಿಯ ಬಗ್ಗೆ ಹೇಳಿದ್ದಾರೆ. ಈಗಾಗಲೇ ಕುರಿ ಅಭಿವೃದ್ಧಿ ಮಂಡಳಿ ಇದೆ. ಅದರ ಜೊತೆಗೆ ಸಾಕಾಣಿಕೆ ಕೇಂದ್ರಗಳಲ್ಲದೆ ಪೋಷಕರ ಸಂಘಗಳನ್ನು ಮಾಡಿದ್ದೇವೆ. ಕುರಿ ಸಾಕಾಣಿಕೆಯ ಬಗ್ಗೆ ತಿಳುವಳಿಕೆ ನೀಡುವ ಬಗ್ಗೆ ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ಕುರಿ ಸಾಕಾಣಿಕೆದಾರರ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಹೇಳಿದ್ದಾರೆ. ಈಗಾಗಲೇ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಇಲಾಖೆಯಿಂದ ಆ ನಿಟ್ಟಿನಲ್ಲಿ ಸಾಕಷ್ಟು ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ತಮ್ಮ ಸಲಹೆಗಳಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಮೊಲ ಸಾಕಾಣಿಕೆಯ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ಮೊಲ ಸಾಕಾಣಿಕೆ ಬಗ್ಗೆ ಹೆಚ್ಚು ಪ್ರಚಾರವಾಗದಿದ್ದರೂ ಮಾಂಸ ತಿನ್ನತಕ್ಕವರೆಲ್ಲರೂ ಗಮನಿಸಬೇಕಾದುದೇನೆಂದರೆ ಮೊಲದ ಮಾಂಸ ನೂರು ಪರ್‌ಸೆಂಟ್ ಕೊಲಾಸ್ಟ್ರಲ್ ಫ್ರೀ, ಯಾರಿಗೆ ಬಿ.ಪಿ. ಅಥವಾ ಹೈಪರ್‌ಟೆನ್‌ಷನ್ ಇದೆ. ಅಂಥವರಿಗೆ ಮಾತ್ರ ಮೊಲದ ಮಾಂಸ ಬಹಳ ಉತ್ಕೃಷ್ಟವಾದದ್ದು. ಮೊಲದ ಮಾಂಸ ಬಹಳ ಉತ್ತಮವಾದದ್ದು. ರಾಜ್ಯದಲ್ಲಿ ಸುಮಾರು 12 ಕಡೆ ಮೊಲದ ಉತ್ಪಾದನೆಯ ಕೆಲಸ ಮಾಡುತ್ತಿದ್ದೇವೆ. ಕೋಳಿ ಸಾಕಾಣಿಕೆ ನಮ್ಮ ರಾಜ್ಯದಲ್ಲಿ ಸುಮಾರು ಒಂದೂವರೆ ಕೋಟಿ ಕೋಳಿಗಳು ಇವೆ. ಕೋಳಿಗಳ ಅಭಿವೃದ್ಧಿಗಾಗಿ ಸಾಕಷ್ಟು ಕಾರ್ಯಕ್ರಮವನ್ನು ಹಮ್ಮಿಕೊಂಡು ಸುಮಾರು 32 ಸಂಸ್ಥೆಗಳು ಈ ಕೆಲಸ ಮಾಡುತ್ತಿವೆ. ಕೋಳಿ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ನೀಡುತ್ತಿದ್ದೇವೆ. ಹೆಸರಘಟ್ಟ ಮತ್ತು ಬೇರೆ ಬೇರೆ ಕಡೆಗಳಲ್ಲಿ ಮೊಟ್ಟೆಯನ್ನು ಉತ್ಪಾದನೆ ಮಾಡಿ ಮರಿ ಮಾಡಿಸಿ ರಾಜ್ಯದ ಎಲ್ಲಾ ಕೋಳಿ ಸಾಕಾಣಿಕೆದಾರರಿಗೆ ಆ 32 ಸಂಸ್ಥೆಗಳಿಂದ ಕೊಡುವ ಕೆಲಸ ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಬಡವರ ಉನ್ನತಿಗಾಗಿ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರನ್ವಯ ನಮ್ಮ ರಾಜ್ಯದಲ್ಲಿರುವ ಒಂದೂವರೆ ಕೋಟಿ ಕೋಳಿಗಳಲ್ಲಿ ಸ್ಥಳೀಯ ಕೋಳಿಗಳು 70 ಪರ್‌ಸೆಂಟ್ ಇದ್ದು 30 ಪರ್‌ಸೆಂಟ್ ಬ್ರಾಯ್ಲರ್ ಕೋಳಿಗಳಾಗಿವೆ. ನಮ್ಮಲ್ಲಿ ಸುಮಾರು ಸಾವಿರದ ಹದಿನೈದು

ಮಿಲಿಯನ್ನು ಮೊಟ್ಟೆಗಳ ಉತ್ಪಾದನೆಯಾಗುತ್ತಿದೆ. ವಾರ್ಷಿಕ ಸುಮಾರು 24 ಮಿಲಿಯನ್ ಬ್ರಾಯಲರ್ಸ್ ಕೋಳಿಗಳ ಉತ್ಪಾದನೆ ಇದೆ. ದೇಶದಲ್ಲಿ ಕರ್ನಾಟಕ ಕೋಳಿಯ ಉತ್ಪಾದನೆಯಲ್ಲಿ ಐದನೇ ಸ್ಥಾನದಲ್ಲಿದ್ದರೆ ಮೊಟ್ಟೆಯ ಉತ್ಪಾದನೆಯಲ್ಲಿ ಏಳನೇ ಸ್ಥಾನದಲ್ಲಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ ಪ್ರಕಾರ ಒಬ್ಬ ವ್ಯಕ್ತಿ ಒಂದು ವರ್ಷದಲ್ಲಿ 180 ಮೊಟ್ಟೆಗಳನ್ನು ಸೇವಿಸಬೇಕು ಎನ್ನತಕ್ಕ ಸಲಹೆ ನೀಡುತ್ತದೆ. ವರ್ಷಕ್ಕೆ ಒಂಭತ್ತು ಕೆ.ಜಿ. ಮಾಂಸವನ್ನು ಸೇವಿಸಬೇಕೆಂದು ಸಲಹೆ ನೀಡುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳಲ್ಲಿ ಒಬ್ಬ ವ್ಯಕ್ತಿಗೆ ವರ್ಷಕ್ಕೆ 29 ಮೊಟ್ಟೆ ಲಭ್ಯವಾದರೆ ಮಾಂಸ ಸುಮಾರು 450 ಗ್ರಾಂ ಲಭ್ಯವಾಗುತ್ತದೆ. ಆದ್ದರಿಂದ ಕೋಳಿ ಮಾಂಸ ಮತ್ತು ಮೊಟ್ಟೆಯ ಉತ್ಪಾದನೆಗೆ ಹೆಚ್ಚು ಉತ್ತೇಜನ ಕೊಟ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೋಳಿ ಫೆಡರೇಷನ್ ಮಾಡಿ ಪ್ರತಿ ತಾಲ್ಲೂಕಿನಲ್ಲಿ ಒಂದು ಸಹಕಾರಿ ಸಂಘವನ್ನು ಮಾಡಲು ಯೋಜನೆ ಹಾಕಿಕೊಂಡಿದ್ದೇವೆ. ಈಗಾಗಲೇ ಮೂವತ್ತಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ಸಹಕಾರಿ ಸಂಘಗಳನ್ನು ನೊಂದಾವಣಿ ಮಾಡಿದ್ದೇವೆ. ಅದರಲ್ಲಿ 16 ಸಹಕಾರಿ ಸಂಘಗಳಿಗೆ ಎನ್‌ಸಿ.ಡಿ.ಸಿ.ಯಿಂದ 25 ಕೋಟಿ ರೂಪಾಯಿ ಹಣವನ್ನು ಕೇಳಿದ್ದೇವೆ. 14 ಸಹಕಾರಿ ಸಂಘಗಳಿಗೆ 116 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಕೋಳಿ ಅಭಿವೃದ್ಧಿಗೆ ನಬಾರ್ಡ್‌ನಿಂದ 25 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಇವೆಲ್ಲಾ ಸಹಾಯವನ್ನು ಪಡೆದುಕೊಂಡು ಕೋಳಿ ಅಭಿವೃದಿಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ಉದ್ದೇಶವಿಟ್ಟು ಕೊಂಡಿದ್ದೇವೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಗಿರಿರಾಜ ಎನ್ನತಕ್ಕ ಕೋಳಿ ತಳಿಯನ್ನು ಮಾಡಿದರು. ಆ ಗಿರಿರಾಜ ಕೋಳಿಯನ್ನು ನಮ್ಮ 32 ಸಂಸ್ಥೆಗಳಿಂದ ಉತ್ಪಾದನೆ ಮಾಡಿ ನಮ್ಮ 3638 ಪಶುಸಂಗೋಪನಾ ಸಂಸ್ಥೆಗಳ ಮೂಲಕ ಎಲ್ಲಾ ಕಡೆ ರೈತರಿಗೆ ಒದಗಿಸುತ್ತಿದ್ದೇವೆ ಮತ್ತು ರೈತರಿಗೆ ಅದರ ಬಗ್ಗೆ ತಿಳುವಳಿಕೆ ನೀಡುವ ಕೆಲಸ ಮಾಡುತ್ತಿದ್ದೇವೆ. ರೈತರಿಗೆ ಬಹಳ ಲಾಭದಾಯಕವಾದ ಕೃಷಿ ಎಂದರೆ ಗಿರಿರಾಜ ಕೋಳಿ ಉತ್ಪಾದನೆ.

ಮಾನ್ಯ ಸದಸ್ಯರು : ನಮ್ಮ ಬಿಜಾಪುರ ಜಿಲ್ಲೆಯಲ್ಲಿರುವ ಮುಧೋಳ್ ತಾಲ್ಲೂಕಿನಲ್ಲಿ ಉತ್ತಮವಾದ ಸ್ಥಳೀಯ ನಾಯಿ ತಳಿಯೊಂದಿದೆ. ಅದು ಇಡೀ ರಾಜ್ಯದಲ್ಲಿ ಪ್ರಸಿದ್ಧಿಯಾಗಿದೆ. ಆ ತಳಿಯ ಅಭಿವೃದ್ಧಿಗೆ ಸರ್ಕಾರದಲ್ಲಿ ಯಾವುದಾದರೂ ಯೋಜನೆ ಹಾಕಿಕೊಂಡಿದ್ದಾರೆಯೇ?

ಶ್ರೀ ಬಿ.ಬಿ. ನಿಂಗಯ್ಯ : ಮುಧೋಳ್‌ನಾಯಿ ಎನ್ನತಕ್ಕದ್ದು ಸ್ಥಳೀಯವಾದ ತಳಿ. ಅದರ ಅಭಿವೃದ್ಧಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಉದ್ದೇಶವಿಟ್ಟು ಕೊಂಡಿದ್ದೇವೆ. ಮಾನ್ಯ ಸದಸ್ಯರು ನೀಡಿರುವುದು ಉತ್ತಮವಾದ ಸಲಹೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಈಗಾಗಲೇ ಯಾರು ಅದನ್ನು ಸಾಕುತ್ತಿದ್ದಾರೆ ಅವರಿಗೆ ಇನ್‌ಸೆಂಟೀವನ್ನು ಕೊಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ನಾಗೇಗೌಡರು ಪಶುಸಂಗೋಪನಾ ಸಚಿವರಾಗಿದ್ದಾ ಕೋಳಿಸಾಕಾಣಿಕೆದಾರರ ಸಮ್ಮೇಳನವನ್ನು ಮಾಡಿದ್ದರು. ಹಾಗೆ ಮಾಡಿ ಕೋಳಿಸಾಕಾಣಿಕೆದಾರರನ್ನೆಲ್ಲಾ ಸೇರಿಸಿ ಒಂದು ಫೆಡರೇಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಅದು ಏನಾಯಿತು?

ಶ್ರೀ ಬಿ.ಬಿ. ನಿಂಗಯ್ಯ : ನಾನು ಅದರ ಬಗ್ಗೆಯೇ ಹೇಳುತ್ತಿದ್ದೆ, ಇದಕ್ಕಾಗಿ ಕರ್ನಾಟಕ ಕೋ ಆಪರೇಟೀವ್ ಫೌಲ್ಟ್ರಿ ಫೆಡರೇಷನ್ ಎಂದು 1995ನೇ ಇಸವಿಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಾರಂಭ ಮಾಡಿದ್ದೇವೆ. ಹಿಂದೆ ಅದಕ್ಕೆ ಡೆವಲಪ್‌ಮೆಂಟ್ ಕಮೀಷನರ್ ಅಧ್ಯಕ್ಷರಾಗಿದ್ದರು, ಆದರೆ ಕಳೆದ ಮೂರು ತಿಂಗಳಿಂದ ಅದಕ್ಕೆ ನನ್ನನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಐದು ವರ್ಷಗಳಲ್ಲಿ ಇಡೀ ರಾಜ್ಯದ 175 ತಾಲ್ಲೂಕುಗಳನ್ನು ಈ ಫೆಡರೇಷನ್‌ನ ಅಡಿಯಲ್ಲಿ ತರಬೇಕೆಂಬ ಉದ್ದೇಶವಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಕೋ ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಇದನ್ನು ತರಬೇಕು ಎಂಬ ಉದ್ದೇಶವಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ತಮಗೆ ಈಗಾಗಲೇ ಹೇಳಿರುವಂತೆ ಸುಮಾರು 36 ಸಹಕಾರಿ ಸಂಘಗಳನ್ನು ನೊಂದಾವಣಿ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರಿ ಸಚಿವರು) : ಪೌಲ್ಟ್ರಿ ಫೆಡರೇಷನ್ ಮಾಡಿ ಅದಕ್ಕೆ ಇದುವರೆಗೆ ಡೆವಲಪ್‌ಮೆಂಟ್ ಕಮೀಷನರ್ ಅವರು ಅಧ್ಯಕ್ಷರಾಗಿದ್ದರು, ಈಗ ಮಾನ್ಯ ಪಶುಸಂಗೋಪನಾ ಸಚಿವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದೇವೆ.

ಶ್ರೀ ಬಿ.ಬಿ. ನಿಂಗಯ್ಯ : 114 ಲಕ್ಷ ರೂಪಾಯಿಗಳನ್ನು ಎನ್.ಸಿ.ಡಿ.ಸಿ. ಯಿಂದ ಪಡೆದು 16 ಸಹಕಾರಿ ಸಂಘಗಳಿಗೆ ಈ ಸಂಸ್ಥೆಯಿಂದ ಹಣಕಾಸಿನ ಸಹಕಾರ ನೀಡುತ್ತಿದ್ದೇವೆ. ಈ ಸಹಕಾರಿ ಸಂಘದ ಅಡಿಯಲ್ಲಿ ಯಾರು ಬರುತ್ತಾರೆ ಅವರಿಗೆ ಸಹಾಯ ನೀಡಲು ನಬಾರ್ಡ್‌ನಿಂದ 25 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಕೋಳಿಗಳಿಗೆ ಫೆಡರೇಷನ್ ಇದೆ, ಹಾಗಿದ್ದರೆ ಕುರಿ, ಮೇಕೆಗಳಿಗೆ ಏಕೆ ಇಲ್ಲ? ಅದನ್ನು ಮಾಡಬೇಕು.

ಶ್ರೀ ಬಿ.ಬಿ. ನಿಂಗಯ್ಯ : ಹೈನುಗಾರಿಕೆ ಬಗ್ಗೆ ಹೇಳುವುದಾದರೆ, ಇಡೀ ರಾಜ್ಯದಲ್ಲಿ ಹೈನುಗಾರಿಕೆಯಲ್ಲಿ ದೊಡ್ಡ ಕ್ರಾಂತಿಯಾಗಿದೆ. 1996-97ರ ಸಮೀಕ್ಷೆಯಂತೆ ರಾಜ್ಯದಲ್ಲಿ ದಿನಕ್ಕೆ 85 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಸಹಕಾರಿ ಸಂಘಗಳ ಅಡಿಯಲ್ಲಿ ಹೈನುಗಾರಿಕೆಯನ್ನು ತರಬೇಕೆಂದು ಒಂದು ಕಾಲದಲ್ಲಿ ಕೆಎಂಎಫ್ ಸ್ಥಾಪನೆಯಾದ ಮೇಲೆ, ರೈತರು ಉತ್ಪಾದನೆ ಮಾಡುವ ಹಾಲಿಗೆ ಮಾರುಕಟ್ಟೆಯನ್ನು ಒದಗಿಸಿ ರೈತರ ಸ್ಥಿತಿಗತಿಗಳನ್ನು ಸುಧಾರಿಸಲು ಎಂಟು ಸಾವಿರಕ್ಕೂ ಹೆಚ್ಚು ಸಹಕಾರಿ ಸಂಘಗಳನ್ನು ನೋಂದಾವಣಿ ಮಾಡಿ ಒಂದು ದಿನಕ್ಕೆ 14 ಲಕ್ಷದ 26 ಸಾವಿರ ಹಾಲನ್ನು ಸಂಗ್ರಹ ಮಾಡಿ ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೆ, ಅರೆನಗರ ಪ್ರದೇಶಗಳಿಗೆ ನಂದಿನಿ ನಮೂನೆಯ ಹಾಲನ್ನು ಮಾರುತ್ತಿರುವುದು ತಮಗೆಲ್ಲಾ ಗೊತ್ತಿದೆ. ಹಾಲಿನ ಬೆಲೆ ಹೆಚ್ಚು ಕೊಡಬೇಕು ಎಂಬ ಕಾರಣಕ್ಕಾಗಿ ಸಹಕಾರಿ ಆಂಧೋಲನವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಬಚ್ಚೇಗೌಡರು ಸಚಿವರಾಗಿದ್ದಾಗ ಸುಮಾರು 7-50 ರೂ. ಇತ್ತು. ನಾನು ಸಚಿವನಾದ ಮೇಲೆ ಸುಮಾರು 8 ರೂ. ಇತ್ತು. ಗ್ರಾಮಾಂತರ ಪ್ರದೇಶದಲ್ಲಿ ಹಾಲಿನ ಉತ್ಪಾದನೆಗೆ ಬಹಳ ಕಷ್ಟ ಎಂಬುದು ತಮಗೆ ಗೊತ್ತಿದೆ. ವಿಶೇಷವಾಗಿ ಅಧ್ಯಕ್ಷರೆ ತಮ್ಮ ಜಿಲ್ಲೆಯಲ್ಲಿ ಹಾಲನ್ನು ಉತ್ಪಾದನೆ

ಮಾಡುವ ರೈತರು ಅದರಿಂದಲೇ ಬಹಳಷ್ಟು ಜನರು ಜೀವನ ಮಾಡುತ್ತಿರುವುದು ತಮಗೆ ಗೊತ್ತಿದೆ. ಕೃಷಿ ಕಾರ್ಮಿಕರು, ಸಣ್ಣ ಪುಟ್ಟ ರೈತರು ಮತ್ತು ಮಧ್ಯಮ ವರ್ಗದ ರೈತರೂ ಕೂಡ ಈ ಹೈನುಗಾರಿಕೆಯಲ್ಲಿ ಇವತ್ತು ತೊಡಗಿಸಿಕೊಂಡು ಅವರ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುತ್ತಿರುವುದು ತಮಗೆ ಗೊತ್ತಿದೆ. ಆದರೆ ಇವತ್ತು ಬಹಳ ದುಃಖದಿಂದ ಹೇಳತಕ್ಕ ವಿಚಾರವೇನೆಂದರೆ, ಪ್ರತಿ ಲೀಟರ್ ಹಾಲಿಗೆ 7.50 ರೂ. ಇದ್ದುದನ್ನು ಮಾನ್ಯ ಬಚ್ಚೇಗೌಡರು ಸಚಿವರಾಗಿದ್ದಾಗ 8.50 ರೂ.ಗಳಿಗೆ ಏರಿಸಿದರು ನಾನು ಮಂತ್ರಿಯಾದ ಮೇಲೆ ಅದನ್ನು ಪುನಃ 2.ರೂ ಜಾಸ್ತಿಮಾಡಿಸಿದೆ. ಪ್ರತಿ ಸಾರಿಯೂ ಕೂಡ ಸರ್ಕಾರ ಹಾಲಿನ ದರವನ್ನು ಏರಿಸಿದಾಗ, ಆ ವಿಷಯ ವಿಧಾನ ಮಂಡಲದ ಉಭಯ ಸದನಗಳಲ್ಲೂ ಕೂಡ ದೊಡ್ಡ ಚರ್ಚೆಯಾಗಿ, ಆ ದರ ಬಹಳ ದುಬಾರಿ ಆಯಿತು ಎಂದು ಹೇಳಿದರೇ ಹೊರತು ಇವತ್ತು ಹಳ್ಳಿಯಲ್ಲಿ ಒಂದು ಹಸು ಸಾಕತಕ್ಕ ರೈತನ ಪರಿಸ್ಥಿತಿ ಏನಿದೆ ಎಂಬುದು ಎಲ್ಲಾ ಸದಸ್ಯರಿಗೂ ಗೊತ್ತಿದೆ. ಒಂದು ಲೀಟರ್ ನೀರಿಗೆ 14-15 ರೂ.ಗಳನ್ನು ನಾವು ಚರ್ಚೆ ಮಾಡದೇ ಕೊಡುತ್ತೇವೆ. ಹಾಲಿಗೆ ನೀರು ಬೆರೆಸುವುದೇನಾದರೂ ಇದ್ದರೆ ಅದನ್ನು ತಾವು ನನ್ನ ಗಮನಕ್ಕೆ ತೆಗೆದುಕೊಂಡು ಬನ್ನಿ. ಅದಕ್ಕಾಗಿ ಇಡೀ ಕೆ.ಎಂ.ಎಫ್‌ನಲ್ಲಿ ಇವತ್ತು ವ್ಯವಸ್ಥೆ ಇದೆ; ಸರ್ಕಾರ ಇದೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ನನಗೇನು ದುಃಖ ಅಂದರೆ, ರೈತರ ಬಗ್ಗೆ ಇಷ್ಟೆಲ್ಲಾ ಚರ್ಚೆ ಮಾಡತಕ್ಕಂಥ ನಾವು, ಅವರ ವಿಚಾರ ಬಂದಾಗ ಎಲ್ಲೋ ಮೌನವಾಗತಕ್ಕಂಥದ್ದು ಅಥವಾ ಬರೀ ರಾಜಕಾರಣಕ್ಕಾಗಿ ಪ್ರಸ್ತಾಪ ಮಾಡತಕ್ಕಂಥದ್ದು ಆಗಬಾರದು ಅಂತಕ್ಕಂಥದ್ದು ನನ್ನ ಭಾವನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಹೇಳುವುದಾದರೆ, ಪ್ರತಿ ಲೀಟರ್ ಹಾಲಿಗೆ ಇವತ್ತು ನಾವೇನು 10.50 ರೂ. ಗಳನ್ನು ರೈತರಿಗೆ ಕೊಡುತ್ತಿದ್ದೇವೆ, ಅದೂ ಕೂಡ ಸಾಲದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆದರೆ ನೀವು ರೈತರಿಗೆ ನಿಜವಾಗಿ ಕೊಡುತ್ತಿರುವುದು ಲೀಟರ್‌ಗೆ ಕೇವಲ 8 ರೂ. ಮಾತ್ರ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೇ, ನಾವು ಇವತ್ತು ಪ್ರತಿ ಲೀಟರ್ ಹಾಲಿಗೆ 10.50 ರೂ. ದರ ನಿಗದಿ ಮಾಡಿದ್ದರೂ ಕೂಡ ಅದರಲ್ಲಿ ರೈತರಿಗೆ ಸಿಗುವಂತಾದ್ದು ಕೇವಲ 8 - 8.50 ರೂ. ಮಾತ್ರ. ಉಳಿದಂತಹ ಹಣವೆಲ್ಲಾ ಹ್ಯಾಂಡ್ಲಿಂಗ್ ಚಾರ್ಜಸ್‌ಗೆ ಹೋಗುತ್ತಿದೆ. ಆ ದೃಷ್ಟಿಯಿಂದ ನಾವು ಆಲೋಚನೆ ಮಾಡುತ್ತಿದ್ದೇವೆ, ಇವತ್ತು ಡೀಸಲ್ ದರ ಕೂಡ ಜಾಸ್ತಿಯಾಗಿದೆ...

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೇ, 1980 ರಲ್ಲಿ ಸ್ಯಾಲರಿ ಎಷ್ಟಿತ್ತು, 1990ರಲ್ಲಿ ಸ್ಯಾಲರಿ ಎಷ್ಟಿತ್ತು? ಇವತ್ತು ಸ್ಯಾಲರಿ ಎಷ್ಟಿದೆ? ಇತ್ತಿಚೆಗೆ ಶೇಕಡ 20 ರಷ್ಟು ಸ್ಯಾಲರಿ ಜಾಸ್ತಿ ಮಾಡಿದರು. ನಾನು ಹೇಳಬಾರದು, ಬೆಂಗಳೂರಿನಲ್ಲಿ ಇದ್ದುಕೊಂಡು ನನಗೆ ರೈತನ ಕಷ್ಟ ನನಗೆ ಬಹಳ ಚೆನ್ನಾಗಿ ಗೊತ್ತಿದೆ. ಅವನು ಬೆಳಿಗ್ಗೆ ಕಾಗೆ ಕೂಗುವಾಗ ಎದ್ದರೆ ಕಾಗೆ ಗೂಡಿಗೆ ಹೋಗುವ ತನಕವೂ ಅತ ದುಡಿಯುತ್ತಿರುತ್ತಾನೆ. It is not a profiotable job, but it is a service to the people. ಜನವರಿಯಲ್ಲಿ 18 ಲಕ್ಷ ಲೀಟರ್‌ಗಳಷ್ಟು ಇದ್ದ ಹಾಲಿನ ಉತ್ಪಾದನೆ ಇವತ್ತು 13 ಲಕ ಲೀಟರ್‌ಗಳಿಗೆ ಇಳಿದಿದೆ. ಇದಕ್ಕೆ ಕಾರಣವೇನು? ಕಳೆದ 4 ತಿಂಗಳ ಅಲ್ಪಾವಧಿಯಲ್ಲೇ

5 ಲಕ್ಷ ಲೀಟರ್ ಹಾಲಿನ ಉತ್ಪಾದನೆ ಕಡಿಮೆಯಾಗಿದೆ. ಜನ ತಿನ್ನುವ ಗೋಧಿ ಬೆಲೆ ರೇಷನ್ ಡಿಪೋನಲ್ಲಿ ಕೆ.ಜಿ.ಗೆ 5 ರೂ. ಇದೆ. ಆದರೆ ದನ ತಿನ್ನುವ ಬೂಸಾ ಬೆಲೆ ಕೆ.ಜಿ.ಗೆ 7 ರೂ. ಆಗಿದೆ. ಒಂದು ಮಗು ಕೈಯಲ್ಲಿ ಹಿಡಿದುಕೊಳ್ಳಬಹುದಾದಷ್ಟು ಒಣಗಿದ ಹುಲ್ಲಿನ ಬೆಲೆ 20 ರೂ.ಗಳಾಗಿದೆ. ಬೆಳಿಗ್ಗೆ ಎದ್ದು ತೊಪ್ಪೆ ಎತ್ತಿ ಎತ್ತಿ ಅವನು ಹೋಗುತ್ತಿದ್ದಾನೆ. ಲೀಟರ್‌ಗೆ 50 ಪೈಸೆ ಜಾಸ್ತಿ ಮಾಡಿದರೆ ನೀವು ಅದರ ಬಗ್ಗೆ ಬೊಬ್ಬೆ ಹಾಕಬೇಡಿ. ಬ್ರಿಟಿಷರ ಕಾಲದಲ್ಲಿ there was no sales tax on perishable items especially for milk. ಅವರು ಆ ಕಾಲದಲ್ಲೇ ಇದಕ್ಕೆ ಟ್ಯಾಕ್ಸ್ ಹಾಕಿರಲಿಲ್ಲ. ಹಾಲಿನ ಉತ್ಪಾದನೆ ಜಾಸ್ತಿಯಾಗಬೇಕು, ತಾಯಿ-ಮಗು ಚೆನ್ನಾಗಿ ಇರಬೇಕು ಎಂಬುದು ಅವರ ಉದ್ದೇಶವಾಗಿತ್ತು ಬ್ರಿಟಿಷ್, ಜರ್ಮನಿ ದೇಶಗಳ ಮಕ್ಕಳು ಹೇಗಿದ್ದಾರೆ? ಅಲ್ಲಿ ಮಕ್ಕಳಿಗೆ ಒಳ್ಳೆಯ ಹಾಲು ಕೊಡುತ್ತಾರೆ. ಬೆಳಿಗ್ಗೆ ಟೇಬಲ್ ಹತ್ತಿರ ಕುಳಿತರೆ ಫ್ರೀಯಾಗಿ ಮಕ್ಕಳಿಗೆ ಚೀಸ್ ಕೊಡುತ್ತಾರೆ..........

ಅಧ್ಯಕ್ಷರು : ನಮಗೆ ಅವರ ಸುದ್ದಿ ಬೇಡ ಬಿಡಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಹಾಲಿನ ಉತ್ಪಾದನೆ 18 ಲಕ್ಷ ಲೀಟರ್‌ಗಳಿಂದ 13 ಲಕ್ಷ ಲೀಟರ್‌ಗಳಿಗೆ ಇಳಿದಿದೆ, ಇದಕ್ಕೆ ಕಾರಣವೇನು? ಇದೇ ರೀತಿ ಪರಿಸ್ಥಿತಿ ಮುಂದುವರೆದರೆ ಹೇಗೆ.........

ಅಧ್ಯಕ್ಷರು : ಇನ್ನೂ ಇಬ್ಬರು ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಬೇಗ ಮುಗಿಸಿ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ರಾಜಣ್ಣನವರು ಪ್ರತಿಬಾರಿಯೂ ಕೂಡ ನಮ್ಮ ಸಹಾಯಕ್ಕೆ ಬರುತ್ತಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು. ಮಾನ್ಯ ಅಧ್ಯಕ್ಷರೇ, ಇಡೀ ಸದನ ಒಪ್ಪುವುದಾದರೆ, ಹಾಲಿನ ದರ ಏರಿಸಲಿಕ್ಕೆ ನಾನು ತಯಾರಿದ್ದೇನೆ. ಏಕೆಂದರೆ, ಈಗಿನ ದರದಲ್ಲಿ ರೈತರಿಗೆ ಕೊಡುತ್ತಿರುವ ಪ್ರಮಾಣ ಏನೇನೂ ಸಾಲುತ್ತಿಲ್ಲ. ಇವತ್ತು ಸದನದಲ್ಲಿ ಮಾನ್ಯ ಸುರೇಶ್‌ಕುಮಾರ್‌ರವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು ಇತ್ಯಾದಿ ಎಲ್ಲಾ ವಿರೋಧಿ ಮುಖಂಡರೂ ಕೂಡ ಇದ್ದಾರೆ. ತಾವೆಲ್ಲರೂ ಕೂಡ ಒಪ್ಪುವುದಾದರೆ ನಾನು ಪ್ರತಿ ಲೀಟರ್ ಹಾಲಿಗೆ ಒಂದು ರೂ.ನಂತೆ ದರ ಏರಿಸಲು ತಯಾರಿದ್ದೇನೆ. ಏಕೆಂದರೆ ಇವತ್ತು ರೈತರಿಗೆ ಹಾಲಿನ ಉತ್ಪಾದನೆ ಬಹಳ ಕಷ್ಟವಾಗಿದೆ, ಪಶು ಆಹಾರದ ದರಗಳು ಬಹಳ ದುಬಾರಿಯಾಗಿವೆ, ಅವನಿಗೆ ಅಸಲೂ ಕೂಡ ಸಿಕ್ಕುತ್ತಿಲ್ಲ. ಆದ್ದರಿಂದ ಹಾಲಿನ ದರ ಏರಿಕೆ ಮಾಡಲು ಸದನದ ಒಪ್ಪಿಗೆ ಇದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ರೈತರಿಗೆ ಒಂದು ರೂ. ಜಾಸ್ತಿ ಕೊಡಿ, ಅದರೆ ಅದರ ಹೊರೆಯನ್ನು ಗ್ರಾಹಕರಿಗೆ ಹೊರಿಸಬೇಡಿ. ಅದನ್ನು ಸರ್ಕಾರ ಭರಿಸಲಿ............

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ತಾವು ಇದರ ಬಗ್ಗೆ ಇವತ್ತು ರಾಜಕೀಯವಾಗಿ ಮಾತನಾಡಿದರೆ ನಾವೇನು ಹೇಳುವುದು?

ಶ್ರೀ ಕೆ.ಎಸ್. ಈಶ್ವರಪ್ಪ : ಇದರಲ್ಲಿ ರಾಜಕೀಯ ಏನು ಬರುತ್ತದೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ....ಬಸ್ ದರ ಜಾಸ್ತಿ ಮಾಡಿಯಾಗಿದೆ, ನೀರಿನ ದರ ಜಾಸ್ತಿ ಮಾಡಿದ್ದೀರಿ. ಎಲ್ಲಾ ರೀತಿಯ ದರಗಳನ್ನೂ ಜಾಸ್ತಿ ಮಾಡಿ ಗ್ರಾಹಕರು ಒದ್ದಾಡುವಂತಹ ಪರಿಸ್ಥಿತಿ ಬಂದಿದೆ. ಏರಿಸಿದ ದರವನ್ನು ಸರ್ಕಾರವೇ ಭರಿಸಿ........

ಶ್ರೀ ಎಸ್.ಎಸ್. ಪಾಟೀಲ್ : ತಾವು ಒಂದು ಕಡೆ ರೈತರ ಬಗ್ಗೆ ಮಾತನಾಡುವುದು, ಇನ್ನೊಂದು ಈ ರೀತಿ ಮಾತನಾಡುವುದು ಮಾಡಬೇಡಿ...

(ಗೊಂದಲ)

ಶ್ರೀ ಸಿ. ಬೈರೇಗೌಡ : ನಮ್ಮ ಸ್ನೇಹಿತರ ನಿಜವಾದ ಬಣ್ಣ ಈಗ ಗೊತ್ತಾಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಏನದು ನಮ್ಮ ನಿಜವಾದ ಬಣ್ಣ ಬಯಲಾಗುತ್ತಿರುವುದು? ಎಲ್ಲದಕ್ಕೂ ಬೆಲೆ ಜಾಸ್ತಿ ಮಾಡಿ ನಿಮ್ಮ ನಿಜವಾದ ಬಣ್ಣ ಈಗಾಗಲೇ ಬಯಲಾಗಿದೆ........

(ಗೊಂದಲ)

ಶ್ರೀ ಸಿ. ಬೈರೇಗೌಡ : ... ಆದರೆ ರೈತ ನಿಮಗೆ ಬಿಟ್ಟಿ ಸಿಕ್ಕಿದ್ದಾನೆಯೇ?.......

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರೈತರಿಗೆ ಕೊಡಿ, ಯಾರೂ ಬೇಡ ಎನ್ನುವುದಿಲ್ಲ.......

(ಗೊಂದಲ)

ಶ್ರೀ ಸಿ. ಬೈರೇಗೌಡ : ... ನಿಮ್ಮ ನಿಜವಾದ ಬಣ್ಣ ಇವತ್ತು ಹೊರಗಡೆ ಬರುತ್ತಿದೆ.

ಶ್ರೀ ಡಿ.ಟಿ. ಜಯಕುಮಾರ್ : ಒಂದು ಲೀಟರ್ ಅಕ್ವಾ ಮಿನರಲ್ ವಾಟರ್ ಬೆಲೆ 16-17 ರೂ ಇದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಏರಿಸುವ ಒಂದು ರೂ. ದರವನ್ನು ರೈತರಿಗೆ ನೇರವಾಗಿ ಮುಟ್ಟಿಸುವಂತಾದ್ದು ಸರ್ಕಾರದ ಜವಾಬ್ದಾರಿ. ಆ ಕೆಲಸವನ್ನು ನಾವು ಮಾಡುತ್ತೇವೆ. ಆದರೆ ಈಗ ಬಿಜೆಪಿಯ ನಿಜವಾದ ಬಣ್ಣ ಹೊರಗಡೆ ಬರುತ್ತಿದೆ. ಒಂದು ಕಡೆ ಅವರು ರೈತರಿಗೆ ಜಾಸ್ತಿ ಕೊಡಿ ಎಂದು ಹೇಳುತ್ತಿದ್ದಾರೆ, ಮತ್ತೊಂದು ಕಡೆ ಗ್ರಾಹಕರಿಗೆ ಒಂದು ರೂ. ಸರ್ಕಾರದಿಂದ ಸಬ್ಸಿಡಿ ಕೊಡಬೇಕೆಂದು ಹೇಳುತ್ತಿದ್ದಾರೆ. ಯಾರಿಗೆ ಸಬ್ಸಿಡಿ ಕೊಡಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸರ್ಕಾರ ಹಾಲಿನ ದರವನ್ನು ಲೀಟರ್‌ಗೆ ಒಂದು ರೂ. ಏರಿಸುವುದನ್ನು ನಾವು ಸ್ವಾಗತ ಮಾಡುತ್ತೇವೆ. ನಾವೇನು ಹೇಳುತ್ತಿದ್ದೇವೆ ಎಂದರೆ, ತಾವು ಈಗ ರೈತರಿಗೆ ಪ್ರತಿ ಲೀಟರ್ ಹಾಲಿಗೆ 8.50 ರೂ. ಕೊಡುತ್ತಿದ್ದೀರಿ, ಆದರೆ ಗ್ರಾಹಕರಿಗೆ ಇದನ್ನು 10.50 ರೂ.ಗಳಿಗೆ ಮಾರುತ್ತಿದ್ದೀರಿ. ನಾನೇನು ಹೇಳುತ್ತಿದ್ದೇನೆ ಎಂದರೆ, ನೀವು ಅದನ್ನು ಚೊಕ್ಕವಾಗಿ ನಡೆಸಿದರೆ, ಸೋರಿ ಹೋಗುವುದನ್ನು ತಪ್ಪಿಸಿದರೆ, 10.50 ರೂ. ಪ್ರತಿ ಲೀಟರ್ ಹಾಲನ್ನು ನೀವು ಗ್ರಾಹಕರಿಗೆ ಕೊಟ್ಟು, 9 ಅಥವಾ 9ಕ್ಕಿಂತ ಹೆಚ್ಚು ರೂ.ಗಳನ್ನು ನೀವು ರೈತರಿಗೆ ಕೊಡಲಿಕ್ಕೆ ಸಾಧ್ಯವಿದೆ ಎಂಬುದು ನಮ್ಮ ವಾದವಾಗಿದೆ. ನಿಮಗೆ ಹಾಗೆ ಮಾಡುವುದಕ್ಕೆ ಯೋಗ್ಯತೆ ಇಲ್ಲದೇ ಇದ್ದರೆ, ನಾವು ಮಾಡಿ ತೋರಿಸುತ್ತೇವೆ, ನೀವು ಜಾಗ ಖಾಲಿ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಔಷಧಿ ಖರೀದಿಯಲ್ಲಿ ಲೂಟಿಯಾಗುತ್ತಿರುವ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರೇನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನೀವು ಇವತ್ತು ನಿಲ್ಲಿಸಿದರೆ ರೈತರಿಗೆ ಅಷ್ಟು ದರ ಕೊಡಲಿಕ್ಕೆ ಸಾಧ್ಯವಿದೆ.......

ಶ್ರೀ ಸಿ. ಬೈರೇಗೌಡ : ...... ಅದರಲ್ಲಿ ಯಾರು ತಪ್ಪಿತಸ್ಥರು ಇರುತ್ತಾರೋ ಅವರಿಗೆ ಶಿಕ್ಷೆ ವಿಧಿಸುತ್ತೇವೆ. ಅವರು ಯಾರಾದರೂ ಕೂಡ ಆಗಿರಲಿ.......

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಗ್ರಾಹಕರನ್ನು ಅಲ್ಲದೆ ರೈತರನ್ನೂ ಕೂಡ ನಿಮ್ಮ ಸರ್ಕಾರ ಶೋಷಣೆ ಮಾಡುತ್ತಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ....... ಕುಂಟು ನೆಪ ಹೇಳುತ್ತಿದ್ದಾರೆ. ಇದು ನಮಗೆ ಬೇಕಾಗಿಲ್ಲ...........

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತ ವಿಷ ತೆಗೆದುಕೊಂಡು ಸಾಯುವಂತಹ ಸ್ಥಿತಿಗೆ ತಂದಿದ್ದೀರಿ. ಮಾನ್ಯ ಕೃಷಿ ಮಂತ್ರಿಗಳೇ, ನಮ್ಮ ರಾಜ್ಯದಲ್ಲಿ ಏನಾಗಿದೆ ಅಂದರೆ ರೈತ ನಿಮ್ಮ ಕೈಗೆ ಸಿಕ್ಕಿ ಸತ್ತು ಸುಣ್ಣವಾಗುತ್ತಾ ಇದ್ದಾನೆ.

ಶ್ರೀ ಸಿ. ಬೈರೇಗೌಡ : ಹೌದು, ಈಗ ಹೇಳುತ್ತಾ ಇದ್ದೀರಲ್ಲಾ;

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಹೇಳುವುದು ರೈತನಿಗೆ ಒಂದು ರೂಪಾಯಿ ಜಾಸ್ತಿ ಕೊಡಿ. ಸೋರಿ ಹೋಗುವುದನ್ನು ತಪ್ಪಿಸಿ ಎಂದು ಹೇಳುತ್ತಿದ್ದೇವೆ ಅದು ಆಗುವುದಿಲ್ಲವೇನು?

ಶ್ರೀ ಡಿ.ಟಿ. ಜಯಕುಮಾರ್ : ಸೆಂಟ್ರಲ್‌ನಲ್ಲಿ ನಾಳೆ ರೈಲ್ವೆ ಬಜೆಟ್ ಬರುತ್ತಿದೆ. ಸೋರಿ ಹೋಗುವುದನ್ನು ನಿಲ್ಲಿಸಿಬಿಟ್ಟು, ರೈಲ್ವೆ ದರವನ್ನು ಒಂದು ಪೈಸೆ ಕೂಡ ಹೆಚ್ಚಿಸದೆ ಸರ್ಕಾರ ನಡೆಸಿ.

ಶ್ರೀ ಕಾಗೋಡು ತಿಮ್ಮಪ್ಪ : 8.50 ಪೈಸೆಯನ್ನು ನೀವು ರೈತನಿಗೆ ಕೊಡುತ್ತೀರಿ ಹೌದಾ? ಹೌದು, 8.50 ಪೈಸೆ ರೈತನಿಗೆ ಕೊಟ್ಟು ಆ ಹಾಲಿನಲ್ಲಿ ಬೆಣ್ಣೆ ತೆಗೆದು ಅದಕ್ಕೆ ನೀರನ್ನು ಸೇರಿಸಿ ನೀವು 10.50 ಪೈಸೆ ಕೊಡುತ್ತೀರಿ.

ಶ್ರೀ ಸಿ. ಬೈರೇಗೌಡ : ದಯವಿಟ್ಟು ನಾನು ಹೇಳುವುದನ್ನು ಕೇಳಿ. ಎಲ್ಲಾ ಸ್ಟ್ಯಾಂಡರ್ಡೈಸ್ ಮಾಡಿದ್ದಾರೆ. 4.5 ಫ್ಯಾಟ್ ಕಂಟೆಂಟ್ಸ್ ಇರಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಾದರೆ ರೈತ ಕೊಡತಕ್ಕ ಹಾಲಿನಲ್ಲಿ ಬೆಣ್ಣೆ ತೆಗೆಯುವುದಿಲ್ಲವೆ?

ಶ್ರೀ ಸಿ. ಬೈರೇಗೌಡ : ನೀವು ಹೇಳತಕ್ಕದ್ದು ಸರಿಯಲ್ಲ. ಬೆಂಗಳೂರು ಡೈರಿ ಮಾರಾಟ ಮಾಡತಕ್ಕ ಹಾಲನ್ನು ಸ್ಟ್ಯಾಂಡರ್ಡೈಸ್ಡ್ ಮಾಡಿದ್ದಾರೆ. ಆ ಹಾಲಿನಲ್ಲಿ 4.5 ಕೊಬ್ಬಿನ ಅಂಶ ಇರಲೇಬೇಕು. ಎನ್ನತಕ್ಕದ್ದು ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದೇ ರೀತಿ ನೀರು ಇಷ್ಟು ಹಾಕಲೇಬೇಕೆಂದು ಇದೆ. ಅದಕ್ಕಿಂತ ಜಾಸ್ತಿ ಹಾಕುತ್ತಾ ಇದ್ದೀರಿ.

ಅಧ್ಯಕ್ಷರು : ಮಾನ್ಯ ಯಾಡಿಯೂರಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ನೀವು ರೈತರಿಗೆ ಒಂದು ರೂಪಾಯಿ ಹೆಚ್ಚು ಮಾಡುವುದಕ್ಕೆ ನಮ್ಮದು ಯಾವ ಆಕ್ಷೇಪಣೆಯೂ ಇಲ್ಲ. ಸಾಧ್ಯವಾದರೆ ಓವರ್‌ಹೆಡ್ ಚಾರ್ಜಸ್ ಸೋರಿಕೆಯನ್ನು ತಡೆಗಟ್ಟಿ ಗ್ರಾಹಕರಿಗೆ ಹೊರೆ ಬೀಳದಹಾಗೆ ಮಾಡಿದರೆ ಅದು ಒಳ್ಳೆಯ ಕೆಲಸವಾಗುತ್ತದೆಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಸಬ್ಸಿಡಿ ವಿಚಾರ ಎತ್ತಲೇ ಇಲ್ಲ. ಅವರು ಸ್ಪಷ್ಟೀಕರಣ ಕೊಟ್ಟಿದ್ದು, ಯಡಿಯೂರಪ್ಪನವರು ಏನು ಹೇಳುತ್ತಾರೆಂದರೆ ಒಂದು ರೂಪಾಯಿ ರೈತನಿಗೆ ಕೊಡುವುದಕ್ಕೆ ಯಾವ ತಕರಾರು ಇಲ್ಲ. ಕೆಎಂಎಫ್‌ನ ಡೈರಿಯ ಆಡಳಿತ ವ್ಯವಸ್ಥೆಯನ್ನು ಸುಧಾರಿಸಿ, ಸೋರಿ ಹೋಗುವುದನ್ನು ತಪ್ಪಿಸಿ ಈಗೇನು 10.50 ಪೈಸೆಗೆ ಮಾರುತ್ತಿದ್ದೀರಿ ಅದನ್ನು ಅಲ್ಲಿಗೆ ಲಿಮಿಟ್ ಮಾಡಿ ಜನರಿಗೆ ಹೊರೆ ಆಗಲಾರದೆ ಹಾಗೆ ಮಾಡಿಯೆಂದು ಹೇಳಿದ್ದಾರೆ ಅದು ಒಳ್ಳೆಯ ಸಲಹೆ. ಇದರ ಬಗ್ಗೆ ಯೋಚನೆ ಮಾಡಿ ಎಷ್ಟು ಸಾಧ್ಯವಾಗುತ್ತದೆ ಅಷ್ಟನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿ ಅದಕ್ಕೆ ಜಗಳ ಏಕೆ? ಅವರೊಂದು ಸಲಹೆ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಅರ್ಧ ಕೆಲಸ ಮುಗಿಸಿದಿರಿ.

ಅಧ್ಯಕ್ಷರು : ನಾನೇನು ಮಾಡಲಿ? ನೀವು ಸುಮ್ಮನೆ ಕುಳಿತಿದ್ದೀರಿ. ಅದಕ್ಕೆ ನಿಮ್ಮ ಪರವಾಗಿ ನಾನು ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಜನರ ಕಷ್ಟಗಳನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಸರ್ಕಾರಕ್ಕಿದೆ. ರೈತರ ಜೊತೆಯಲ್ಲಿ ಗ್ರಾಹಕರು, ಕಾರ್ಮಿಕರು ಇರುತ್ತಾರೆ. 57 ಲಕ್ಷ ರೈತರು ಇದ್ದಾಗ ಅವರ ಜೊತೆಯಲ್ಲಿಯೇ 45 ಲಕ್ಷ ಕೃಷಿ ಕಾರ್ಮಿಕರು ಇದ್ದಾರೆ. 20 ರೂಪಾಯಿ ಈರುಳ್ಳಿ ಬೆಲೆ ಇದ್ದಾಗ ಕೂಲಿಯವನಿಗೆ 15 - 20 ರೂಪಾಯಿ ಕೂಲಿ ಕೊಡುತ್ತೀರಿ.

ಅವನು ಈರುಳ್ಳಿಯನ್ನು ಪರ್ಚೇಸ್ ಮಾಡಿ ತಿನ್ನುವುದಕ್ಕೆ ಆಗುತ್ತದೆಯೇ ಇದನ್ನು ಯೋಚನೆ ಮಾಡಬೇಕು. ಬೇಕಾದರೆ ಬೆಲೆಯನ್ನು ನೀವು ಕ್ಲಾಸಿಫಿಕೇಷನ್ ಮಾಡಿ ಎ-ಕ್ಲಾಸ್‌ಗೆ 10 ರೂಪಾಯಿ ಬಿ-ಕ್ಲಾಸ್‌ಗೆ 8 ರೂಪಾಯಿ ಸಿ-ಕ್ಲಾಸ್‌ಗೆ 6 ರೂಪಾಯಿ ಈ ತರಹ ಮಾಡಿ. ಇದರಲ್ಲಿ ಸರ್ಕಾರದ ಜವಾಬ್ದಾರಿ ಕೂಡ ಇದೆ. ಸರ್ಕಾರದ ಜವಾಬ್ದಾರಿ ಗ್ರಾಹಕರನ್ನು ನೋಡಬೇಕು, ರೈತನನ್ನು ನೋಡಬೇಕು. ಕೃಷಿ ಕಾರ್ಮಿಕರು ಬೇರೆ ಕಾರ್ಮಿಕರನ್ನು ನೋಡಬೇಕು. ಇದನ್ನು ನೋಡಿಕೊಂಡು ನೀವು ಬೆಲೆಯನ್ನು ನಿಗದಿ ಮಾಡಬೇಕೇ ಹೊರತಾಗಿ, ನೀವು ಒಬ್ಬರೇ ಚಾಂಪಿಯನ್ಸ್ ಇನ್ನೊಬ್ಬರು ಏನೂ ಇಲ್ಲವೆನ್ನತಕ್ಕ ಭ್ರಮೆ ಇಟ್ಟುಕೊಂಡು ದಯವಿಟ್ಟು ಯಾರೂ ಮಾತನಾಡುವುದಕ್ಕೆ ಹೋಗಬೇಡಿ. ನಾಳೆ ಇದೇ ಪ್ರಶ್ನೆಯನ್ನು ಬೇರೆಯವರು ಕೇಳಿದಾಗ, ರೈತರಿಗೆ ಭುಜಕ್ಕೆ ಭುಜಕೊಟ್ಟು ಕೆಲಸಮಾಡತಕ್ಕ ಶ್ರಮಜೀವಿಗಳಿದ್ದಾರೆ. ನಮಗೇನು ಸಹಾಯ ಮಾಡುತ್ತೀರಿ ಎಂದು ಕೇಳಿದಾಗ ಅದಕ್ಕೆ ಉತ್ತರ ನಿಮ್ಮಲ್ಲಿರುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಒಂದು ರೂಪಾಯಿ ಜಾಸ್ತಿ ಮಾಡಿದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದನೆ ಮಾಡುವವರಿಗೆ ಒಂದು ವರ್ಷಕ್ಕೆ 3 ಕೋಟಿ ರೂಪಾಯಿ ಜಾಸ್ತಿಯಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇಲ್ಲ ಲೆಕ್ಕಮಾಡಿದರೆ ಅವರಿಗೆ ಒಂದು ರೂಪಾಯಿ ಅಂದರೂ 18 ಲಕ್ಷ ರೂಪಾಯಿ ಆಯಿತು. 18-365 ದಿನ 54 ಕೋಟಿ ರೂಪಾಯಿಯಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : 54 ಕೋಟಿ ರೂಪಾಯಿ ಆಗಲಿ. ಆದರೆ ಎಮ್ಮೆ ಸಾಕುವವರು, ಹಸು ಸಾಕುವವರು ಯಾರು? ಅದನ್ನು ನಾವು ಮೊದಲು ಯೋಚನೆ ಮಾಡಬೇಕು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗ ಹಾಗೂ ಕೃಷಿ ಕಾರ್ಮಿಕರನ್ನು ಐಡೆಂಟಿಫೈ ಮಾಡಿ ನಾವು ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಅವರಿಗೆ ಸಾಲ ಕೊಡುತ್ತಿದ್ದೇವೆ. ಶೇಕಡ 90 ರಷ್ಟು ಅವರಿಗೆ ಕೊಡುವುದು. ಮಳೆಯ ಆಧಾರಿತ ಪ್ರದೇಶಗಳಲ್ಲಿ ರೈತರಿಗೆ ನೂರಕ್ಕೆ ತೊಂಭತ್ತು ಜನ ಪೂರ್ಣ ಹೈನುಗಾರಿಕೆ ಮೇಲೆ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಆದ್ದರಿಂದ ಶೇಕಡ 75 ರಿಂದ 80 ಭಾಗ ಶ್ರಮದ ಮೂಲಕ ಹಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅಂತಹ ಹಾಲನ್ನು ನಾವು ಇಷ್ಟೊಂದು ಕಡಿಮೆ ದರದಲ್ಲಿ ಕುಡಿಯುತ್ತಿರುವ ಬಗ್ಗೆ ನಿಜವಾಗಿಯೂ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ನೀಲಿ ಬೆಲೆ ಜಾಸ್ತಿಯಾಯಿತು ಎಂದು ವಿದ್ಯಾವಂತರು ಚಳುವಳಿಗೆ ಬಂದರು ಅವಿದ್ಯಾವಂತರು ಈ ದೇಶದಲ್ಲಿ ರಾಜ್ಯದಲ್ಲಿ ಎಮ್ಮೆ ಹಸು ಸಾಕುವವರ ಜೀವನ ಭದ್ರತೆಯ ಬಗ್ಗೆ ಒಂದು ವಾಕ್ಯ ಯಾರೂ ಮಾತನಾಡುವುದಿಲ್ಲ. 800 ಕೋಟಿ ರೂಪಾಯಿ ಸಂಬಳ ಜಾಸ್ತಿ ಮಾಡಿದರು. ಯಾರು ಮಾತನಾಡುವುದಿಲ್ಲ. 30-40 ಕೋಟಿ ರೂಪಾಯಿ ಜಾಸ್ತಿಯಾದರೆ ನಾವೆಲ್ಲ ಚರ್ಚೆ ಮಾಡುತ್ತಿದ್ದೇವೆ. ಇದು ನಿಜವಾಗಲೂ ಗಂಭೀರವಾದುದು. ಒಂದು ರೂಪಾಯಿ ಕೊಡುತ್ತೇವೆಂದು ಹೇಳಿ ಮುಲಾಜಿಗೆ ನಾವು ಮಾತನಾಡುತ್ತಿದ್ದೇವೆ. ಗುಜರಾತ್‌ನಲ್ಲಿ ಎಷ್ಟು ಕೊಡುತ್ತಿದ್ದಾರೆ? ಒಂದು ಲೀಟರ್ ಹಾಲಿಗೆ 15 ರೂಪಾಯಿ ಕೊಡುತ್ತಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಫ್ಯಾಟ್ ಕಂಟೆಂಟ್ ಮೇಲೆ ಬೆಲೆ ವ್ಯತ್ಯಾಸವಾಗುತ್ತದೆ. ಗುಜರಾತ್‌ನಲ್ಲಿ ಎಮ್ಮೆ ಹಾಲಿಗೆ ಬೆಲೆ ಜಾಸ್ತಿ. ಲೋಕಲ್ ತಳಿಯನ್ನು ಅವರು ಉಳಿಸಿಕೊಂಡಿದ್ದಾರೆ. ಅದರಿಂದ ಹಾಲು ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಕ್ರಾಸ್‌ಬ್ರೀಡ್ ಜಾಸ್ತಿಯಾಗಿದೆ. ಕ್ರಾಸ್ ಮಾಡಿದ ಹಸು ಹೆಚ್‌ಎಫ್, ಜರ್ಸಿ ಇದೆ. ಕ್ರಾಸ್‌ಬ್ರೀಡ್ ಜರ್ಸಿ ಇಂಡಿಯಾದಲ್ಲಿ ಜಾಸ್ತಿಯಿದೆ. 20 ಪರ್ಸೆಂಟ್ ಮೇಲೆ ಕ್ರಾಸ್ ಮಾಡಿದ್ದೇವೆ. ಗುಜರಾತ್‌ನಲ್ಲಿ ಮೂಲಕ ತಳಿಗಳನ್ನು ಉಳಿಸಿಕೊಂಡಿದ್ದಾರೆ. ಮುರ್‍ರಾ ಜಾತಿಯ ಎಮ್ಮೆ ಸ್ಪೂರ್ತಿ ಇವೆಲ್ಲಾ ಉಳಿಸಿಕೊಂಡಿದ್ದಾರೆ. ಫ್ಯಾಟ್ ಕಂಟೆಂಟ್ ಮೇಲೆ ಹೆಚ್ಚು ರೇಟ್ ಕೊಡುತ್ತಿದ್ದಾರೆ. ಇವತ್ತು ನಮ್ಮಲ್ಲಿ ಧಾರವಾಡದಲ್ಲಿರತಕ್ಕ ಎಮ್ಮೆ ಹಾಲಿನಲ್ಲಿ ಕೊಬ್ಬಿನ ಅಂಶ ಹೆಚ್ಚು ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಏನು ಹಾಲು ಉತ್ಪಾದನೆ ಮಾಡುತ್ತಿದ್ದಾರೆ ಅದರಲ್ಲಿ ಕೊಬ್ಬಿನ ಅಂಶ ಜಾಸ್ತಿಯಿದೆ. ಬೆಂಗಳೂರಿನ ಜನ ಆ ಹಾಲನ್ನು ಲೈಕ್ ಮಾಡುವುದಿಲ್ಲ. ಮಾನ್ಯ ಪ್ರಮೀಳಾ ನೇಸರ್ಗಿಯವರಿಗೆ ಗೊತ್ತಿದೆ 4.5 ಎಸ್‌ಎನ್‌ಎಫ್ ಅದನ್ನು ಉಪಯೋಗಿಸುವುದಕ್ಕೆ ನಾವು ಬೇಜಾರು ಪಡುತ್ತೇವೆ ಅದಕ್ಕಿಂತ ಜಾಸ್ತಿಯಾದರೆ ನಾವು ಹಾಲು ಕುಡಿಯುವುದಿಲ್ಲ. ಅದಕ್ಕಾಗಿ ಬೆಲೆ ವ್ಯತ್ಯಾಸವಾಗುತ್ತದೆ. ಕಾಸ್ಟ್ ಡಿಪೆಂಡ್ ಆಗಿರುವುದು ಫ್ಯಾಟ್ ಕಂಟೆಂಟ್ಸ್ ಮೇಲೆ. ಫ್ಯಾಟ್ ಎಲ್ಲಿ ಹೆಚ್ಚಿರುತ್ತದೆ ಅದಕ್ಕೆ ಇವತ್ತು ಹೈಯೆಸ್ಟ್ ರೇಟ್ ಕೊಡುತ್ತೇವೆ. ರೈತರಿಗೆ ಇವತ್ತು ನಾವೇನು ರೇಟ್ ಹಾಲಿಗೆ ಕೊಡುತ್ತಿದ್ದೇವೆ ಅದು ಹೆಚ್ಚಿಗೆ ಇದೆ. ನೀವು ಮಹಾರಾಷ್ಟ್ರ ಆಂಧ್ರಪ್ರದೇಶ ಮತು ತಮಿಳುನಾಡು ಎಲ್ಲರೂ ನಮಗಿಂತ ಕಡಿಮೆ ರೇಟ್ ಕೊಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅವರೇನು ಗುಜರಾತ್‌ನಲ್ಲಿ ರೇಟ್ ಹೆಚ್ಚಿದೆ ಎಂದು ಹೇಳಿದ್ದಾರೆ, ಗುಜರಾತ್‌ನಲ್ಲಿ ಹಾಲಿನ ದರವನ್ನು ಸರ್ಕಾರ ನಿಗದಿ ಮಾಡುವುದಿಲ್ಲ. ಫೆಡರೇಷನ್‌ನವರು ನಿಗದಿ ಮಾಡುತ್ತಾರೆ. ಅದನ್ನು ಇಲ್ಲಿಯೂ ಮಾಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇನ್ನೊಂದು ಆಗುತ್ತದೆ, ಒಂದು ರೂಪಾಯಿ ಜಾಸ್ತಿ ಮಾಡುತ್ತೇವೆಂದರೆ ಹಾಲಿನ ದರ ಒಂದು ರೂಪಾಯಿ ಜಾಸ್ತಿ ಮಾಡಿ 75 ಪರ್ಸೆಂಟ್ ಫೀಡ್ ಜಾಸ್ತಿ ಮಾಡಿದರೆ ಅವನಿಗೆ ಸಹಾಯ ಮಾಡಿದಂತಾಗುವುದಿಲ್ಲ. ಒಂದು ರೂಪಾಯಿ ಜಾಸ್ತಿ ಮಾಡಿ 75 ಪೈಸೆ ಕಿತ್ತು ಕೊಳ್ಳುವುದು ಬೇಡ. ನಿಜವಾಗಿ ಹೇಳಬೇಕಾದರೆ ಹಾಲಿನ ಉತ್ಪಾದನೆಯನ್ನು ತುಂಬಾ ಬಡವರು ಮಾಡುತ್ತಾರೆ. ಇಷ್ಟು ಮೋಸದ ಹಾಲನ್ನು ಕುಡಿಯುವವರು ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಲಿನ ದರವನ್ನು ನಿಗದಿ ಮಾಡಬೇಕಾದರೆ ಹುಚ್ಚು ಹುಚ್ಚಾಗಿ ನಿಗದಿ ಮಾಡುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಒಂದು ದೃಷ್ಟಿಯಿಂದ ನೋಡುವುದಕ್ಕೆ ಹೋದಾಗ ರೈತನಿಗೆ ಕೊಡುವುದನ್ನು ಖಂಡಿತಾ ಕೊಡಲೇಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು 60 ವರ್ಷ ಆಗುವವರೆಗೆ ನೌಕರರನ್ನು ಇಟ್ಟುಕೊಳ್ಳುವುದನ್ನು ವಿರೋಧ ಮಾಡಿದ್ದಾರೆ ಆ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಇವತ್ತು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ ಎನ್ನುವುದನ್ನು ಯೋಚನೆ

ಮಾಡಿದಾಗ, ಹಾಲಿನ ದರವನ್ನು ಏರಿಸುವುದರಲ್ಲಿ ಹಿಂದುಮುಂದು ನೋಡುತ್ತಿದ್ದೇವೆ. ಬಿಸಲೇರಿ ಬಾಟಲ್‌ಗೆ ಕೆಲಸಕ್ಕೆ ಬಾರದ ಕುಡಿಯುವ ನೀರಿಗೆ ಒಂದು ಬಾಟಲಿಗೆ ಎಷ್ಟು ಕೊಡುತ್ತಿದ್ದೇವೆ? ರೈತನ ಮುಖವಾಡದಲ್ಲಿ ಗ್ರಾಹಕರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾದದ್ದು ನಿಮ್ಮ ಕರ್ತವ್ಯ. ವೈಜ್ಞಾನಿಕವಾದ ಬೆಲೆಯನ್ನು ನಿಗದಿ ಮಾಡಬೇಕು, ಮಾಡದೇ ವಿಧಿಯಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ತೌಡು ಬೂಸದ ಬೆಲೆ ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಾಲಿನ ದರವನ್ನು ಹೆಚ್ಚು ಮಾಡಬೇಕಾಗಿದೆ. ಈ ದೃಷ್ಟಿಯಲ್ಲಿ ಗ್ರಾಹಕರಿಗೆ ತೊಂದರೆಯಾಗದ ರೀತಿಯಲ್ಲಿ ಎಚ್ಚರಿಕೆಯನ್ನು ವಹಿಸಬೇಕು. ಪ್ರತಿ ವರ್ಷ ಹಾಲಿನ ಬೆಲೆ ಜಾಸ್ತಿಯಾಗುತ್ತಿದ್ದರೆ ಗ್ರಾಹಕರಿಗೆ ಏನಾಗುತ್ತದೆ? ಏನಪ್ಪ ಇವರು ಪ್ರತಿ ಸಾರಿಯೂ ಹಾಲಿನ ರೇಟು ಜಾಸ್ತಿಮಾಡುತ್ತಾರೆನ್ನುವ ಭಾವನೆ ಬಾರದ ರೀತಿಯಲ್ಲಿ ವೈಜ್ಞಾನಿಕ ರೀತಿಯಲ್ಲಿ ಜಾಸ್ತಿ ಮಾಡಿ. ಪ್ರತಿ ವರ್ಷ ಜಾಸ್ತಿ ಮಾಡುತ್ತಾರೆನ್ನುವ ಭಾವನೆ ಬಾರದ ರೀತಿಯಲ್ಲಿ ಏನಾದರೂ ಒಂದು ಲಿಮಿಟ್ ಮಾಡಿ ದರವನ್ನು ಹೆಚ್ಚು ಮಾಡುವುದಕ್ಕೆ ಒಂದು ಅತ್ಯಂತ ಪ್ರಾಮಾಣಿಕ ಪ್ರಯತ್ನ ಮಾಡುವುದಕ್ಕೆ ತಾವು ಚಿಂತನೆ ಮಾಡಿ.

7.50 ಪಿ.ಎಂ

ಶ್ರೀ ಎಸ್.ಎಸ್. ಪಾಟೀಲ್ : ಒಂದು ಕಡೆ, ರೈತ ಬೆಳೆದಂಥ ಬೆಳೆಗೆ ಆತನೇ ದರ ನಿಗದಿ ಪಡಿಸಬೇಕೆಂದು ಒಂದು ಕಡೆ ಹೇಳುತ್ತೇವೆ, ಮತ್ತೊಂದು ಕಡೆ ನಾವು ಹಸ್ತಕ್ಷೇಪ ಮಾಡುತ್ತೇವೆ. ಆದುದರಿಂದ, ಬೆಲೆ ನಿಗದಿಪಡಿಸುವ ಕ್ರಮವನ್ನು ರೈತರಿಗೆ ಬಿಟ್ಟು ಕೊಡಬೇಕು.

ಶ್ರೀ ಸಿ. ಬೈರೇಗೌಡ : ಪ್ರೋಸೆಸಿಂಗ್ ಚಾರ್ಜ್ ಜಾಸ್ತಿಯಾಗುತ್ತಿರುವುದರಿಂದ ಅದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ತಾವು ಸೂಚನೆ ಕೊಟ್ಟಿದ್ದೀರಿ. ಈಗ ಗುಜರಾತ್ ರಾಜ್ಯದಲ್ಲಿ ಅಮುಲ್ ಡೈರಿ ಇದ್ದು, ಅದಕ್ಕಿಂತ ಉತ್ತಮವಾಗಿ ನಡೆಯುವ ಸಂಸ್ಥೆ ದೇಶದಲ್ಲಿ ಬೇರಾವುದೂ ಕೂಡ ಇಲ್ಲ. ಅಮುಲ್ ಡೈರಿಯಲ್ಲಿ ಪ್ರತಿ ಲೀಟರ್‌ಗೆ ರೂ.2.50 ಪೈಸೆಯಿಂದ ಮೂರು ರೂಪಾಯಿಗಳವರೆವಿಗೂ ಪ್ರೋಸೆಸಿಂಗ್ ಚಾರ್ಜ್ ಆಗುತ್ತಿದೆ. ಅದನ್ನು ನೀವು ಒಪ್ಪಿಕೊಳ್ಳಿ, ಅಲ್ಲಿ ಫ್ಯಾಟ್ ಕಂಟೆಂಟ್ ಜಾಸ್ತಿ ಇದೆ, ಇಲ್ಲಿ ವಾಲ್ಯುಮ್ ಜಾಸ್ತಿ ಇದೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದ ನಂತರ, ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಒಂದು ಮಾತನ್ನು ಹೇಳಿದರು. ಅವರಿಬ್ಬರೂ ಹೇಳಿದ ಮಾತುಗಳ ಒಟ್ಟು ಉದ್ದೇಶವಿಷ್ಟೇ : ಈ ರಾಜ್ಯದಲ್ಲಿರುವ ಕೆಲವರು ಕೆಲವು ವೃತ್ತಿಗಳನ್ನು ಅನುಸರಿಸಿಕೊಂಡು ತಮ್ಮ ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ. ಕೆಲವರು ಹೈನುಗಾರಿಕೆಯಲ್ಲಿ ತೊಡಗಿದ್ದಾರೆ, ಅವರು ಕಷ್ಟ ಜೀವಿಗಳು, ಅವರಿಗೆ ನ್ಯಾಯವಾದ ಬೆಲೆ ಸಿಗಬೇಕು, ಇನ್ನೂ ಕೆಲವರು ಹೈನುಗಾರಿಕೆಯಲ್ಲಿ ತೊಡಗಿಲ್ಲದಿರಬಹುದು. ಇವರು ಯಾವ ವರ್ಗಕ್ಕೆ ಸೇರಿದ್ದಾರೋ ಅದೇ ವರ್ಗಕ್ಕೆ ಸೇರಿರತಕ್ಕವರಾಗಿದ್ದು ಆರ್ಥಿಕವಾಗಿ ಅವರೂ ಕೂಡ ಶ್ರಮ ಜೀವಿಗಳು, ಅವರು ಬೇರೇನೋ ಕೆಲಸ ಮಾಡುತ್ತಿರಬಹುದು, ಅವರು ಮೇಲ್ವರ್ಗಕ್ಕೆ ಸೇರಿದವರಲ್ಲ, ಅವರಿಗೂ ಕೂಡ ಹಾಲು ಅನಿವಾರ್ಯ. ಇದೇ ವರ್ಗದ ಜನರು ಯಾರಿದ್ದಾರೆ, ಅವರು ಕೃಷಿ ಕಾರ್ಮಿಕರಿರಬಹುದು,

ಕೈಗಾರಿಕಾ ಕಾರ್ಮಿಕರಿರಬಹುದು ಅಥವಾ ಕೆಳ ವರ್ಗದ ಸರ್ಕಾರಿ ನೌಕರರಿಬಹುದು. ಅವರಿಗೆ ಹಾಲು ಕುಡಿಯಬೇಡಿರೆಂದು ನಾವು ಹೇಳುವುದಕ್ಕಾಗುವುದಿಲ್ಲ. ಅದು ಅನಿವಾರ್ಯವಾಗಿರುವುದರಿಂದ ಬೆಲೆ ಜಾಸ್ತಿ ಮಾಡುವುದರಿಂದ ಅವರಿಗೆ ದುಬಾರಿಯಾಗಬಾರದೆಂದು ಅವರ ಅಭಿಪ್ರಾಯವಾಗಿದೆ. ತಾವು ಎಲ್ಲಾ ವರ್ಗದ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆ.ಎಂ.ಎಫ್. ಹಾಲು ಕನ್‌ಸ್ಯೂಮ್ ಮಾಡುವ ಕ್ಯಾಟಗಿರಿ ಬಹಳ ಕಡಿಮೆ, ನಾಟ್ ಈವನ್ ಟೆನ್ ಟು ಫಿಫ್ಟೀನ್ ಪರ್ಸೆಂಟ್. ಇದರ ಬಗ್ಗೆ ಒಂದು ಎಕ್ಸ್‌ಪೆರಿಮೆಂಟ್ ಮಾಡಲಾಗಿತ್ತು. ಏನೆಂದರೆ, ಲೋ ಫ್ಯಾಟ್ ಮಿಲ್ಕ್ ಅನ್ನು ಅವರಿಗೆ ಕೊಟ್ಟು, ಆ ಕ್ಯಾಟಗಿರಿ ಏನಾಗುತ್ತದೆಂಬುದನ್ನು ನೋಡಬೇಕೆಂಬುದಾಗಿತ್ತು. ಕೆ.ಎಂ.ಎಫ್.ನಿಂದ ಏನು ಹಾಲು ಕುಡಿಯುತ್ತಿದ್ದಾರೆ, ಆ ಕ್ಯಾಟಗಿರಿಯವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರೂ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳಿದಂತೆ ಈ ಪ್ರೋಗ್ರಾಂನಲ್ಲಿ ಏನಾದರೂ ಹಾಲಿನ ಧಾರಣೆ ಹೆಚ್ಚು ಮಾಡಿದರೆ ನಿಜವಾಗಿಯೂ ಗ್ರಾಮೀಣ ಪ್ರದೇಶದ ಬಡವನಿಗೆ ಸಹಾಯವಾಗುತ್ತದೆ. ಇವೊತ್ತು ಆತ 10,000-12,000 ರೂಪಾಯಿಗಳನ್ನು ಕೊಟ್ಟು ಒಂದು ಕ್ರಾಸ್‌ಬ್ರೀಡ್ ಹಸುವನ್ನು ಕೊಂಡು ಸರ್ಕಾರದ ಯೋಜನೆಯಡಿ ಬಡ್ಡಿ ಕಟ್ಟುತ್ತಿದ್ದಾನೆ, ಮತ್ತು ಇವೊತ್ತು ಡಿಫಾಲ್ಟರ್ ಆಗಿರುವವನಾಗಿದ್ದಾನೆ, ಯಾರ ಬಗ್ಗೆ ನಿಜವಾದ ಕಾಳಜಿ ಇಟ್ಟುಕೊಂಡು ಮಾತನಾಡುತ್ತಿದ್ದೇವೆಯೋ ಆತನಿಗೆ ಸಹಾಯವಾಗುವಂತಾಗುತ್ತದೆ. ದೊಡ್ಡ ರೈತರ್ಯಾರೂ ಇವೊತ್ತು ಹಾಲಿನ ದಂಧೆಯಲ್ಲಿ ಇಲ್ಲ, ನಿಜವಾಗಿಯೂ ಬಡವರೇ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು. ಆದುದರಿಂದ, ಒಂದು ರೂಪಾಯಿ ಹೆಚ್ಚು ಮಾಡುವುದಲ್ಲ, ಕನಿಷ್ಠ ಎರಡು ರೂಪಾಯಿಗಳನ್ನಾದರೂ ಜಾಸ್ತಿ ಮಾಡಿದರೆ ಆತ ಉಳಿದುಕೊಳ್ಳುತ್ತಾನೆ. ಎಲ್ಲಾ ರಾಜ್ಯಗಳಲ್ಲೂ ಎರಡು ವ್ಯವಸ್ಥೆಗಳಿವೆ. ಮಳೆಗಾಲಕ್ಕೆ ಒಂದು ಧಾರಣೆ, ಬೇಸಿಗೆ ಕಾಲಕ್ಕೆ ಇನ್ನೊಂದು ಧಾರಣೆಯನ್ನು ಹಾಲಿಗೆ ಕೊಡಲೇಬೇಕು. ಮಳೆಗಾಲದಲ್ಲಿ ಹಸುಗಳು ಹಸಿರು ಮೇವು ತಿನ್ನುವುದರಿಂದ ಆತನಿಗೆ ಪ್ರೊಡಕ್ಷನ್ ಕಾಸ್ಟ್ ಕಡಿಮೆಯಾಗುತ್ತದೆ. ಬೇಸಿಗೆಯಲ್ಲಿ ಆತನಿಗೆ ಇನ್‌ಸೆಂಟಿವ್ ಕೊಡುತ್ತಿಲ್ಲ ಅಥವಾ ಜಾಸ್ತಿ ಧಾರಣೆ ಕೊಡುತ್ತಿಲ್ಲ. ಇದರಿಂದಾಗಿ ಹಾಲಿನ ಉತ್ಪಾದನೆ ಇಳಿಮುಖವಾಗುವುದರಲ್ಲಿ ಎರಡು ಮಾತಿಲ್ಲ. ಅದುದರಿಂದ, ಹಾಲಿಗೆ ಎರಡು ರೀತಿಯ ಧಾರಣೆ ನಿಗದಿಪಡಿಸುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಶ್ರೀ ಬಿ.ಬಿ. ನಿಂಗಯ್ಯ : ಈ ವಿಷಯವನ್ನು ನಾನು ಹೆಚ್ಚು ಅವಲಂಬಿಸುವುದಕ್ಕೆ ಹೋಗದೆ ತಾವು ದರದ ಬಗ್ಗೆ ಕೇಳಿದಿರಿ. ಆಂಧ್ರಪ್ರದೇಶದಲ್ಲಿ ಒಂದು ಲೀಟರ್ ಟೋನ್ಡ್ ಮಿಲ್ಕ್‌ಗೆ ಏಳು ರೂಪಾಯಿಯಂತೆ ಚಾರ್ಜ್ ಮಾಡಿದರೆ, ತಮಿಳುನಾಡಿನಲ್ಲಿ ರೂ.8.30 ಪೈಸೆಯಂತೆ ರೈತರಿಗೆ ಕೊಡುತ್ತಿದ್ದಾರೆ. ಆದರೆ, ಕರ್ನಾಟಕದಲ್ಲಿ ನಾವು ರೈತರಿಗೆ ಕೊಡುತ್ತಿರುವುದು ರೂ. 8.50 ಪೈಸೆ. ಈ ಎರಡೂ ರಾಜ್ಯಗಳಿಗೆ ಹೋಲಿಸಿದರೆ ನಾವೇ ಜಾಸ್ತಿ ಕೊಡುತ್ತಿದ್ದೇವೆ. ಗ್ರಾಹಕರಿಗೆ ರೂ.10.50 ಪೈಸೆಯಂತೆ ವಿಧಿಸುತ್ತಿದ್ದೇವೆ. ಇದರಲಿ ಹ್ಯಾಂಡ್ಲಿಂಗ್ ಚಾರ್ಜಸ್ ಅನ್ನು ಕಡಿಮೆ ಮಾಡುವುದಕ್ಕಾಗುತ್ತದೆಯೇ ಎಂಬ ತಮ್ಮ ಸಲಹೆ ಏನಿದೆ, ನಾವು ಹೆಚ್ಚು ಪ್ರಮಾಣದಲ್ಲಿ ಹಾಲನ್ನು

ಶೇಖರಿಸುವುದರ ಮೂಲಕ ಹ್ಯಾಂಡ್ಲಿಂಗ್ ಚಾರ್ಜಸ್ ಅನ್ನು ಕಡಿಮೆ ಮಾಡಿ ರೈತರಿಗೆ ನಾವು ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ದಿಸೆಯಲ್ಲಿ ಮಾನ್ಯ ಸದಸ್ಯರುಗಳ ಸಹಕಾರ ಕೋರುತ್ತಿದ್ದೇನೆ. ಮಾನ್ಯ ಸದಸ್ಯರಾದ ಜೆ.ಸಿ. ಮಾಧುಸ್ವಾಮಿಯವರು ಮಾತನಾಡುತ್ತಾ ಫ್ಲಷ್ ಸೀಜನ್ ಮತ್ತು ಲೀನ್ ಸೀಜನ್ ಬಗ್ಗೆ ಸಲಹೆ ಮಾಡಿದರು. ಹಳ್ಳಿಗಳಲ್ಲಿ ಈ ಕಾಲದಲ್ಲಿ ಎಲ್ಲಾ ಕಡೆಗಳಲ್ಲೂ ಡ್ರೈ ಸೀಜನ್ ಇದೆ, ಇದರಿಂದಾಗಿ ಹಾಲು ಉತ್ಪಾದನೆ ಬಹಳ ಕಡಿಮೆಯಾಗಿದೆ. ಹದಿನೆಂಟೂವರೆ ಲಕ್ಷ ಲೀಟರ್ ಬರುತ್ತಿದ್ದುದು ಈಗ ಹದಿನಾಲ್ಕು ಲಕ್ಷ ಲೀಟರ್‌ಗಳಿಗೆ ಇಳಿದಿದೆ. ಹಾಲಿನ ಉತ್ಪಾದನಾ ಪ್ರಮಾಣವನ್ನು ಜಾಸ್ತಿ ಮಾಡಿ ರೈತರುಗಳಿಗೆ ಎನ್‌ಕರೇಜ್ ಮಾಡುವ ದೃಷ್ಟಿಯಿಂದ ಹಾಲಿನ ದರವನ್ನು ಒಂದೂವರೆ ರೂಪಾಯಿಗಳಷ್ಟು ಇವೊತ್ತಿನಿಂದ ಹೆಚ್ಚು ಮಾಡುತ್ತಿದ್ದೇನೆಂಬ ಮಾತನ್ನು ಹೇಳುತ್ತಿದ್ದೇನೆ. ಜಾಸ್ತಿ ಮಾಡಿದ ಅಷ್ಟೂ ಹಣವನ್ನು ರೈತರಿಗೆ ಕೊಡುವ ಕೆಲಸ ಮಾಡತ್ತೇವೆಂದು ಈ ಸದನಕ್ಕೆ ಭರವಸೆ ಕೊಡುತ್ತೇನೆ. ಆದುದರಿಂದ, ತಾವುಗಳೆಲ್ಲರೂ ಇದಕ್ಕೆ ಬೆಂಬಲ ಸೂಚಿಸಿ ಒಪ್ಪಬೇಕೆಂದು ಹೇಳಬಯಸುತ್ತೇನೆ. ಇವೊತ್ತು ಕೆ.ಎಂ.ಎಫ್‌ನಲ್ಲಿ 13 ಯೂನಿಯನ್‌ಗಳಿದ್ದು, ಆ ಪೈಕಿ 11 ಯೂನಿಯನ್‌ಗಳು ಕಳೆದ 2-3 ವರ್ಷಗಳಿಂದ ಲಾಭದಲ್ಲಿವೆ. ಈ 13 ಯೂನಿಯನ್‌ಗಳ ಮೂಲಕ ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ ಎಸ್.ಸಿ.ಪಿ.ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಹಸುಗಳನ್ನು ಕೊಳ್ಳಲು ಸಾಲ ಕೊಡುತ್ತಿದ್ದು, ಸದರಿ ನಿಗಮದಿಂದ ಈಗಾಗಲೇ 13 ಕೋಟಿ 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸುಮಾರು 16,465 ಮಿಶ್ರ ತಳಿ ಹಸುಗಳನ್ನು ಒದಗಿಸಿಕೊಟ್ಟಿದ್ದೇವಲ್ಲದೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 20 ಕೋಟಿ ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ............

ಶ್ರೀ ವಾಟಾಳ್ ನಾಗರಾಜ್ : ಒಂದು ವಯಾ ಮೀಡಿಯಾ ಮಾಡಿ ಎಂದರೆ ಏಕ್‌ದಂ ಹನ್ನೆರಡು ರೂಪಾಯಿಗಳಿಗೆ ಹಾಲಿನ ದರ ಏರಿಸಿದರೆ ತೀರಾ ಹೆಚ್ಚಾಯಿತು.

ಶ್ರೀ ಕೆ.ಎಸ್. ಈಶ್ವರಪ್ಪ : ರೈತರಿಗೆ ರೂ. 9.50 ಪೈಸೆಯಿಂದ ರೂ.10.00 ಮಾಡುತ್ತೀರಾ? ಗ್ರಾಹಕರಿಗೆ ರೂ.12.00 ಮಾಡುವುದಿಲ್ಲ ತಾನೇ? ನಾವು ಕೊಟ್ಟಿರುವ ಸಲಹೆ ಏನು? ನೀವು ಮಾಡುತ್ತಿರುವುದೇನೆ? ಇಲ್ಲಿ ಏನು ಅನ್ಯಾಯ ನಡೆಯುತ್ತಿದೆ, ಭ್ರಷ್ಟಾಚಾರ ನಡೆಯುತ್ತಿದೆ, ಮತ್ತೆ ಸೋರಿ ಹೋಗುವುದನ್ನು ತಪ್ಪಿಸಿ.

ಶ್ರೀ ವಾಟಾಳ್ ನಾಗರಾಜ್ : ಆಗತಕ್ಕಂಥ ಭ್ರಷ್ಟಾಚಾರ, ಮತ್ತು ಸೋರಿಕೆಯನ್ನು ತಪ್ಪಿಸಿ ಎಂದು ನಾವು ಹೇಳಿದರೆ ನೀವು ಏಕ್‌ದಂ ಹನ್ನೆರಡು ರೂಪಾಯಿಗಳಿಗೆ ಏರಿಸಿದರೆ ಸರಿ ಇದೆಯೇ?

ಶ್ರೀ ಎಚ್.ಡಿ. ಬಸವರಾಜು : ತಾವು ಒಂದು ವಿಷಯದ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಹಾಲಿನ ದರದಲ್ಲಿ ಒಂದೂವರೆ ರೂಪಾಯಿಯನ್ನು ಜಾಸ್ತಿ ಮಾಡಿ ಅದನ್ನು ರೈತರಿಗೆ ಕೊಡುತ್ತಿರುವುದು ತುಂಬಾ ಸಂತೋಷ. ಆದರೆ, ಆ ರೀತಿ ಹೆಚ್ಚು ಮಾಡಿದ ಹಣವನ್ನು ಏಕಾಏಕಿ ಗ್ರಾಹಕರ ತಲೆ ಮೇಲೆ ಹಾಕಿದರೆ ಅವರು ಎಲ್ಲಿಂದ ತರುತ್ತಾರೆ? ಆ ಹಣವನ್ನು ಸರ್ಕಾರವೇ ಭರಿಸುವುದಾದರೆ ನಮ್ಮ ಅಡ್ಡಿಯೇನೂ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ : ಇದು ನಿಜವಾಗಿಯೂ ಹೆಚ್ಚು ಹೊರೆಯಾಯಿತು.

ಶ್ರೀ ಎಚ್.ಡಿ. ಬಸವರಾಜು : ಇದರಿಂದ ನೀವು ಬಡವರ ಹೊಟ್ಟೆ ಮೇಲೆ ಹೊಡೆದಂತಾಯಿತು. ಒಂದೂವರೆ ರೂಪಾಯಿಯೆಂದರೆ ಸಾಮಾನ್ಯವೇ? ಒಂದು ಲೋಟ ಕಾಫಿ ಕುಡಿಯುವುದನ್ನೂ ಕಿತ್ತುಕೊಳ್ಳುತ್ತಿದ್ದೀರಿ, ಒಂದು ಲೋಟ ಕಾಫಿ ಕುಡಿಯುವಂಥ ವ್ಯವಸ್ಥೆಯನ್ನು ಸರ್ಕಾರ ತಪ್ಪಿಸುತ್ತಿದೆ, ನಾನು ಇದನ್ನು ವಿರೋಧಿಸುತ್ತೇನೆ. ನಿಜವಾಗಿಯೂ ತಾವು ಏನು ನಿರ್ಧಾರ ತೆಗೆದುಕೊಂಡಿದ್ದೀರಿ, ಅದು ಸ್ವಾಗತಾರ್ಹವಾದುದಾಗಿದೆ. ಆದರೆ, ಅದನ್ನು ಸರ್ಕಾರ ಬೇರೆ ಬಾಬ್ತಿನಿಂದ ಭರಿಸಬೇಕು, ಇದನ್ನು ಗ್ರಾಹಕರ ಮೇಲೆ ಹೇರುವಂಥ ಕೆಲಸವನ್ನು ತಾವು ಮಾಡಬೇಡಿ.

ಶ್ರೀ ಬಿ.ಬಿ. ನಿಂಗಯ್ಯ : ಜಾಸ್ತಿ ಮಾಡತಕ್ಕಂಥ ಹಣವನ್ನು ಸಂಪೂರ್ಣವಾಗಿ ನಾವು ರೈತರಿಗೆ ಕೊಡುತ್ತೇವೆ. ಆದರೆ, ಈ ರೀತಿ ಹೆಚ್ಚು ಮಾಡಿದ ಹಣವನ್ನು ಸರ್ಕಾರ ಭರಿಸುವುದಕ್ಕೆ ಸಾಧ್ಯವಿಲ್ಲ, ಯಾರೂ ಇವೊತ್ತು ಹಾಲನ್ನು ಕೊಂಡುಕೊಳ್ಳುತ್ತಾರೋ ಅವರೇ ಭರಿಸಬೇಕು.

ಶ್ರೀ ಎಚ್.ಡಿ. ಬಸವರಾಜು : ಬೇಕಾದರೆ ನೀವು ಇದು ರೂಪಾಯಿಯನ್ನು ಜಾಸ್ತಿ ಮಾಡಿ ಅದನ್ನು ರೈತರಿಗೆ ಕೊಡುತ್ತೇವೆಂದರೆ ನಮ್ಮದೇನೂ ತಕರಾರಿಲ್ಲ. ಅದನ್ನು ಗ್ರಾಹಕರೇ ಭರಿಸಬೇಕೆಂದರೆ ಅವರು ಎಲ್ಲಿಗೆ ಹೋಗಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ಕನಿಷ್ಠ ಎರಡು ರೂಪಾಯಿಯಷ್ಟಾದರೂ ಜಾಸ್ತಿ ಮಾಡಬೇಕು, ಒಂದೂವರೆ ರೂಪಾಯಿ ಸಾಕಾಗುವುದಿಲ್ಲ.

ಶ್ರೀ ಎಚ್.ಡಿ. ಬಸವರಾಜು : ನೀವು ಎರಡು ರೂಪಾಯಿ ಇಲ್ಲದಿದ್ದರೆ ಮೂರು ರೂಪಾಯಿಗಳಷ್ಟನ್ನಾದರೂ ಹೆಚ್ಚು ಮಾಡಿಕೊಳ್ಳಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಆ ಬಾಬ್ತಿಗೆ ಸರ್ಕಾರ ಬೇರೆ ಹಣವನ್ನು ಒದಗಿಸಬೇಕು, ಆ ಹಣವನ್ನು ಯಾವುದೇ ಕಾರಣಕ್ಕೂ ಗ್ರಾಹಕರಿಂದ ವಸೂಲು ಮಾಡಬಾರದು. ಗ್ರಾಹಕರಿಂದ ವಸೂಲು ಮಾಡುವುದಾದರೆ ದಿನ ಬೆಳಗಾದರೆ ಒಂದು ಲೋಟ ಕಾಫಿ ಕುಡಿಯುವುದಕ್ಕೂ ಅವಕಾಶವಿರುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಒಂದು ರೂಪಾಯಿ ಐವತ್ತು ಪೈಸೆಯಷ್ಟು ಜಾಸ್ತಿ ಮಾಡಿ ಫೀಡ್ ಬೆಲೆ ಜಾಸ್ತಿ ಮಾಡಿ ಮತ್ತೆ ಆತನಿಂದ ವಾಪಸ್ಸು ಕಿತ್ತುಕೊಳ್ಳುವಂಥ ಕೆಲಸವಾಗಬಾರದು ನೇರವಾಗಿ ರೈತರಿಗೆ ಕೊಡುವಂಥ ಕೆಲಸವಾಗಬೇಕು, ಸರ್ಕಾರದ ತೀರ್ಮಾನವನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಎಚ್.ಡಿ. ಬಸವರಾಜು : ರೈತರ ಬಗ್ಗೆ ತೀರ್ಮಾನ ಮಾಡುತ್ತಿರುವುದು ಒಳ್ಳೆಯದು. ಆದರೆ, ಬಡವರ ಬಗ್ಗೆ ಇವರಿಗೆ ಕಾಳಜಿ ಇಲ್ಲ, ದೇಶದಲ್ಲಿ ಬರೀ ರೈತರಿಗೆ ಮಾತ್ರ ಒಳ್ಳೆಯದು ಮಾಡಬೇಕೆಂದರೆ ಬೇರೆ ಜನರಿಗೇನೂ ಬೇಡವೆ? ಬೇರೆ ವರ್ಗದ ಜನರು ಇಲ್ಲವೇ? ಜನಸಾಮಾನ್ಯರು ಇಲ್ಲವೇ? ದಯವಿಟ್ಟು ಜನ ಸಾಮಾನ್ಯರ ಬಗ್ಗೆಯೂ ಯೋಚನೆ ಮಾಡಿ. ರೈತ ವರ್ಗದಲ್ಲಿ ಕೆಲವರ ಹಿತಾಸಕ್ತಿಯನ್ನು ಮಾತ್ರ ತಾವು ಪರಿಗಣನೆ ಮಾಡುತ್ತೇವೆಂದರೆ ಮಾಡಿ, ಸ್ವಾಗತಿಸುತ್ತೇವೆ. ಆದರೆ,

ಹೆಚ್ಚು ಮಾಡಿರುವ ಒಂದೂವರೆ ರೂಪಾಯಿಯನ್ನು ಸರ್ಕಾರ ಬೇರೆ ಬಾಬ್ತಿನಿಂದ ಭರಿಸಬೇಕು, ಅದನ್ನು ಯಾವುದೇ ಕಾರಣಕ್ಕೂ ಗ್ರಾಹಕರ ಮೇಲೆ ಹಾಕಬಾರದು.

ಅಧ್ಯಕ್ಷರು : ಮಾನ್ಯ ನಿಂಗಯ್ಯನವರೇ ತಮ್ಮ ಭಾಷಣ ಮುಂದುವರಿಸಿ. ನನಗೆ ಸಿಟ್ಟು ಬಂದರೆ ನಾನು ಎಷ್ಟು ಬೇಕಾದರೂ ಏರಿಸಿಬಿಡುತ್ತೇನೆ. ತಾವು ಮುಂದುವರಿಸಿ, ಇಲ್ಲದಿದ್ದರೆ ನಾನು ಬಹಳ ಏರಿಸುಬಿಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ರೈತನಿಗೆ ಉಪಕಾರ ಮಾಡಿಕೊಡಬೇಕು; ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಗ್ರಾಹಕರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಈ ಸಂದರ್ಭದಲ್ಲಿ ನಾನು ಎಲ್ಲಾ ಸದಸ್ಯರುಗಳನ್ನು ಅಭಿನಂದಿಸುತ್ತೇನೆ. ಅವರಿಗೆ ಕೃತಜ್ಞತೆಗಳನ್ನೂ ಕೂಡ ಸಲ್ಲಿಸುತ್ತೇನೆ. ಇದೂ ಅಲ್ಲದೆ ಕೆಎಂಎಫ್‌ನವರು ಎರಡು ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಎನ್‌ಟಿಡಿಬಿಯವರು ಸುಮಾರು 50 ಕೋಟಿ ರೂಪಾಯಿ ವೆಚ್ಚದಲ್ಲಿ ಡೈರಿ ವ್ಯಾಪ್ತಿಯಲ್ಲಿ ಸುಮಾರು ಆರು ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸತಕ್ಕ ಸಾಮರ್ಥ್ಯವುಳ್ಳ ಒಂದು ಅತ್ಯಾಧುನಿಕ ನೂತನ ಮೆಗಾ ಡೈರಿಯನ್ನು ತರುತ್ತಿದ್ದಾರೆ. ಅಷ್ಟೇ ಅಲ್ಲದೆ ಬೆಂಗಳೂರಿನಲ್ಲಿ 12 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಹಾಲಿನ ಪುಡಿ ತಯಾರು ಮಾಡತಕ್ಕ ಘಟಕವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : 1.50 ರೂಪಾಯಿ ಯಾವತ್ತಿನಿಂದ ಜಾರಿ? ಇದೇನು ಬುಡಬುಡಿಕೆಯಾಟವೇ? ಯಾವ ತಾರೀಖಿನಿಂದ ಜಾರಿಗೆ ಕೊಡುತ್ತೀರಿ?

ಶ್ರೀ ಸಿ. ಬೈರೇಗೌಡ : ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಿದ್ದಾರೆ, ಜೂನ್ ಒಂದನೇ ತಾರೀಖಿನಿಂದ ಎಂದು.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾತ್ವಿಕವಾಗಿ ಇದು ಕೆಎಂಎಫ್ ಬೋರ್ಡ್‌ನಲ್ಲಿ ನಿರ್ಣಯ ಆಗಬೇಕು. ಇಲ್ಲಿ ಒಪ್ಪಿಕೊಂಡರೂ ಕೂಡ ಇದು ಕೆಎಂಎಫ್‌ನವರು ನಿರ್ಧಾರ ಮಾಡಬೇಕು.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಮಾಧುಸ್ವಾಮಿಯವರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಆ ರೀತಿ ಕ್ರಮ ಕೈಗೊಳ್ಳುತ್ತೇನೆ. ಮತ್ತೊಮ್ಮೆ ನಾನು ಈ ಸಂದರ್ಭದಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಕೆಎಂಎಫ್‌ನಿಂದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ಹಿಂದುಳಿದ ವರ್ಗದವರಿಗೆ ಹಸುಗಳನ್ನು ಕೊಡಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಕೆಎಂಎಫ್‌ನವರು ಪರಿಶಿಷ್ಟ ಜಾತಿ ಮತು ಪರಿಶಿಷ್ಟ ವರ್ಗದವರಿಗೆ ಎಲ್ಲಾ ತಾಲ್ಲೂಕುಗಳಿಗೆ ಈಕ್ವಲ್ ಆಗಿ ಡಿಸ್ಟ್ರಿಬ್ಯೂಷನ್ ಮಾಡುತ್ತಿಲ್ಲ. ಅಲ್ಲಿ ಡೈರೆಕ್ಟರ್ ಯಾರು ಇದ್ದಾರೆ ಅವರವರೇ ಡಿಸ್ಟ್ರಿಬ್ಯೂಷನ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಹಾಗೂ ಹಿಂದುಳಿದ

ವರ್ಗದವರಿಗೆ ಹಸುಗಳನ್ನು ಕೊಡುವಾಗ ಎಲ್ಲಾ ತಾಲ್ಲೂಕುಗಳಿಗೂ ಈಕ್ವಲ್ ಆಗಿ ಡಿಸ್ಟ್ರಿಬ್ಯೂಷನ್ ಆಗಿಲ್ಲವೆಂದು ಹೇಳಿದ್ದಾರೆ. ಹಸುಗಳನ್ನು ಹಂಚುವಾಗ ಯಾವ ಜಿಲ್ಲೆಗೂ ಒಂದೇ ಒಂದು ಹೆಚ್ಚು ಕಮ್ಮಿ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಏನು ಮಾಡಿದ್ದಾರೆಂದರೆ, ಯಾರೂ ಡೈರೆಕ್ಟರ್ ಇದ್ದಾರೆ ಅವರ ಕಡೆ ಹೆಚ್ಚು ಹಂಚಿಕೊಳ್ಳುತ್ತಿದ್ದಾರೆ. ಎಲ್ಲಾ ತಾಲ್ಲೂಕುಗಳಿಗೂ ಬರುವ ರೀತಿಯಲ್ಲಿ ಹಂಚಬೇಕು. ಅದರ ಬಗ್ಗೆ ಎನ್‌ಕ್ವೈರಿ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : 850-850 ಇರಬಹುದು, 750-750 ಇರಬಹುದು ಈ ತರಹ ಪೂರ್ತಿ ಈಕ್ವಲ್ ಆಗಿ ಡಿಸ್ಟ್ರಿಬ್ಯೂಟ್ ಆಗಿದೆ. ಎಲ್ಲಾ ತಾಲ್ಲೂಕುಗಳಿಗೂ ಈಕ್ವಲ್ ಆಗಿ ಮಾಡಿದ್ದೇವೆ. ಒಕ್ಕೂಟದಲ್ಲಿ ಮಾಡಿರುವುದಕ್ಕೆ ನಾನು ಜವಾಬ್ದಾರನಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದನ್ನೇ ನಾನು ಹೇಳುತ್ತಿದ್ದೇನೆ, ಏಕೆಂದರೆ ಕೆಲವು ತಾಲ್ಲೂಕುಗಳಿಗೆ ಡೈರೆಕ್ಟರ್ ಇದ್ದಾರೆ, ಕೆಲವು ತಾಲ್ಲೂಕುಗಳಿಗೆ ಡೈರೆಕ್ಟರ್ ಇಲ್ಲ. ಡೈರೆಕ್ಟರ್ ಇರುವ ಕಡೆಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದ್ದರಿಂದ ಸಾಧ್ಯವಾದಷ್ಟೂ ಒಂದು ಪಾಪ್ಯುಲೇಷನ್ ಬೇಸಿಸ್ ಇಟ್ಟುಕೊಂಡು ಪ್ರತಿ ತಾಲ್ಲೂಕಿಗೂ ಬರುವ ಹಾಗೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಅಂತಹದ್ದು ಏನಾದರೂ ಇದ್ದರೆ ನನ್ನ ಗಮನಕ್ಕೆ ತನ್ನಿ. ಅದನ್ನು ನಾನು ಸರಿಪಡಿಸುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ನಾನು ಮತ್ತು ರೇವಣ್ಣನವರು ಕೂತು ಅದನ್ನು ಸರಿಪಡಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ದಯಮಾಡಿ ಆ ಕೆಲಸ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ ಒಂದು ನಿಮಿಷ. ಕೇವಲ ಸೀಮಿತವಾಗಿ ಎಮ್ಮೆ ಹಸು ಸಾಲ ಕೊಡುವುದಕ್ಕೆ ಟೈ ಅಫ್ ಅರೇಂಜ್‌ಮೆಂಟ್ ಮಾಡಿಕೊಳ್ಳುತ್ತೇವೆಂದು ಹೇಳಿ. ಆಯಾ ಏರಿಯಾ ಬ್ಯಾಂಕುಗಳಿಗೆ ನೀವು ಅರೇಂಜ್‌ಮೆಂಟ್ ಮಾಡಿಕೊಳ್ಳಿ. ಹೈನು ಉತ್ಪಾದನೆಗೆ ಉದ್ಯೋಗಕ್ಕೋಸ್ಕರ ಸಾಲ ಕೊಡತಕ್ಕ ವಿಷಯದಲ್ಲಿ ಸಬ್ಸಿಡಿದ್ದು ಏನೂ ಅವಶ್ಯಕತೆ ಇರುವುದಿಲ್ಲ. ಆ ತರಹ ಅನುಕೂಲ ಮಾಡಿಕೊಡಬೇಕು. ಟೈ ಅಫ್ ಅರೇಂಜ್‌ಮೆಂಟ್ ಡೈರಿ ಮೂಲಕ ಹಣವನ್ನು ಹಿಡಿದು ಹಣವನ್ನು ಬ್ಯಾಂಕಿಗೆ ಕೊಡುವುದು. ಯಾವ ಬ್ಯಾಂಕಿನವರೂ ಸಾಲ ಕೊಡುವುದಿಲ್ಲ. ಈ ತರಹ ಮಾಡಿದರೆ ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಬ್ಯಾಂಕಿನವರು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಒಬ್ಬರಿಗೂ ಸಾಲ ಕೊಡುವುದಿಲ್ಲ.

ಶ್ರೀ ಎಸ್.ಎಸ್. ಪಟೇಲ್ (ಸಹಕಾರ ಸಚಿವರು) : ಆಯಾಯ ಹಳ್ಳಿಯ ಸೊಸೈಟಿಯ ಮುಖಾಂತರ ಎಷ್ಟೇ ಸಾಲವನ್ನು ಕೇಳಿದರೂ ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. ಆದರೆ ಅವರು ಡಿಫಾಲ್ಟರ್ ಆಗಿರಬಾರದು ಅಷ್ಟೇ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಸುಗಳನ್ನು ಕೊಳ್ಳುವಾಗ ಕೆಎಂಎಫ್‌ನವರು ಕರ್ನಾಟಕದೊಳಗೆ ಕೊಳ್ಳಬಾರದು ಎಂದು ಒಂದು ನಿಬಂಧನೆ ಹಾಕಿದ್ದಾರೆ. ಇವತ್ತು ಕರು ಬೆಳೆಸುವವರಿಗೆ ಇದು ಉತ್ತೇಜನಕಾರಿಯಾಗಿಲ್ಲ. ಎಲ್ಲರೂ ತಮಿಳುನಾಡಿಗೆ ಹೋಗಿ ಕ್ರಾಸ್‌ಬ್ರೀಡ್‌ಹಸುಗಳನ್ನು ತರುತ್ತಿರುವುದರಿಂದ ಇವತ್ತು ಒಂದು ಹಸುವಿಗೆ 10-12 ಸಾವಿರ ಕೊಟ್ಟು ತರುತ್ತಿದ್ದಾರೆ. ಅನಾವಶ್ಯಕವಾಗಿ ಹೆಚ್ಚು ಹಣವನ್ನು ಕೊಟ್ಟು ತರುತ್ತಿದ್ದಾರೆ. ದಯಮಾಡಿ ಈ ನಿಬಂಧನೆಯನ್ನು ಚೇಂಜ್ ಮಾಡಿ ಕರ್ನಾಟಕದೊಳಗೆ ಫಲಾನುಭವಿಗಳು ಹಸುಗಳನ್ನು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಇವತ್ತೇನು ಡೈರಿಯವರು ಹಸುಗಳನ್ನು ಕೊಡುತ್ತಿದ್ದೀರಿ ಆ ಹಸುಗಳನ್ನು ತಮಿಳುನಾಡಿಗೆ ಹೋಗಿ ತರಬೇಕೆಂದು ನಿಬಂಧನೆಯನ್ನು ಹಾಕಿದ್ದೀರಿ. ಈ ರೀತಿ ಮಾಡಿರುವುದರಿಂದ ರೇಟ್ ಜಾಸ್ತಿಯಾಗುತ್ತಿದೆ. ಇಲ್ಲಿ ಯಾರು ಕರು ಬೆಳೆಸುತ್ತಾರೆ ಕಾಫ್ ರಿಯರಿಂಗ್‌ಗೆ ಅವಕಾಶ ಮಾಡಿಕೊಡಿ. ಆ ನಿಬಂಧನೆಯನ್ನು ತೆಗೆದು ಹಸುಗಳನ್ನು ರಾಜ್ಯದಲ್ಲಿಯೇ ಕೊಳ್ಳುವುದಕ್ಕೆ ಅವಕಾಶ ಮಾಡಬೇಕು. ಕನಿಷ್ಟ ಒಂದು ಹಸುವಿಗೆ 2-3 ಸಾವಿರ ರೂಪಾಯಿ ಜಾಸ್ತಿ ಕೊಟ್ಟು ತರುತ್ತಿದ್ದಾರೆ. ಅದನ್ನು ತಪ್ಪಿಸಬೇಕು.

ಶ್ರೀ ಎನ್. ರಾಜಣ್ಣ : ಮಾನ್ಯ ಮಾಧುಸ್ವಾಮಿಯವರು ಹೇಳುವುದೇನೆಂದರೆ ರಾಜ್ಯದೊಳಗೆ ಹಸುಗಳನ್ನು ಕೊಳ್ಳುವ ವ್ಯವಸ್ಥೆ ಮಾಡಿದರೆ ಒಂದು ಸೊಸೈಟಿಯಿಂದ ಇನ್ನೊಂದು ಸೊಸೈಟಿಗೆ ಬರುತ್ತದೆ. ಕೋಲಾರದಲ್ಲಿ ಬರುವುದು ಚಿಕ್ಕಬಳ್ಳಾಪುರದಲ್ಲಿ ಬರುತ್ತದೆ. ಆದ್ದರಿಂದ ಹಸುಗಳನ್ನು ಹೊರಗಡೆಯಿಂದ ಕೊಂಡುಕೊಂಡು ಬಂದು ಹಾಲು ಉತ್ಪಾದನೆ ಮಾಡುತ್ತಿದ್ದಾರೆ. ಕಾಫ್ ಬ್ರೀಡಿಂಗ್ ಸೆಂಟರ್ ರೂಪದಲ್ಲಿ ಹೆಚ್ಚೆಚ್ಚು ಕಾಫ್ ಡೆವಲಪ್ ಮಾಡಿ, ರೈತನಿಗೆ ಸಬ್ಸಿಡಿ ರೂಪದಲ್ಲಿ ಕೊಟ್ಟರೆ ಒಳ್ಳೆಯದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಶುಸಂಗೋಪನಾ ಸಚಿವರು ಈ ರಾಜ್ಯದಲ್ಲಿ ಹಾಲಿನ ಡೈರಿಯನ್ನು ಹೊಸದಾಗಿ ಪ್ರಾರಂಭ ಮಾಡುವ ಬಗ್ಗೆ ಏನಾದರೂ ಆಲೋಚನೆ ಮಾಡಿದ್ದೀರಾ? ಯಾವ್ಯಾವ ಜಿಲ್ಲೆಯಲ್ಲಿ ಪ್ರಾರಂಭ ಮಾಡುವುದಕ್ಕೆ ಆಲೋಚಿಸಿದ್ದೀರಿ? ಅದರ ಬಗ್ಗೆ ಉತ್ತರ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ತಮ್ಮ ಉತ್ತರ ಮುಗಿಸಿ. ನಿಮಗೆ ಯಾವಾಗಲಾದರೂ ಪುರಸೊತ್ತು ಇದ್ದಾಗ ಮೈಸೂರು ರಸ್ತೆಯ ಕೆಂಗೇರಿ ಈಚೆಗೆ ಆಶೀರ್ವಚನಂ ಎಂದು ಒಂದು ಡೈರಿ ಫಾರಂ ಇದೆ. ಒಬ್ಬರು ಕ್ರಿಶ್ಚಿಯನ್ ಫಾದರ್ ಪಾಲ್ ಎಂಬುವರು ನಡೆಸುತ್ತಿದ್ದಾರೆ. ಸುಮಾರು 700ಕ್ಕಿಂತ ಹೆಚ್ಚು ಹಸುಗಳಿವೆ. ಆದರೇ ಅಲ್ಲಿ ಸೀಸರಿಯನ್ ಕೂಡ ಮಾಡುತ್ತಾರೆ. ಆ ಮನುಷ್ಯ ಎಸ್‌ಎಸ್‌ಎಲ್‌ಸಿ ಅಷ್ಟೇ ಓದಿರುವುದು. ಅವರು ಹೇಗೆ ಡೈರಿಯನ್ನು ಮೆಂಟೇನ್ ಮಾಡಿದ್ದಾರೆನ್ನುವುದನ್ನು ಹೋಗಿ ನೋಡಿಕೊಂಡು ಬನ್ನಿ ನಿಮಗೆ ಒಂದು ಐಡಿಯಾ ಸಿಗುತ್ತದೆ. ನಿಮ್ಮ ಇಲಾಖೆಯವರು ಅಲ್ಲಿಗೆ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಡೈರಿ ಹೇಗೆ ಮೆಂಟೇನ್ ಮಾಡಿದ್ದಾರೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ನಾನು ಅಲ್ಲಿಗೆ ಹೋಗುತ್ತೇನೆ ಎನ್ನುವ ಮಾತನ್ನು ತಮಗೆ ಹೇಳುತ್ತೇನೆ. ಇಡೀ ನಮ್ಮ ಹೈನುಗಾರಿಕೆ,

ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಇವುಗಳನ್ನು ಸಹಕಾರಿ ಆಂದೋಳನದಲ್ಲಿ ತಂದು ಹಳ್ಳಿಯ ಬಡವರು ಸಣ್ಣ ರೈತರು ಇದರಲ್ಲಿ ಆಸಕ್ತಿ ಇರತಕ್ಕ ನಮ್ಮ ಜನ ಏನಿದ್ದಾರೆ ಅವರಿಗೆ ಸಂಪೂರ್ಣವಾಗಿ ಬೆಂಬಲ ಕೊಡುವುದಕ್ಕೆ ನಾವು ಕಾರ್ಯಕ್ರಮನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ನನ್ನ ಇಲಾಖೆಯ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರಾದ ರಾಜಣ್ಣನವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳಷ್ಟು ಬೆಳಕನ್ನು ಸಹ ಚೆಲ್ಲಿದ್ದಾರೆ. ಹುದ್ದೆಗಳನ್ನು ತುಂಬತಕ್ಕ ವಿಚಾರದಲ್ಲಿ ಹಾಗೂ ಇಲಾಖೆಯಲ್ಲಿ ಕೆಲಸವಾಗಬೇಕೆನ್ನುವ ದೃಷ್ಟಿಯಲ್ಲಿ ಭರ್ತಿ ಮಾಡಬೇಕೆಂದು ಹೇಳಿದ್ದಾರೆ. ನಾನು ಪ್ರಾರಂಭದಲ್ಲಿ ಮಾತನಾಡುತ್ತಾ ಹೇಳಿದ್ದೇನೆ. ಅದರ ಬಗ್ಗೆ ತಕ್ಷಣ ಕ್ರಮವನ್ನು ಕೈಗೊಂಡಿದ್ದೇವೆ. ರಾಜ್ಯದಲ್ಲಿ ಎಲ್ಲೆಲ್ಲಿ ಅಗತ್ಯವಾದ ಹುದ್ದೆಗಳು ಖಾಲಿಯಿವೆ ಅವುಗಳನ್ನು ತುಂಬತಕ್ಕ ಕೆಲಸವನ್ನು ಮಾಡುತ್ತೇವೆ. ಎರಡನೆಯದು ಔಷಧಿ ಮತ್ತು ರಾಸಾಯನಿಕದ ವಿಚಾರದಲ್ಲಿ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದು ಉತ್ತಮವಾದ ಸಲಹೆ. ಮಾನ್ಯ ಹಣಕಾಸಿನ ಸಚಿವರ ಜೊತೆಯಲ್ಲಿ ಮಾತನಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಬದ್ಧನಿದ್ದೇನೆ. ಅಷ್ಟೇ ಅಲ್ಲದೆ ಬಹಳ ಮುಖ್ಯವಾಗಿ ಜಾನುವಾರು ಅಭಿವೃದ್ಧಿಮಂಡಳಿ ಬಗ್ಗೆ ಸಲಹೆ ಮಾಡಿದ್ದಾರೆ. ಕೇರಳದಲ್ಲಿ ಇಂತಹ ಒಂದು ಸಂಸ್ಥೆಯಿದೆ. ಈಗಾಗಲೇ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಬೇಕೆಂದು ಆಲೋಚನೆ ಮಾಡಿದ್ದೇನೆ. ಅಲ್ಲಿಗೆ ಹೋಗಿ ಬಂದು ಅಲ್ಲಿ ಯಾವ ರೀತಿ ಮಾಡಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಅದನ್ನು ಮಾಡಲಿಕ್ಕೆ ಸರ್ಕಾರ ಉತ್ಸುಕವಾಗಿದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಅಷ್ಟೇ ಅಲ್ಲದೆ ಪಶು ಆಹಾರ, ಜೈವಿಕ ಸಮಸ್ಯೆಯ ಬಗ್ಗೆ ಸಹ ಅವರು ಹೇಳಿದ್ದಾರೆ. That is one of the best institution in India ಎಂದು ನಾನು ಈಗಾಗಲೇ ಮಾತನಾಡುವಾಗ ಹೇಳಿದ್ದೇನೆ. ಅದಕ್ಕೆ ತಾವೆಲ್ಲಾ ಏನು ಸಲಹೆ ಮಾಡಿದ್ದೀರಿ ಅದನ್ನು ಸರ್ಕಾರ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತದೆ. ಮಾನ್ಯ ಸದಸ್ಯರು ಪಶು ವೈದ್ಯ ವಿಶ್ವವಿದ್ಯಾನಿಲಯದ ಬಗ್ಗೆ ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು ಪಶುಸಂಗೋಪನೆ ಇಲ್ಲದೆ ನಡೆಯುವುದಕ್ಕೆ ಆಗುವುದಿಲ್ಲವೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಏಕೆಂದರೆ, ಕೃಷಿಗೆ ಇವತ್ತು ನಮ್ಮ ಪಶುಸಂಗೋಪನೆ ಬೆನ್ನೆಲುಬು ಎಂದು ಹೇಳಿದರೆ ತಪ್ಪಾಗಲಾರದು. ಇಷ್ಟೊಂದು ಸಂಪತ್ತನ್ನು ಹೊಂದಿರತಕ್ಕಂತಹ ಕೃಷಿ ಕ್ಷೇತ್ರ ಇವತ್ತು ಸಂಪೂರ್ಣವಾಗಿ ಅಭಿವೃದ್ಧಿಯಾಗಬೇಕಾದರೆ ಪಶುಸಂಗೋಪನೆಯ ಪ್ರಾಮುಖ್ಯತೆ ಇದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ 3638 ಸಂಸ್ಥೆಗಳು ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿವೆ. ನಮ್ಮ ರಾಜ್ಯದಲ್ಲಿ ಎರಡು ಕಡೆ ಪಶುಸಂಗೋಪನಾ ಕಾಲೇಜುಗಳು ಇದೆ. ಈ ಕಾಲೇಜುಗಳಲ್ಲಿ ಒಂದು ಬೆಂಗಳೂರಿನಲ್ಲಿದೆ ಮತ್ತೊಂದು ಬೀದರ್‌ನಲ್ಲಿದೆ, ಮಂಗಳೂರಿನಲ್ಲಿ ಒಂದು ಕೃಷಿ ಕಾಲೇಜು ಇದೆ. ಡೈರಿ ಕಾಲೇಜುಗಳು ನಮಗೆ ಅಗತ್ಯವಿದೆ. ತಮಿಳುನಾಡಿನಲ್ಲಿ ಸುಮಾರು 7-8 ವರ್ಷಗಳಿಂದ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಪಶ್ಚಿಮ ಬಂಗಾಳದಲ್ಲಿ ವಿಶ್ವವಿದ್ಯಾನಿಲಯವನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ ಮತ್ತು ಗುಜರಾತ್‌ನಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ತೀರ್ಮಾನ ಮಾಡಿದ್ದಾರೆ. ಪಂಜಾಬ್‌ನಲ್ಲಿ ಸುಮಾರು 80 ಕೋಟಿ ರೂಪಾಯಿಗಳ

ಖರ್ಚು ಮಾಡಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಅಲ್ಲಿನ ಸರ್ಕಾರ ತೀರ್ಮಾನ ಮಾಡಿದೆ. ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಕೃಷಿ ಸಚಿವರ ಸಹಕಾರವನ್ನು ಮತ್ತು ಮಾರ್ಗದರ್ಶನವನ್ನು ಬಯಸುತ್ತೇನೆ. ಮಾನ್ಯ ಸಚಿವರು, ಹಿರಿಯ ಸದಸ್ಯರು ಹಾಗೂ ಹಿರಿಯ ಸಚಿವರು ಕೂಡ ಆಗಿದ್ದಾರೆ. ಈ ಕ್ಷೇತ್ರ ಹೆಚ್ಚು ಅರ್ಥಪೂರ್ಣವಾಗಿ ಬೆಳೆಯಬೇಕಾದರೆ ಮತ್ತು ಹೆಚ್ಚು ಸಂಶೋಧನೆ ಆಗಬೇಕಾದರೆ ಕೃಷಿ ಇಲಾಖೆಯ ಪಶುಸಂಗೋಪನಾ ಇಲಾಖೆಯು ಬೆಳೆಯುವುದಕ್ಕೆ ಸಂಪೂರ್ಣ ಬೆಂಬಲವನ್ನು ಕೊಡಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯಗಳು ಇವತ್ತಲ್ಲ ನಾಳೆ, ನಮ್ಮ ರಾಜ್ಯಕ್ಕೆ ಅಗತ್ಯತೆ ಇದೆ. ಆದ್ದರಿಂದ ಈ ಕ್ಷೇತ್ರವನ್ನು ಬೆಳೆಸತಕ್ಕಂತಹ ದೃಷ್ಟಿಯಿಂದ ಸರ್ಕಾರ ಆದಷ್ಟು ಬೇಗನೆ ಪರಿಶೀಲನೆ ಮಾಡಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ತೀರ್ಮಾನವನ್ನು ಕೈಗೊಳ್ಳುತ್ತದೆ ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಅಮೃತ್‌ಮಹಲ್ ತಳಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ಮಾತನಾಡುವಾಗ ಹೇಳಿದ್ದೇನೆ. ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳಿದ್ದರು. ಅವರ ಎಲ್ಲಾ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು, ಪರಿಶೀಲಿಸಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ರಾಜಣ್ಣನವರು ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಗೋಶಾಲೆಯನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾವು ಎಲ್ಲಿ ಅಗತ್ಯವಿದೆ ಎಂಬುದನ್ನು ಪರಿಶೀಲನೆ ಮಾಡಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ ಬೆಳಕನ್ನು ಚೆಲ್ಲುತ್ತಾ ಕೆಪಿಎಸ್‌ಸಿಯಿಂದ ನೇಮಕಾತಿಯಾಗಿದ್ದರೂ ನೀವೇಕೆ ತೆಗೆದುಕೊಂಡಿಲ್ಲ ಎಂಬ ಮಾತನ್ನು ಕೇಳಿದ್ದರು. ಇದರ ಬಗ್ಗೆ ನಾನು ಮತ್ತು ನಮ್ಮ ಕಾರ್ಯದರ್ಶಿಯವರು ಪಟ್ಟಿಯನ್ನು ಕಳುಹಿಸಿಕೊಡಿ ಎಂದು ಕೇಳುತ್ತಿದ್ದೇವೆ. ಇನ್ನು ಆ ನೇಮಕಾತಿ ಪಟ್ಟಿ ನಮಗೆ ಬಂದಿಲ್ಲ. ಅದು ಬಂದ ತಕ್ಷಣವೇ ಎಲ್ಲೆಲ್ಲಿ ಖಾಲಿ ಹುದ್ದೆಗಳಿವೆಯೋ ಆ ಹುದ್ದೆಗಳನ್ನು ತುಂಬುತ್ತೇವೆ. ಈಗ ನಮ್ಮ ರಾಜ್ಯದಲ್ಲಿ 300 ವೈದ್ಯರ ಹುದ್ದೆಗಳು ಖಾಲಿ ಇವೆ. ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಬಚ್ಚೇಗೌಡರ ಕಾಲದಲ್ಲಿ 310 ಆಸ್ಪತ್ರೆಗಳು, ಮತ್ತು ನನ್ನ ಕಾಲದಲ್ಲಿ 200 ಆಸ್ಪತ್ರೆಗಳು ಪ್ರಾರಂಭ ಮಾಡಿದ್ದೇವೆ. ಈ ಬಾರಿ 100 ಆಸ್ಪತ್ರೆಗಳನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಇನ್ನು 150 ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುತ್ತಿದ್ದೇವೆ. ಅಂದರೆ ಪ್ರತಿ ವರ್ಷ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಇದಕ್ಕನುಗುಣವಾಗಿ ಸಿಬ್ಬಂದಿಗಳನ್ನು ನಾವು ನೇಮಕಾತಿ ಮಾಡಿಲ್ಲ. ಇದರಿಂದಾಗಿ ಖಾಲಿ ಹುದ್ದೆಗಳು ಹೆಚ್ಚಾಗುತ್ತಾ ಬಂದಿದೆ. ಈಗಾಗಲೇ ಸರ್ಕಾರದವರು ಗಮನಕ್ಕೆ ಬಂದಿದ್ದು, ಡಾಕ್ಟರ್‌ಗಳನ್ನು ಕೆಪಿಎಸ್‌ಸಿಯ ಮೂಲಕ ನೇಮಕಾತಿ ಮಾಡಿರುವ ಪಟ್ಟಿಯನ್ನು ಕಾಯುತ್ತಿದ್ದೇವೆ. ಅದು ಬಂದ ತಕ್ಷಣ ನಮ್ಮ ಇಲಾಖೆಯಲ್ಲಿ ನೇಮಕಾತಿಯನ್ನು ಮಾಡಿಕೊಳ್ಳುತ್ತೇವೆ. ಹಾಗೆಯೇ ಉಳಿದ ಎಲ್ಲಾ ಸಬ್‌ಸ್ಟ್ಯಾಫ್‌ಗಳನ್ನು ನೇಮಕ ಮಾಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ದೇಶಿಯ ತಳಿಗಳಾದ ಹಳ್ಳಿಕಾರು, ಅಮೃತಮಹಲ್, ನಮ್ಮ ಸಾಂಸ್ಕೃತಿಕ ತಳಿಗಳಿದ್ದು ಇವುಗಳ ಅಭಿವೃದ್ಧಿಯ ಬಗ್ಗೆ ಒಳ್ಳೆಯ ಸಲಹೆಗಳನ್ನು

ಕೊಟ್ಟಿದ್ದಾರೆ. ಇವುಗಳ ಬಗ್ಗೆ ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ತಳಿಗಳನ್ನು ಉಳಿಸತಕ್ಕಂತಹ ಮತ್ತು ಬೆಳೆಸತಕ್ಕಂತಹ ಆಲೋಚನೆಯನ್ನು ಮಾಡುತ್ತೇವೆ. ಈ ತಳಿಯ ಕರುಗಳನ್ನು ಬೆಳೆಸುವ ದೃಷ್ಟಿಯಿಂದ ಸರ್ಕಾರ ಆರ್ಥಿಕ ಸಹಾಯವನ್ನು ಮಾಡಬೇಕೆಂದು ಮಾನ್ಯ ಪುಟ್ಟಣ್ಣಯ್ಯನವರು ಪ್ರಸ್ತಾಪ ಮಾಡಿದ್ದರು. ಇದು ಉತ್ತಮವಾದ ಸಲಹೆಯಾಗಿದೆ. ಈಗಾಗಲೇ ಈ ದೇಶೀಯ ತಳಿಗಳನ್ನು ಏನಿದೆ ಅವುಗಳನ್ನು ಫಾರಂಗಳಲ್ಲಿ ಬೆಳೆಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಅವರ ಸಲಹೆಯ ಪ್ರಕಾರ ಟಿಎಂಡಿಡಿಯ ಮೂಲಕ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇವತ್ತು ಎನ್‌ಡಿಡಿಬಿಯಿಂದ ಹಣವನ್ನು ಪಡೆದುಕೊಂಡು ಇವುಗಳನ್ನು ಹೆಚ್ಚಾಗಿ ಅಭಿವೃದ್ಧಿ ಪಡಿಸುತ್ತಿದ್ದೇವೆ. ಅದೂ ಅಲ್ಲದೆ ಎರಡು ವೀರ್ಯ ಕೇಂದ್ರಗಳನ್ನು ನಮ್ಮ ರಾಜ್ಯದಲ್ಲಿ ಪ್ರಾರಂಭ ಈ ಕೇಂದ್ರಗಳನ್ನು ಬೀರೂರು ಮತ್ತು ಕೊಯಿಲಾದಲ್ಲಿ ಪ್ರಾರಂಭ ಮಾಡಬೇಕೆಂದಿದ್ದೇವೆ. ಇದರ ಮೂಲಕ ನಾವು ಹೇಳಿರುವಂತಹ ಹಳ್ಳಿಕಾರು, ಅಮೃತಮಹಲ್, ಕಿಲಾರಿ ತಳಿಗಳಿಗೆ ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಿಗೆ ಹೆಚ್ಚು ಗಮನಕೊಟ್ಟು ಮಾಡುತ್ತೇವೆಂದು ಸದನದ ಮೂಲಕ ತಿಳಿಸಲಿಚ್ಛಿ ಪಡುತ್ತೇನೆ. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹಳ್ಳಿಯಲ್ಲಿರತಕ್ಕಂತಹ ನಿರುದ್ಯೋಗಿಗಳಿಗೆ ಮತ್ತು ಬಡವರಿಗೆ ಕೋಳಿ ಸಾಕಾಣಿಕೆ ಮಾಡುವ ಬಗ್ಗೆ ತಿಳುವಳಿಕೆ ಹಾಗೂ ಪುಕ್ಕಟ್ಟೆಯಾಗಿ ಕೊಡಬೇಕೆಂದು ಹೇಳಿದ್ದಾರೆ. ನಾವು ಈಗಾಗಲೇ ಎಸ್.ಸಿ. ಮತ್ತು ಎಸ್.ಟಿ. ಕಾರ್ಪೋರೇಷನ್ ಮತ್ತು ಬೇರೆ ಬೇರೆ ಇಲಾಖೆಗಳ ಮುಖಾಂತರ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೋಳಿ ಸಾಕಾಣಿಕೆಗೆ ಹೆಚ್ಚು ಒತ್ತನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತಹ ಸಲಹೆಗಳು ಬಹಳ ಉತ್ತಮವಾಗಿದ್ದು, ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸುರೇಶ್‌ಕುಮಾರ್‌ರವರು ಕಳೆದ 97-98ನೇ ಸಾಲಿನಲ್ಲಿ ಜಾನುವಾರುಗಳ ರಕ್ಷಣೆಗೆ ಕೊಡುವಂತಹ ಔಷಧಿಯನ್ನು ಕೊಳ್ಳುವುದರಲ್ಲಿ ಅವ್ಯವಹಾರವಾಗಿದೆಯೆಂದು, ಅನಗತ್ಯವಾಗಿರುವಂತಹ ಔಷಧಿಗಳನ್ನು ಕೊಂಡುಕೊಂಡಿದ್ದಾರೆ ಹಾಗೂ ಕಾನೂನು ಬಾಹಿರವಾಗಿ ಮಾಡಿದ್ದಾರೆಂದು ಮಾನ್ಯ ಸದಸ್ಯರು ಆರೋಪವನ್ನು ಮಾಡಿದ್ದಾರೆ. ಬಹುಶಃ ಮಾನ್ಯ ಸದಸ್ಯರಿಗೆ ಸಿಕ್ಕಿರತಕ್ಕಂತಹ ಏನು ಮಾಹಿತಿ ಇದೆ ಅದು ಸತ್ಯಕ್ಕೆ ದೂರವಾಗಿದೆ. ನಮ್ಮ ಇಲಾಖೆಗೆ ಜಾನುವಾರುಗಳ ಆರೋಗ್ಯ ರಕ್ಷಣೆಗಾಗಿ ಅಥವಾ ರೋಗಗಳಿಂದ ಅವುಗಳನ್ನು ಕಾಪಾಡಲು ನಮಗೆ 70 ಕೋಟಿ ರೂಗಳು ಬೇಕಾಗಿರಬಹುದೆಂದು ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಆದರೆ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ನಮಗೆ ಸಿಕ್ಕಿರತಕ್ಕಂಥದ್ದು ಕೇವಲ 4 $^{1}/_{2}$ ಕೋಟಿ ರೂಪಾಯಿಗಳು ಮಾತ್ರ. ಈ ಹಣವನ್ನು ವರ್ಷದ ಎರಡು ಬಾರಿ ಅಂದರೆ ಮೊದಲನೇ ಅರ್ಧ ವರ್ಷ, ನಂತರ ಅರ್ಧವರ್ಷ ಕೊಡಲಾಗಿದೆ. 1994ನೇ ಇಸವಿಯಲ್ಲಿ ಟೆಕ್ನಿಕಲ್ ಕಮಿಟಿ. ಹೈಪವರ್ ಕಮಿಟಿ ಈ ಎರಡು ಕಮಿಟಿಗಳನ್ನು ನಮ್ಮ ಇಲಾಖೆಗೆ ಔಷಧಿಗಳನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರವು ನೇಮಿಸಿದೆ. ಪ್ರತಿ ಸಾರಿ ಔಷಧಿಗಳನ್ನು ಕೊಳ್ಳುವಂತಹ ಸಂದರ್ಭದಲ್ಲಿ ಈ ಎರಡು ಕಮಿಟಿಗಳು ಇದನ್ನು ಪರಿಶೀಲಿಸಿ ನಂತರ ಔಷಧಿಗಳನ್ನು ಕೊಳ್ಳುವಂತಹ ವಾಡಿಕೆ ನಮ್ಮಲ್ಲಿ ಇದೆ. ಮಾನ್ಯ ಸದಸ್ಯರು ದಿನಾಂಕ : 28-4-98ರ ವಿಧಾನಸಭೆ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಈಗಾಗಲೇ ಈ ಪ್ರಶ್ನೆಯನ್ನು ಕೇಳಿದ್ದರು. ಅವರು ಏನು ಪ್ರಶ್ನೆಯನ್ನು ಕೇಳಿದರೆಂದರೆ

2ನೇ ಅರ್ಧವಾರ್ಷಿಕ ಕಂತಿನಲ್ಲಿ ಔಷಧಿಯನ್ನು ಕೊಳ್ಳುವ ವ್ಯವಹಾರದಲ್ಲಿ ಕಾನೂನು ಬಾಹಿರವಾಗಿ ಇಲಾಖೆಯ ನಿರ್ದೇಶಕರು 2,21,00,000-00 ಮೀರತಕ್ಕಂತಹ ಮೊತ್ತದ ಔಷಧಿಯನ್ನು ಕೊಂಡಿದ್ದಾರೆ. ಈ ಔಷಧಿಗಳೂ ಕೂಡ ಕಳಪೆಯಾಗಿದ್ದು ಹಾಗೂ ಅನಗತ್ಯವಾಗಿರುತ್ತದೆಂದು ಎಂಬ ಮಾತನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ದಿನಾಂಕ : 17-3-98ರಂದು ಔಷಧಿ ಕೊಳ್ಳುವ ವಿಚಾರದಲ್ಲಿ ಉನ್ನತಮಟ್ಟದ ಸಮಿತಿಯಲ್ಲಿ ಹಾಜರಾಗಿದ್ದ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಗಳು, ಈಗ ಸಮಯ ಸಾಲದು, ಆದ್ದರಿಂದ ಅದನ್ನು ಸರಂಡರ್ ಮಾಡಿ ಔಷಧಿಗಳನ್ನು ಕೊಂಡುಕೊಳ್ಳುವುದನ್ನು ಬೇಡವೆಂದು ಹೇಳಿದ್ದನ್ನು ತಾವು ಸ್ಪೆಸಿಫಿಕ್ ಆಗಿ ಪ್ರಸ್ತಾಪ ಮಾಡುತ್ತಾ ಹೇಳಿದ್ದೀರಿ. ದಿನಾಕ; 17-3-98ರಂದು ಉನ್ನತ ಮಟ್ಟದ ಖರೀದಿ ಸಮಿತಿ ಸಭೆಯಲ್ಲಿ ಔಷಧಿಗಳ ಖರೀದಿಗೆ ಅನುಮೋದನೆ ನೀಡಿರುವುದು ನಿಜ. ಪ್ರಸಕ್ತ ಆರ್ಥಿಕ ವರ್ಷವು ಕೊನೆಗೊಳ್ಳುತ್ತಿರುವುದರಿಂದ ಈ ಹಣವನ್ನು ವೆಚ್ಚ ಮಾಡುವುದರ ಬಗ್ಗೆ ಪ್ರಸ್ತಾವನೆ ಬಂದಾಗ ವಿವಿಧ ಸದಸ್ಯರು ಈ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಈ ಸಮಿತಿಯಲ್ಲಿ 10 ಜನ ಸದಸ್ಯರು ಇರುತ್ತಾರೆ. ಇದಕ್ಕೆ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ. ಏಕಾಏಕಿ ಒಬ್ಬ ನಿರ್ದೇಶಕರು ಔಷಧಿಗಳನ್ನು ಸಂಪೂರ್ಣವಾಗಿ ಕೊಳ್ಳುವುದಕ್ಕೆ ಅಧಿಕಾರ ಇರುವುದಿಲ್ಲ. ಟೆಕ್ನಿಕಲ್ ಕಮಿಟಿಗೆ ಬಂದ ಅರ್ಜಿಗಳನ್ನು ಪರಿಶೀಲನೆ ಮಾಡಿ ನಂತರ ಶಿಫಾರಸ್ಸು ಮಾಡಿ ಈ ಕಮಿಟಿಗೆ ಕಳುಹಿಸಿಕೊಟ್ಟ ಮೇಲೆ ಇಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತದೆ. ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಯವರು, ಮೀಸಲಿಟ್ಟಿರುವ ಅಮೌಂಟನ್ನು ಅಧ್ಯಾರ್ಪಣೆ ಮಾಡಬೇಕಾಗಿಯೂ ಹಾಗೂ 98-99ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಅಮೌಂಟ್‌ನಲ್ಲಿ ಖರೀದಿಸಬಹುದಾಗಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರೆ, ಅಲ್ಲಿ ಸಭೆಯಲ್ಲಿ ಉಳಿದಿದ್ದ 9 ಜನ ಸದಸ್ಯರು ಚರ್ಚೆ ಮಾಡಿ ತಾವು ಏನು ಒಂದು ಮೊತ್ತವನ್ನು ಅಧ್ಯಾರ್ಪಣೆ ಮಾಡಬೇಕೆಂದು ಹೇಳುತ್ತಿದ್ದೀರಿ; ಅದನ್ನು ಪಿ.ಡಿ.ಅಕೌಂಟ್‌ನಲ್ಲಿ ಇಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದಾಗ ಇಲ್ಲವೆಂದಾಯಿತು. ಹಾಗಾದರೆ ಮುಂದಿನ ವರ್ಷದ ಆಯವ್ಯಯದಲ್ಲಿ ಹೆಚ್ಚುವರಿ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತೀರಾ ಎಂದು ಕೇಳಿದಾಗ ಅದು ನನ್ನಿಂದ ಸಾಧ್ಯವಿಲ್ಲವೆನ್ನುವ ಮಾತನ್ನು ಅವರು ಹೇಳುತ್ತಾರೆ. ಹಾಗಿರುವಾಗ ಇವತ್ತು ನಮಗೆ ಬರತಕ್ಕಂತಹ ಹಣ ಕೇವಲ ನಾಲ್ಕೂವರೆ ಕೋಟಿ ಆದರೆ 70 ಕೋಟಿ ರೂಗಳು ಬೇಕು. ಆ ಎರಡೂವರೆ ಕೋಟಿ ರೂಗಳ ಹಣವನ್ನು ಸರಂಡರ್ ಮಾಡಿದರೆ, ಮುಂದಿನ ವರ್ಷದಲ್ಲಿ ಈ ಎರಡೂವರೆ ಕೋಟಿ ರೂಗಳು ಯೋಜನೇತರದಲ್ಲಿ ಬಂದಿರುವುದರಿಂದ ಅದನ್ನು ಕೊಡಲು ಬರುವುದಿಲ್ಲ. ತಮಗೆ ಗೊತ್ತಿರುವಂತೆ ಪ್ಲಾನ್‌ನಲ್ಲಿದ್ದರೆ ಅದು ಮುಂದಿನ ವರ್ಷ ಬರುತ್ತದೆ. ಆದರೆ ನಾನ್‌ಪ್ಲಾನ್‌ನಲ್ಲಿರುವಂತಹ ಹಣ ಸಿಗುವಂತದ್ದು ಬಹಳ ಕಡಿಮೆ. ಈಗ ನಮ್ಮಲ್ಲಿರುವ ಹಣಕ್ಕೆ ಹೆಚ್ಚೆಂದರೆ ಒಂದು ತಿಂಗಳವರೆಗಿನ ಔಷಧಿಗೆ ಈ ಹಣ ಸಾಕಾಗುತ್ತದೆ. ಅಂಥದರಲ್ಲಿ ಇದನ್ನು ಸರಂಡರ್ ಮಾಡಿದರೆ ಬಹಳ ಕಷ್ಟವಾಗುತ್ತದೆ. ನಾವೂ ಕೂಡ ಹಳ್ಳಿಗಳಲ್ಲಿ ದನಕರುಗಳ ಜೊತೆ ಬೆಳೆದು ಬಂದಂಥವರು ಮತ್ತು ದನವನ್ನು ಮೇಯಿಸಿದ್ದೇವೆ. ಅವುಗಳಿಗೆ ಕೊಡತಕ್ಕಂತಹ ಔಷಧಿಗಳನ್ನು ದುರುಪಯೋಗ ಮಾಡುವಂತಹ ಯಾವುದೇ ಅಧಿಕಾರಿಯನ್ನು ರಕ್ಷಣೆ ಮಾಡುವುದಾಗಲೀ, ಅಥವಾ ಬೆಂಬಲ ಮಾಡುವುದು

ಖಂಡಿತವಾಗಿಯೂ ಇಲ್ಲ. ಆ ಸಂದರ್ಭದಲ್ಲಿ ಇದನ್ನು ಅಧ್ಯಾರ್ಪಣೆ ಮಾಡಿದರೆ ಮತ್ತೆ ಸಿಗುವುದಿಲ್ಲ ಎನ್ನುವ ಕಾರಣಕ್ಕಾಗಿ ಸಭೆಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಪಡೆದ ಮೇಲೆ, ಅದನ್ನು ಪ್ರೊಫಾರ್ಮಾ ಇನ್‌ವಾಯ್ಸ್ ಮೇಲೆ ಕೊಳ್ಳಬೇಕು ಎಂಬ ತೀರ್ಮಾನವನ್ನು ಆವತ್ತು ಮಾಡುತ್ತಾರೆ.

8.20 ಪಿ.ಎಂ

ಪ್ರೊಫಾರ್ಮ್ ಇನ್‌ವಾಯ್ಸ್‌ನಲ್ಲಿ ಅದನ್ನು ಕೊಳ್ಳುತ್ತೇವೆಂದು ಸರ್ಕಾರದ ಅನುಮತಿ ಕೋರಿದರೆ ಅದನ್ನು ಪರಿಶೀಲಿಸಲಾಗುವುದೆಂದು ಹೇಳುತ್ತಾರೆ. ನಂತರ ಎರಡನೇ ಸಭೆಯನ್ನು ದಿನಾಂಕ : 26-3-98 ರಂದು ಕರೆಯಲಾಗಿತ್ತು, ಈ ಸಭೆಗೆ ಆರ್ಥಿಕ ಇಲಾಖೆಯ ಜಂಟಿ ಕಾಯದರ್ಶಿಯವರನ್ನು ಭಾಗವಹಿಸುವಂತೆ ದಿನಾಂಕ : 25-3-98ರಂದು ಒಂದು ಪತ್ರ ಕೂಡ ಹೋಗಿತ್ತು. ಆದರೆ ಆ ದಿನ ಬೇರೆ ಸಭೆ ಇದ್ದುದರಿಂದ ಆ ಸಭೆಗೆ ಜಂಟಿ ಕಾರ್ಯದರ್ಶಿಯವರು ಭಾಗವಹಿಸುವುದಕ್ಕಾಗಲಿಲ್ಲ ಕೊನೆಗೆ ಆ ಸಭೆಯಲ್ಲಿ ಎಲ್ಲಾ ತೀರ್ಮಾನಗಳು ಆಗುತ್ತವೆ. ಸಮಿತಿಯ ಎಲ್ಲಾ ತೀರ್ಮಾನಗಳನ್ನು ಸರ್ವಾನುಮತದಿಂದ ವಿವರವಾಗಿ ಚರ್ಚಿಸಿದ ನಂತರ ತೆಗೆದುಕೊಳ್ಳಲಾಗಿದೆ. ಆದ್ದರಿಂದ, ಕಾರ್ಯದರ್ಶಿಯವರಾಗಲಿ, ಬೇರೆ ಇತರೆ ಸದಸ್ಯರುಗಳಿಗೆ ಸಭೆಯ ಬಗ್ಗೆ ತಿಳಿಸದೆ ಸಭೆ ಕರೆಯುವ ಕೆಲಸ ಮಾಡಿಲ್ಲ. ಜಂಟಿ ಕಾರ್ಯದರ್ಶಿಯವರು ಅದೇ ಸಂದರ್ಭದಲ್ಲಿ ಆಯವ್ಯಯದ ಮೇಲೆ ಚರ್ಚೆ ಮತ್ತು ಇತರೆ ಮುಖ್ಯವಾದ ಕೆಲಸ ಇದ್ದುದ್ದರಿಂದ ಆ ದಿನ ಸಭೆಗೆ ಹಾಜರಾಗಲು ಸಾಧ್ಯವಾಗಲಿಲ್ಲ. ಅಂದು ನಡೆದಂಥ ಸಭೆಯು ಕೆಳಕಂಡಂತೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. " ನಿರ್ದೇಶಕರು ಮಾರ್ಚ್ 98ರ ಕೊನೆಯ ವಾರದಲ್ಲಿ ಒಪ್ಪಿಗೆಯಾಗುತ್ತಿರುವುದರಿಂದ ಪ್ರೊಫಾರ್ಮ್ ಇನ್‌ವಾಯ್ಸ್‌ನಲ್ಲಿ ತೆಗೆದುಕೊಳ್ಳದೇ ಹೋದರೆ, ಹಣವನ್ನು ಉಪಯೋಗಿಸದೆ ಹೋದರೆ ಖೋತಾವಾಗುತ್ತದೆಂದು, ಹಾಗೂ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಔಷಧಿಗಳಿಗೆ ಹಣವನ್ನು ಕೊಟ್ಟಿರುವುದು ಕಡಿಮೆ ಇದ್ದು, ಮುಂದೆ ಇದನ್ನು ಸರಿದೂಗಿಸಲು ಸಾಧ್ಯವಾಗಲು ಪ್ರೊಫಾರ್ಮ್ ಇನ್‌ವಾಯ್ಸ್ ಮೇಲೆ ಕೊಂಡುಕೊಳ್ಳಲು ಸೂಚಿಸಿರುವುದರಿಂದ ಈ ಕೆಳಕಂಡ ಷರತ್ತುಗಳನ್ನು ಪರಿಗಣಿಸಲಾಯಿತು. ಅದರಲ್ಲೂ 1996-97ನೇ ಸಾಲಿನ ಉನ್ನತ ಮಟ್ಟದ ಖರೀದಿ ಸಮಿತಿ ಇದೇ ರೀತಿಯ ಪರಿಸ್ಥಿತಿ ಒದಗಿದಾಗ ಅನುಮತಿ ನೀಡಿರುವುದನ್ನೂ ಸಹ ಸಭೆಯ ಗಮನಕ್ಕೆ ತೆಗೆದುಕೊಳ್ಳಲಾಯಿತು. ನಿರ್ದೇಶಕರು ದರ ಗುತ್ತಿಗೆ ನಿಬಂಧನೆಯಲ್ಲಿ ಕನಿಷ್ಟ 60 ದಿನಗಳ ಔಷಧಿ ಮತ್ತು ರಾಸಾಯನಿಕಗಳನ್ನು ಸರಬರಾಜು ಮಾಡಲು ಕಾಲಾವಕಾಶ ನೀಡಬೇಕಾಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಹಿಂದೆ ಕೂಡ ಮೂರು ವರ್ಷಗಳಿಂದ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಇಲಾಖೆಯ ಮಹಾ ಲೆಕ್ಕಪಾಲಕರ ಪರಿಶೋಧನೆ ಯಾಗಿರುತ್ತದೆಂದೂ ಕೂಡ ಸಭೆಯ ಗಮನಕ್ಕೆ ತಂದರು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಷರತ್ತುಗಳನ್ನು ಕೊಟ್ಟು ಪ್ರೊಫಾರ್ಮ್ ಇನ್‌ವಾಯ್ಸ್ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು. ಯಾವುದೇ ಔಷಧಿಗಳನ್ನು ಅವಶ್ಯಕತೆಗಿಂತ ಹೆಚ್ಚಾಗಿ ತೆಗೆದುಕೊಳ್ಳತಕ್ಕದ್ದಲ್ಲ.

ಕೊಂಡು ಕೊಳ್ಳುವ ಔಷಧಿಗಳು ಮತ್ತು ರಾಸಾಯನಿಕಗಳು ಎಕ್ಸ್‌ಪೈರಿ ದಿನಾಂಕ ಆಗದೇ ಇರುವುದನ್ನು ಗಮನಿಸಿ ತೆಗೆದುಕೊಳ್ಳಬೇಕು. ನಿರ್ದೇಶಕರು ಪ್ರೊಫಾರ್ಮ್ ಇನ್‌ವಾಯ್ಸ್ ಮೇಲೆ ಖರೀದಿಸುವ ಬಗ್ಗೆ ಅಂದರೆ ಔಷಧಿಗಳು ಸರಬರಾಜಾಗುವ ಬಗ್ಗೆ ಪೂರ್ಣ ಜವಾಬ್ದಾರರಾಗಿರುತ್ತಾರೆ. ಅವರಿಗೆ ಇಲಾಖೆಯ ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು (ಆಡಳಿತ), ಸಹಾಯಕ ನಿರ್ದೇಶಕರು ಹಾಗೂ ಆರ್ಥಿಕ ಸಹಾಯಕರು ಸಹಾಯಕರಾಗಿರುತ್ತಾರೆ. ಚೆಕ್ಕುಗಳನ್ನು ಆರ್ಥಿಕ ಸಹಾಯಕರು ಇಟ್ಟುಕೊಂಡು, ಔಷಧಿಗಳು ಸರಬರಾಜಾಗಿರುವ ಬಗ್ಗೆ ಉಪ ನಿರ್ದೇಶಕರಿಂದ ಪ್ರಮಾಣ ಪತ್ರ ಬಂದ ಮೇಲೆ ಅದಕ್ಕೆ ವಿಭಾಗೀಯ ಜಂಟಿ ನಿರ್ದೇಶಕರ ಮೇಲು ರುಜು ಹಾಕಿದ ಮೇಲೆ ಈ ಔಷಧಿಗಳು ನಿಜವಾಗಿ ಬಂದಿವೆ ಎಂದು ವರದಿ ಬಂದ ನಂತರ ನಿರ್ದೇಶಕರು ಅದನ್ನು ಪರಿಶೀಲಿಸಿ, ಚೆಕ್ಕನ್ನು ಪಾವತಿಸಲು ಆದೇಶ ನೀಡಿದ ಮೇಲೆ ಕ್ರಮ ತೆಗೆದುಕೊಳ್ಳತಕ್ಕದ್ದು. ಪ್ರೊಫಾರ್ಮ್ ಇನ್‌ವಾಯ್ಸ್ ಮೇಲೆ ಸರಬರಾಜು ಮಾಡುವ ಔಷಧಿ ಮತ್ತು ರಾಸಾಯನಿಕಗಳನ್ನು ಆದೇಶ ನೀಡಿದ ಮೇಲೆ ಎಲ್ಲಾ ಜಿಲ್ಲೆಗಳಿಗೆ ಸರಬರಾಜು ಆಗಿದೆ ಎಂಬ ಬಗ್ಗೆ ಉಸ್ತುವಾರಿ ನೋಡಿಕೊಳ್ಳಲು ಹಿರಿಯ ಅಧಿಕಾರಿಗಳಾದ ಶ್ರೀಯುತ ಲತೀಫ್ ಅನ್ವರ್ ಅಪರ ನಿರ್ದೇಶಕರು, ಅವರನ್ನು ಇದಕ್ಕೆ ಹೆಡ್ ಮಾಡಿ, ಜಂಟಿ ನಿರ್ದೇಶಕರು (ಆಡಳಿತ), ಮತ್ತು ಆರ್ಥಿಕ ಸಹಾಯಕರು, ಇವರನ್ನೊಳಗೊಂಡು ಒಂದು ಸಮಿತಿ ಮಾಡಿ, ಆ ಸಮಿತಿಯ ವರದಿಯ ಮೇಲೆ ಔಷಧಿಗಳು ಸರಬರಾಜು ಆದ ಮೇಲೆ ಚೆಕ್ಕು ನೀಡಲು ಕ್ರಮ ತೆಗೆದುಕೊಳ್ಳತಕ್ಕದ್ದು. ಅದೇ ರೀತಿ ಈ ಸಮಿತಿಯ ಸದಸ್ಯರುಗಳು ಒಟ್ಟಾಗಿ ಅಥವಾ ಪ್ರತ್ಯೇಕವಾಗಿ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ, ದರಗುತ್ತಿಗೆ ಪಡೆದಿರುವ ಎಲ್ಲಾ ಸಂಸ್ಥೆಗಳು ಇಲಾಖೆಗೆ ಔಷಧಿಗಳನ್ನು ಸರಿಯಾಗಿ ಸರಬರಾಜು ಮಾಡಿದ್ದಾರೆಯೇ? ಹಾಗೂ ಒಂದು ವೇಳೆ ಯಾವುದಾದರೂ ಸಂಸ್ಥೆಗಳು ಆದೇಶದ ಪ್ರಕಾರ ಸರಬರಾಜು ಮಾಡದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವುದು ಎನ್ನುವುದರ ಬಗ್ಗೆ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಈ ಅನುಭವದ ಹಿನ್ನೆಲೆಯಲ್ಲಿ ಇದೇ ಸಭೆಯಲ್ಲಿ ಮುಂದಿನ ವರ್ಷದ ಟೆಂಡರ್ ಕರೆಯುವ ಬಗ್ಗೆ ವೇಳಾಪಟ್ಟಿಯನ್ನು ತಯಾರಿಸಿ ಅನುಮೋದಿಸಲಾಯಿತು. ಅದು ಈ ಕೆಳಕಂಡಂತೆ ಇದೆ. ಜೂನ್ ತಿಂಗಳೊಳಗಾಗಿ ಟೆಂಡರ್ ಕರೆಯಬೇಕೆಂದೂ, ಜುಲೈ 31ರೊಳಗಾಗಿ ಟೆಂಡರ್ ಸಲ್ಲಿಸಲು ಕಾಲಾವಕಾಶ ನೀಡತಕ್ಕದ್ದು. ಆಗಸ್ಟ್ ಮೊದಲನೇ ವಾರದಲ್ಲಿ ಟೆಂಡರ್‌ದಾರರ ಸಮಕ್ಷಮದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುವುದೆಂದು ಟೆಂಡರ್ ಪ್ರಕಟಣೆಯಲ್ಲಿ ತಿಳಿಸತಕ್ಕದ್ದು. ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ತಾಂತ್ರಿಕ ಸಮಿತಿ ಸಭೆ ಸೇರಿ, ಅದರ ಶಿಫಾರಸ್ಸುಗಳನು ಉನ್ನತಮಟ್ಟದ ಖರೀದಿ ಸಮಿತಿಗೆ ಸೆಪ್ಟಂಬರ್ 30ರೊಳಗೆ ಸಲ್ಲಿಸತಕ್ಕದ್ದು. ಅಕ್ಟೋಬರ್ 4ನೇ ವಾರದಲ್ಲಿ ಉನ್ನತ ಮಟ್ಟದ ಖರೀದಿ ಸಮಿತಿಯ ಸಭೆ ಸೇರಿ ತನ್ನ ನಡವಳಿಕೆಗಳನ್ನು ಮಾನ್ಯ ಸಚಿವರಿಗೆ ಒಪ್ಪಿಸತಕ್ಕದ್ದು. ಹಾಗೂ ಒಪ್ಪಿಗೆಯನ್ನು ನವೆಂಬರ್ 30 ರೊಳಗಡೆ ಪಡೆಯತಕ್ಕದ್ದು. ಎಲ್ಲಾ ಆದೇಶಗಳನ್ನು ಡಿಸೆಂಬರ್ 31 ರೊಳಗಾಗಿ ತಪ್ಪದೆ ನೀಡತಕ್ಕದು, ಈ ರೀತಿಯ ವೇಳಾಪಟ್ಟಿಯನ್ನು ತಪ್ಪದೇ ಅನುಸರಿಸಬೇಕೆಂದು ನಿರ್ದೇಶಕರಿಗೆ ತಿಳಿಸಲಾಯಿತು. ಈ ರೀತಿ ಪ್ರೊಫಾರ್ಮ್ ಇನ್‌ವಾಯ್ಸ್ ಮೇಲೆ ತೆಗೆದುಕೊಂಡಿರುವುದಕ್ಕೆ ಎಲ್ಲಾ ರೀತಿಯ ಎಚ್ಚರಿಕೆಗಳನ್ನು ವಹಿಸಲಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ನಂತರ ಎಚ್ಚರಿಕೆ ವಹಿಸಿ ಖಜಾನೆಗೆ ನಿರ್ದೇಶಕರ ಕಛೇರಿಯಿಂದ ಕೆಳಕಂಡಂತೆ ಪತ್ರವನ್ನು ಕಳುಹಿಸಿದ್ದೇವೆ. ನಿರ್ದೇಶಕರು, ಪಶುಪಾಲನೆ ಮತ್ತು ಪಶುಪತಿ ಸೇವಾ ಇಲಾಖೆ ಇವರ ಪತ್ರ ವಿಷಯ : ಈ ಕಛೇರಿಗೆ ಸಂಬಂಧಿಸಿದ ಚೆಕ್ಕುಗಳನ್ನು ಕೊಡುವ ಬಗ್ಗೆ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ, ಈ ಕಛೇರಿಯಿಂದ ನಿಮ್ಮ ಖಜಾನೆಗೆ ಕೊಟ್ಟಿರುವ ಬಿಲ್ಲುಗಳಿಗೆ ಚೆಕ್ಕುಗಳನ್ನು ಅನುಬಂಧ-3, ಟೋಕನ್ ಪಡೆಯದೆ ಅಥವಾ ಈ ಕಛೇರಿಯ ಪತ್ರದ ಮುಖೇನ ಕೋರಿಕೆಯಿಲ್ಲದಿದ್ದಲ್ಲಿ ಯಾವುದೇ ಸಂಸ್ಥೆಯವರಿಗೆ ನೀಡಬಾರದೆಂದು ಕೋರಲಾಗಿದೆ." ಈಗಾಗಲೇ ಸುಮಾರು 50 ಲಕ್ಷಗಿಂತ ಹೆಚ್ಚು ಔಷಧಿಗಳು ನಮಗೆ ಸರಬರಾಜಾಗಿವೆ. ಆದರೆ, ಇದುವರೆವಿಗೂ ನಾವು ಒಂದೇ ಒಂದು ಪೈಸೆ ಯಾರಿಗೂ ಕೂಡ ಪೇಮೆಂಟ್ ಮಾಡಿಲ್ಲ ಇದಕ್ಕೆ ಕಾರಣ ಏನೆಂದರೆ, ನಾವು ಇನ್ನು ಅದನ್ನು ಚೆಕ್ ಮಾಡಿ, ಕೌಂಟರ್ ಸಹಿ ಮಾಡದೇ ಇರುವುದರಿಂದ ನಾವಿನ್ನೂ ಯಾರಿಗೂ ಪೇಮೆಂಟ್ ಮಾಡಿಲ್ಲ. ಅದಲ್ಲದೆ ಎರಡನೇ ವರ್ಷದ ಅರ್ಧವರ್ಷದ ಅವಶ್ಯಕತೆಯನ್ನು ಪೂರೈಸಲು ಈ ಕೆಳಕಂಡ ಅಂಶಗಳನ್ನು ಗಮನಿಸಿ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

"ಅರ್ಧ ವರ್ಷ ಎಂದರೆ ಅಕ್ಟೋಬರ್ 1997 ರಿಂದ ಮಾರ್ಚ್ 1998, ಇದರ ಅವಶ್ಯಕತೆಯನ್ನು ಪೂರೈಸಲು ದಿನಾಂಕ : 9-1-98ರಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ 9-1-98ರಿಂದ 17, 2 ರವರಗೆ ಇದನ್ನು ಡೆಲಿಬರೇಟ್ ಆಗಿ ಮಾಡಿದ್ದೇವೆ." ಮಾನ್ಯ ಸದಸ್ಯರು ಏಕಾಏಕಿಯಾಗಿ ಮಾಡಿದ್ದಾರೆಂದು ಹೇಳಿದರು, ಆದರೆ ಆ ರೀತಿ ಮಾಡಿಲ್ಲ. ಜನವರಿಯಿಂದ ಈ ಕಾರ್ಯ ಪ್ರಾರಂಭಿಸಿ ಮೂರು ತಿಂಗಳ ಕಾಲ ಕೆಲಸ ನಡೆದಿದೆ. "9-1-98 ರಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ದರದ ಗುತ್ತಿಗೆಯನ್ನು ನಿಗದಿಪಡಿಸಿ ಔಷಧಿಗಳನ್ನು ಖರೀದಿಸುವುದು, ಸೂಕ್ತ ಎಂಬ ತೀರ್ಮಾನದ ಹಿನ್ನೆಲೆಯಲ್ಲಿ ದಿನಾಂಕ 9-1-98 ರಂದು ಅವಶ್ಯಕ ಔಷಧಿ ರಾಸಾಯನಿಕಗಳಿಗೆ ದರ ಗುತ್ತಿಗೆ ನಿಗದಿಪಡಿಸಲು ಔಷಧಿವಾರು ಜಿಎಂಪಿ, ಡಬ್ಲ್ಯೂಹೆಚ್ಓ ದಿಂದ ಪಡೆದು ದೃಢೀಕರಣ ಪತ್ರ ಹೊಂದಿದ ಸಂಸ್ಥೆಗಳಿಂದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : 11-2-98. ಹಾಗೂ ಸ್ವೀಕರಿಸುವ ಟೆಂಡರ್‌ಗಳನ್ನು ದಿನಾಂಕ 12-2-98ರಂದು ನಿರ್ದೇಶಕರು, ಪಶುಪಾಲನೆ ಮತ್ತು ಸೇವಾ ಪಶು ಸೇವಾ ಇಲಾಖೆ, ಇವರು ಟೆಂಡರನ್ನು ತೆರೆಯಲು ಇಲಾಖೆಯ ಅಪರ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು 14-2-98ರವರೆಗೆ ತೆರೆಯಲಾಯಿತು. ಒಟ್ಟು 114 ಅರ್ಜಿಗಳ ಪೈಕಿ, ಟೆಂಡರ್ ಷರತ್ತು, ಬಂಧನೆಗಳನ್ವಯ 66 ಅರ್ಜಿಗಳನ್ನು ತೆರೆಯಲಾಯಿತು. ಇದರಲ್ಲಿ ಔಷಧಿಗಳಿಗೆ ಮತ್ತು ರಾಸಾಯನಿಕಗಳಿಗೆ ಸಂಬಂಧಸಿದ್ದ ಅರ್ಜಿಗಳ ಸಂಖ್ಯೆ : 44. ಸರ್ಕಾರದಿಂದ ರಚಿತಗೊಂಡ ಷರತ್ತುಗಳನ್ನೊಳಗೊಂಡ ತಾಂತ್ರಿಕ ಸಮಿತಿಯು ಸಲ್ಲಿಸಿದ ಅರ್ಜಿದಾರರ..........

ಮಾನ್ಯ ಸದಸ್ಯರು : ಎಲ್ಲಾ ಓದುವುದಕ್ಕೆ ಹೋಗಬೇಡಿ, ಸಮಯವಿಲ್ಲ, ಆದ್ದರಿಂದ, ಅದರಲ್ಲಿರುವ ಕಂಟೆಂಟ್ಸ್ ಮಾತ್ರ ಹೇಳಿಬಿಡಿ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಇದನ್ನೆಲ್ಲಾ ಏಕೆ ಹೇಳಿದೆನೆಂದರೆ, 1-1-98ರಿಂದ ಮೊನ್ನೆ ಔಷಧಿಗಳನ್ನು ಕೊಳ್ಳುವವರಿಗೆ ಸುಮಾರು ಹತ್ತಾರು ಸಭೆಗಳು ನಡೆದಿವೆ.

ತಾಂತ್ರಿಕ ಸಮಿತಿ ಸಭೆ ಹಾಗೂ ಉನ್ನತ ಮಟ್ಟದ ಖರೀದಿ ಸಮಿತಿಗಳೂ ಸಹ ನಡೆದಿವೆ. ಎಲ್ಲೂ ಕೂಡ ಕಾನೂನಿಗೆ ಬಾಹಿರವಾಗಿ, ನಿಯಮಗಳನ್ನು ಬಿಟ್ಟು ನಾವು ಕೆಲಸ ಮಾಡಿಲ್ಲ. ಕ್ರಮಬದ್ಧವಾಗಿ ನಾವು ಔಷಧಿಗಳನ್ನು ಕೊಂಡಿದ್ದೇವೆ. ಆದರೆ ಎರಡೂವರೆ ಕೋಟಿ ರೂಪಾಯಿಗಳ ಔಷಧಿಯನ್ನು ನಾವು ಕೊಳ್ಳದೇ ಹೋದರೆ ಜಾನುವಾರುಗಳಿಗೆ ತೊಂದರೆಯಾಗುತ್ತದೆ. ಮುಂದಿನ ವರ್ಷ ಹಣ ದೊರೆಯುವುದಿಲ್ಲವೆಂದು ಒಂದು ಒಳ್ಳೆಯ ಸದುದ್ದೇಶದಿಂದ ಫ್ರೊಫಾರ್ಮ್ ಇನ್‌ವಾಯ್ಸ್ ಮೇಲೆ ಔಷಧಿಗಳನ್ನು ಕೊಳ್ಳಲಾಗಿದೆಯೇ ಹೊರತು ಯಾವುದೇ ದುರುದ್ದೇಶದಿಂದ ತೆಗೆದುಕೊಂಡಿಲ್ಲ. ಇಲ್ಲಿ ಯಾವ ಅಧಿಕಾರಿಯನ್ನು ರಕ್ಷಣೆ ಮಾಡುವಂತಹ ಕೆಲಸ ನಾವು ಮಾಡುವುದಿಲ್ಲ. ಇಲ್ಲಿ ಕೆಲಸ ಮಾಡುವ ಅಧಿಕಾರಿಗಳು ಹಿರಿಯರು, ಬಹಳ ಅನುಭವಿಕರು ಮತ್ತು ದಕ್ಷರು ಇದ್ದಾರೆ. ನಾನೀಗಾಗಲೇ ಹೇಳಿದಂತೆ ಎಲ್ಲಾ ಷರತ್ತುಗಳನ್ನು ಹಾಕಿ ಔಷಧಿಗಳನ್ನು ಕೊಳ್ಳುವಂತಹ ಕೆಲಸವನ್ನು ಕೈಗೊಂಡಿದ್ದಾರೆ. ಇದರಲಿ ಯಾವುದೇ ರೀತಿಯ ಅಕ್ರಮವಾಗಲಿ, ಅವ್ಯವಹಾರ ನಡೆದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಸದಸ್ಯರು ಏನು ಆರೋಪ ಮಾಡಿದ್ದಾರೆ ಅದು ಸತ್ಯಕ್ಕೆ ದೂರವಾದುದು ಎನ್ನುವಂತಹ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಉತ್ತಮವಾಗಿ ಕೆಲಸ ಮಾಡುವವರಿಗೆ ಇದರಿಂದ ಚಾರಿತ್ರ್ಯವಧೆ ಉಂಟಾಗುತ್ತದೆ. ಆದ್ದರಿಂದ, ಇವತ್ತು ಮಾನ್ಯ ಅನೇಕ ಸದಸ್ಯರು ನಮ್ಮ ಇಲಾಖೆಯ ಬಗ್ಗೆ ಮಾತನಾಡುತ್ತಾ ಆಗಿರುವ ಮತ್ತು ಬೇಕಾಗಿರುವ ಕೆಲಸಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಹಾಗೂ ಸಾಕಷ್ಟು ಸಲಹೆಗಳನ್ನೂ ಕೂಡ ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಧನ್ಯವಾದಗಳನ್ನು ತಿಳಿಸುತ್ತಾ ಈ ವರ್ಷಕ್ಕೆ ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳುವ ಈ ಇಲಾಖೆಯ ಬೇಡಿಕೆಗಳಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಮಂಜೂರಾತಿಯನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಎಲ್ಲಾ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಸುಮಾರು 7 ಗಂಟೆಗೆ ಮಾಡಿದ ಆರೋಪಗಳಿಗೆ ಮಾನ್ಯ ಸಚಿವರು ಬಹಳ ಸಮರ್ಥ ಉತ್ತರ ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಇದು ಹೇಗೆಂದರೆ "ಕಿಲ್ ಎ ಡಾಗ್ ಕಾಲ್ ಅಟ್ ಮ್ಯಾಡ್" ಎನ್ನುವ ರೀತಿಯಲ್ಲಿ ಇದೆ. ನಾನು ಯಾರದೋ ತೇಜೋವಧೆ ಮಾಡುತ್ತಿದ್ದೇನೆ ಎನ್ನುವ ರೀತಿಯಲ್ಲಿ ಮಾನ್ಯ ಸಚಿವರು ಉತ್ತರಿಸಿದ್ದಾರೆ. ದಯಮಾಡಿ ಮಾನ್ಯ ಸಚಿವರು ಇದನ್ನು ಮನಸ್ಸಿನಿಂದ ಕಿತ್ತುಹಾಕಿ ವಾಪಸ್ ತೆಗೆದುಕೊಳ್ಳಿ. ನಾವು ಆ ಒಂದು ಗುರಿಯನ್ನಿಟ್ಟುಕೊಂಡು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿಲ್ಲ, ಇದಕ್ಕಾಗಿಯೇ ನಾವು ಚುನಾಯಿತರಾಗಿ ಇಲ್ಲಿಗೆ ಬಂದಿಲ್ಲ. ಮೊದಲನೆಯದಾಗಿ ಅವರು ಮಾಡಿರುವ ಆರೋಪ ಅವರು ಮನಸ್ಸಿನಿಂದಲ್ಲದೆ ಈ ಸಭೆಯಿಂದಲೇ ದೂರವಾಗಬೇಕು. ನಾನು ನಿನ್ನೆ ಹೇಳಿದ್ದು ಅವರ ಚಾರಿತ್ರ್ಯ ಹರಣ ಮಾಡುವುದಕ್ಕೆ ಅಲ್ಲ. ಜನ ತಾವಾಗಿಯೇ ತಮ್ಮ ಚಾರಿತ್ರ್ಯವನ್ನು ಹರಾಜು ಹಾಕಿಕೊಳ್ಳುವುದಕ್ಕೆ ತಯಾರಿರುವಾಗ ನಾವೇನೂ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ನಿರ್ದಿಷ್ಟವಾಗಿ ಮೂರಾನಾಲ್ಕು ವಿಚಾರಗಳನ್ನು ಈ ಸಭೆಯಲ್ಲಿ ಮಂಡಿಸುವುದಕ್ಕೆ ಬಯಸುತ್ತೇನೆ. ತಾವು ಒಂದು ಹೊಸ ವಿಚಾರವನ್ನು ಹೇಳಿದಿರಿ. ಜನವರಿ 9ನೇ ತಾರೀಖು ಸಭೆಯನ್ನು ಸೇರಿದ್ದು ಫೈನಲ್ ರೇಟ್ ಕಂಟ್ರಾಕ್ಟರದು ಎಂದು ಹೇಳಿದೀರಿ. ಆದರೆ

ನೀವೇ ಒಪ್ಪಿಕೊಳ್ಳುವ ಪ್ರಕಾರ 17-3-1998 ರಂದು ಸಭೆ ನಡೆದಾಗ ನಿಮ್ಮ ನಿರ್ದೇಶಕರೇ ಹೇಳಿದ್ದಾರೆ. ಪ್ರಸಕ್ತ ಸಾಲಿನ ಆರ್ಥಿಕ ವರ್ಷ ಕೊನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹಾಗೂ ದರ ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದರಿಂದ ದಿನಾಂಕ : 9-1-1998ರಿಂದ 17-3-1998 ವರಗೆ ಎರಡು ತಿಂಗಳು ಅಂದರೆ : ಸುಮಾರು 70ದಿವಸ. 70 ದಿವಸಗಳಲ್ಲಿ ಮಾಡುವುದಕ್ಕೆ ಆಗದೆ, ನಾವು ಅವತ್ತೇ ಪ್ರಯತ್ನ ಮಾಡಲು ಶುರು ಮಾಡಿದ್ದೆವು ಎಂದು ಇವತ್ತು ಕಾರಣ ಹೇಳುವುದರಲ್ಲಿ ಅರ್ಥ ಇಲ್ಲ. ನೀವು 17ನೇ ತಾರೀಖು ಎಂದು ಹೇಳಿದ್ದೀರಿ. ರೇಟ್ ಕಾಂಟ್ರಾಕ್ಟ್ ಫೈನಲೈಸ್ ಆಗಲಿಲ್ಲವೆಂದು ಹೇಳಿದ್ದೀರಿ. ಆಗ ಆ ಇಲಾಖೆಯಲ್ಲಿರುವ ಒಬ್ಬ ಜವಾಬ್ದಾರಿ ಹೊತ್ತ ಜಂಟಿ ನಿರ್ದೇಶಕರು ಆ ಸಭೆಗೆ ಬಂದಿದ್ದರು. ಅವರು ಹೇಳಿದರು Givingf Proforma Invoice amounts to Financial impropriety ಎಂದು ಹೇಳಿ ದಯಮಾಡಿ ಕೊಡುವುದು ಬೇಡವೆಂದು ಹೇಳಿದ್ದಾರೆ. ನೀವು ಅದನ್ನು ಹೇಳಲಿಲ್ಲ. ಸದರಿ ವಿಷಯದ ಬಗ್ಗೆ ಚರ್ಚೆ ಮುಂದುವರೆಸುತ್ತಾ : ಪಿ.ಡಿ. ಅಕೌಂಟ್‌ನಲ್ಲಿ ಠೇವಣಿ ಇಡಲು ಸಾಧ್ಯತೆ ಇಲ್ಲದಿರುವಾಗಲೂ ಹಾಗೂ ಪ್ರೋಫಾರ್ಮ್ ಇನ್‌ವಾಯ್ಸ್ ಮೇಲೆ ಡ್ರಾ ಮಾಡುವ ಅವಶ್ಯಕತೆಯ ನಿಯಮಗಳನ್ನು ಅನುಸರಿಸುವ ವಿಧಾನಗಳನ್ನು ಸೂಚಿಸಿ ಸರ್ಕಾರದ ಅನುಮತಿಯನ್ನು ಕೋರಿದ್ದಲ್ಲಿ ಪರಿಶೀಲಿಸಲು ಅಧ್ಯಕ್ಷರಿಗೆ ತಿಳಿಸಿದರು. ತಾವು ಅನುಮತಿಯನ್ನು ಕೋರಿದ್ದೀರಾ? ಸರ್ಕಾರ ಅನುಮತಿ ಕೊಟ್ಟಿದೆಯೆ? ಏನೂ ಇಲ್ಲ 26ನೇ ತಾರೀಖು ಸಭೆ ಸೇರಿದಿರಿ, ನಾವೇ ಒಂದು ನಿಯಮ ಮಾಡೋಣ ಎಂದು ತೀರ್ಮಾನ ಮಾಡಿದಿರಿ. 17ನೇ ತಾರೀಖಿನ ಸಭೆಯಲ್ಲಿ ರೇಟ್ ಕಂಟ್ರಾಕ್ಟ್ ಆಗಿಲ್ಲವೆಂದು ಹೇಳಿದ್ದಾರೆ. 2.2 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಸರೆಂಡರ್ ಮಾಡೋಣವೆಂದು ಹೇಳಿದರು. ಏನು ಕ್ಯಾಷುವಲ್ ಲೀವ್ ಉಳಿಯುತ್ತದೆಂದು ಆ ಹಣವನ್ನು ಖರ್ಚು ಮಾಡುವಂತೆ ಇದರ ಲೆಕ್ಕ. ಔಷಧಿ ಬೇಕೋ ಬೇಡವೋ ಎನ್ನುವುದು ಜಿಲ್ಲೆಯಿಂದ ಲಿಸ್ಟ್ ತರಿಸಿ ಯಾವಯಾವ ಪ್ರಾಣಿಗಳ ಖಾಯಿಲೆಗೆ ಯಾವ ಯಾವ ಔಷಧಿ ಬೇಕು ಎನ್ನುವುದು ತಿಳಿಯದೆ ಖರೀದಿಸಲಾಗಿದೆ, ಮತ್ತು ಇಲ್ಲಿ ಒಂದು ಆಶ್ಚರ್ಯವೆಂದರೆ ಎಲ್ಲಿ 4 ಕಾಲಿನ ಪ್ರಾಣಿಗಳಿಗೆ ಬೇಕಾದ ಔಷಧಿಯನ್ನು ಎರಡು ಕಾಲಿನ ಪ್ರಾಣಿ ಬಂದು ತಿಂದು ಬಿಟ್ಟಿದೆ. 4 ಕಾಲಿನ ಪ್ರಾಣಿಗೆ ಬೇಕಾದ ಔಷಧಿಯನ್ನು ಎರಡು ಕಾಲಿನ ಪ್ರಾಣಿಗಳ ದೈನಂದಿನ ವೈಭವದ ಖಾಯಿಲೆಗಳಿಗೆ ಔಷಧಿ ತೆಗೆದುಕೊಂಡಿದ್ದಾರೆ. ಇದು ನನ್ನ ಸ್ಪಷ್ಟವಾದ ಆರೋಪ ಇದೆ. My allegation still stands 17ನೇ ತಾರೀಖು ಒಪ್ಪಿಕೊಂಡಿದ್ದಾರೆ. 26 ನೇ ತಾರೀಖು ಒಪ್ಪಿಕೊಂಡಿದ್ದಾರೆ. 31ನೇ ತಾರೀಖು ಒಪ್ಪಿಕೊಂಡಿದ್ದಾರೆ. 31ನೇ ತಾರೀಖಿನ ಬಗ್ಗೆ ಮಾತನಾಡಲಿಲ್ಲ. ನಾನು ಇನ್ನೊಂದು ಹೇಳಿದೆ : ಸದರಿ ನಿರ್ಣಯವನ್ನು ತೆಗೆದುಕೊಂಡಿರುವ ವ್ಯಕ್ತಿ ಈ ರೀತಿ ಪರ್ಚೇಸ್ ಮಾಡುವುದರಲ್ಲಿ he is an expert.. 199293ರಲ್ಲಿ 1993-94ರಲ್ಲಿ ಇದೇ ರೀತಿ ಕೆಲಸಗಳು ಆಗಿವೆ. ಅವರ ಮೇಲೆ ಲೋಕಾಯುಕ್ತ ಎನ್‌ಕ್ವೈರಿ ನಡೆಯುತ್ತಿದೆ. He has taker anticipatory bail. ಒಬ್ಬ ಅಧಿಕಾರಿ ಲೋಕಾಯುಕ್ತ ಎನ್‌ಕ್ವೈರಿ ಎದುರಿಸುತ್ತಿರುವಾಗ ಅವನು ಆ್ಯಂಟಿಸಿಪೇಟರಿ ಬೇಲ್ ತೆಗೆದುಕೊಂಡಿರುವಾಗ How can you continue him in the same post, giving him the same power to purchase drugs worth Rs.2.2

crores. ಇವತ್ತು ಯಾರೋ ಜಾರ್ಜ್‌ಶೀಟ್ ಹಾಕಿದರೆ, ಆ ವ್ಯಕ್ತಿಯನ್ನು ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ಅದು ಏನು ಮಹಾ ಘನಂದಾರಿ ಕೆಲಸ. ಈ ಒಂದು ಲೋಕಾಯುಕ್ತ ಎನ್‌ಕ್ವೈರಿ ಆಗುತ್ತಿರುವಾಗ ಆ್ಯಂಟಿಸಿಪೇಟರಿ ಬೇಲ್ ತೆಗೆದುಕೊಂಡಾಗಲಾದರೂ ಕೂಡ ಅವರನ್ನು ನೀವು ದೂರ ಇಡಬೇಕಾಗಿತ್ತು. ಅದನ್ನು ಕೂಡ ತಾವು ಮಾಡಲಿಲ್ಲ. ಇವತ್ತು 2.2 ಕೋಟಿ ರೂಪಾಯಿಗಳ ಪರ್ಚೇಸ್ ಮಾಡಿದ್ದೀರಿ. ಜಿಲ್ಲೆಯಿಂದ ಇಂಡೆಂಟ್ ಬಂದಿಲ್ಲ. ಈ ನನ್ನ ಅಲಿಗೇಷನ್ಸ್ ಅನ್ನು ಯಾವುದನ್ನು ಕೂಡ ನಿರಾಕರಿಸಿಲ್ಲ. ಅದರ ಬದಲಿಗೆ ಚಾರಿತ್ರ್ಯ ಹರಣ ಎಂದೆಲ್ಲಾ ಪದಗಳನ್ನು ಉಪಯೋಗಿಸಿದ್ದಾರೆ. ಅದೆಷ್ಟೋ ಲಕ್ಷ ಕೋಟಿಗಟ್ಟಲೆ ಕುರಿ, ಕೋಳಿ ಎಂದು ಹೇಳಿದಿರಲ್ಲಾ, ಆ ಮೂಲಕ ಪ್ರಾಣಿಗಳ ಹಿತ ಚಿಂತನೆ ಮಾಡುವುದಕ್ಕೋಸ್ಕರ ನಾವು ಮಾತು ಬರುವವರು ಮತ್ತು ಬುದ್ಧಿ ಇರುವವರು ಇಲ್ಲಿ ಕುಳಿತುಕೊಂಡಿದ್ದೇವೆ. ಅದಕ್ಕಾಗಿ ನಮ್ಮನ್ನು ಜನರು ಆರಿಸಿ ಕಳುಹಿಸಿದ್ದಾರೆ. ಅದಕ್ಕೋಸ್ಕರ ನಾನು ಈ ಒಂದು ಅವ್ಯವಹಾರದ ಬಗ್ಗೆ, ಈ ಒಂದು ಹಗರಣದ ಬಗ್ಗೆ, ನ್ಯಾಯಾಂಗ ತನಿಖೆಗಾಗಿ ಆಗ್ರಹಿಸುತ್ತೇನೆ. ಜೊತೆಗೆ ನೀವು ಒಂದು ನಿದಿಷ್ಟವಾದ ಉತ್ತರವನ್ನು ಕೊಡಿ. ಷೀಪ್ ಡೆವಲಪ್‌ಮೆಂಟ್ ಆ್ಯಂಡ್ ಷೀಪ್ ಬೋರ್ಡ್ ಅದರಲ್ಲಿ ಇವರು ನಿರ್ದೇಶಕರಾಗಿದ್ದಾಗ ಏನೇನು ಆಗಿದೆ, ದಯಮಾಡಿ ಅದನ್ನೂ ಕೂಡ ತರಿಸಿಕೊಳ್ಳಬೇಕೆಂದು ಹೇಳಿದ್ದೇನೆ. ಆ ಎಲ್ಲದಕ್ಕೂ ಕೂಡ ಇವರು ಸಮಂಜಸವಾದ ಉತ್ತರವನ್ನು ಕೊಡದೇನೇ Instead of protecting the dumb and mute the animal, you are protecting an officer. That shows your Government's priority. If you are so transparent, agree for an enquiry. Let the enquiry decide, whether Mr. Suresh Kumar is right or the Minister is right. Whether the person accusing is right or that officer is right. ಇದು ಇತ್ಯರ್ಥವಾಗಲಿ. ಓಪನ್ ಆಗಿ ಬಂದು you should welcome it.. ಆಯಿತು. ನಾವು ಎನ್‌ಕ್ವೈರಿ ಮಾಡುತ್ತೇವೆ ಇದರ ಬಗ್ಗೆ ಇತ್ಯರ್ಥ ಆಗಲಿ ಎಂದು. ಅದನ್ನು ಬಿಟ್ಟು ನೂರೆಂಟು ಕಥೆಗಳು ಹೇಳಿ, ಕೊನೆಗೆ ಅದೇನೋ ಕಾನ್ಫರೆನ್ಸ್ ಸೈಕಾಲಜಿ ಇದೆ. ಇದರಲ್ಲಿ ಎಲ್ಲಾ ಸದಸ್ಯರಿಗೂ ಸುಸ್ತು ಮಾಡುವುದು. ಆಗಲಿ ನಿಮ್ಮದೇ ಸರಿ ಇದೆ ಎನ್ನುವಂತೆ ಒಂದು ಸೈಕಾಲಜಿ ಇದೆ. ಆ ಸೈಕಾಲಜಿಯನ್ನು ನಮ್ಮ ಸಚಿವರು ಎಲ್ಲೋ ಕಲಿತು ಬಿಟ್ಟಿದ್ದಾರೆ. ಆ ಸೈಕಾಲಜಿಯನ್ನು ಕಲಿತು ಇಲ್ಲಿ ಅಡಾಫ್ಟ್ ಮಾಡುವುದಕ್ಕೆ ಬರುತ್ತಾರೆ. ನಿನ್ನೆ ನಾನು ಹೇಳಿದ ಅಲಿಗೇಷನ್‌ನಿಂದ ಒಂದು ಇಂಚೂ ಸಹ ನಾನು ಹಿಂದೆ ಹೋಗುವುದಕ್ಕೆ ಸಾಧ್ಯವಿಲ್ಲ. ಅದನ್ನು ಸುಳ್ಳು ಎಂದು ಹೇಳುವುದಕ್ಕೂ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ನಾನು ನ್ಯಾಯಾಂಗ ತನಿಖೆಗೆ ಆಗ್ರಹಿಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಸುರೇಶ್ ಕುಮಾರ್ ಆಗಲಿ ಅಥವಾ ಈ ಕಡೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರುವ ನಾವುಗಳು ಜವಾಬ್ದಾರಿಯಿಂದ ಮಾತನಾಡಬೇಕಾದರೆ, ಯಾವುದೋ ಒಬ್ಬ ಅಧಿಕಾರಿಯ ಬಗ್ಗೆ ನಮಗೆ ವೈಯಕ್ತಿಕವಾಗಿ ಏನೂ ಇರುವುದಿಲ್ಲ. ನಾನು ಅಂದುಕೊಂಡಿದ್ದೇನೆ, ಈ ಭಾಗದಲ್ಲಿ ಕುಳಿತಿರುವವರ ಕೆಲಸವೇ ಇದು. ಮಾಡಿರುವ ಒಳ್ಳೆಯ ಕೆಲಸಗಳನ್ನು ಜನರಿಗೆ ತಲುಪಿಸುವುದು. ತಪ್ಪು ಮಾಡಿದ್ದರೆ ಮತ್ತು ಏನಾದರೂ

ಲೋಪದೋಷಗಳು ಇದ್ದರೆ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಟ್ಟು ಅದರ ಗಮನವನ್ನು ಸೆಳೆಯುವುದು. ಇವತ್ತು ನಾವು ಗಮನಿಸಿದ್ದೇವೆ. ನಾವು ಯಾವುದೇ ವಿಷಯದ ಬಗ್ಗೆ, ಅಂಕಿ ಅಂಶಗಳೊಂದಿಗೆ ಚಾರ್ಜ್ ಮಾಡಿ ತನಿಖೆ ಮಾಡಿ ಎಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಗಳು, ಮತ್ತು, ಸಚಿವರು ಅದು ಆಗಿಲ್ಲವೆಂದು ಸರ್ಟಿಫಿಕೇಟ್ ಕೊಟ್ಟು ನಾವು ಅಂಕಿ ಅಂಶಗಳೊಂದಿಗೆ ಮತ್ತು ದಾಖಲೆಗಳೊಂದಿಗೆ ಹೇಳಿರುವುದನ್ನು ತಿರುಚುವಂಥದ್ದು ನಡೆಯುತ್ತಿದೆ. ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ : ನಾವು ಏನು ಹೇಳುತ್ತಿದ್ದೇವೆಂದರೆ, ಇದರ ಬಗ್ಗೆ ನೀವು ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸಿ. ನಮ್ಮಲ್ಲಿ ಅನೇಕ ದಾಖಲೆಗಳು ಇವೆ ಹಿಂದೆ ಅವರು ಅನೇಕ ರೀತಿಯ ಆರೋಪಗಳಲ್ಲಿ ತುತ್ತಾಗಿದ್ದಾರೆ. ಮುಂದೆ ಈ ರೀತಿ ನಡೆಯುವುದು ಬೇಡ. ಇದು ಇಲ್ಲಿಗೆ ಕೊನೆಯಾಗಬೇಕು. ನಾನು ಜನರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ ಇದನ್ನು ತಾವು ಒಪ್ಪಿಕೊಳ್ಳಿ, ಇದನ್ನು ಒಪ್ಪಿಕೊಳ್ಳುವುದರಿಂದ ಸರ್ಕಾರಕ್ಕೆ ಆಗೌರವ ಆಗುತ್ತದೆಯೇ? ನಿಮ್ಮಂಥ ಯುವಕರು ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನಿಮ್ಮ ಮೇಲೆ ನಾವು ದೂರುತ್ತಿದ್ದೇವೆಯೇ? ಇದರಲ್ಲಿ ಸತ್ಯಾಸತ್ಯತೆಗಳು ಹೊರಗೆ ಬರಲಿ, ನಮಗೆ ಕೊಟ್ಟಿರುವ ಮಾಹಿತಿ ನಿಜವಾಗಿಯೂ ಸರಿ ಇಲ್ಲದೇ ವಿನಾಕಾರಣ ಅಧಿಕಾರಿಗಳ ಬಗ್ಗೆ ನಾವು ಆರೋಪ ಮಾಡಿದ್ದರೆ ಅದು ಸರಿಯಲ್ಲವೆಂದು ಗೊತ್ತಾದರೆ ಅವರೂ ಕೂಡ ಒಳ್ಳೆಯ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

SRI S. RAJENDRAN : When he was discussing, he said there is a Lokayukta enquiry pending. How can the concerned officer can be continued when it is ? Is it a fact? If it is true, the concerned person should not continue when the Lokayukta enquiry is pending. ಅದು ನಡೆದಿರುವ ಹಿನ್ನೆಲೆಯಲ್ಲಿ ಆ ಅಧಿಕಾರಿ ಅಲ್ಲಿ ಇರಬೇಕೇ ಅಥವಾ ಬೇಡವೇ ಅದನ್ನು ನನಗೆ ಕ್ಲಾರಿಫೈ ಮಾಡಿದರೆ ನನಗೆ ಅನುಕೂಲವಾಗುತ್ತದೆ. It affects my constituency also. There is a Lokayukta enquiry registered. The same officer is continuing in the Municipality. ಲೋಕಾಯುಕ್ತ ಎನ್‌ಕ್ವೈರಿ ಆಗುವ ಸಮಯದಲ್ಲಿ ಹೇಗೆ ಆ ಅಧಿಕಾರಿ ಅಲ್ಲಿಯೇ ಮುಂದು ವರೆಯುವುದಕ್ಕೆ ಆಗುತ್ತದೆಯೇ? Kindly clarify. I will also be satisfied. I am bringing this matter to the notice of the Chair.

ಅಧ್ಯಕ್ಷರು : ನನಗೆ ಅದರ ಬಗ್ಗೆ ಮಾಹಿತಿ ಇಲ್ಲ, ಅದನ್ನು ಅವರೇ ಹೇಳುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ನಿನ್ನೆ ಈ ವಿಷಯ ಸದನದಲ್ಲಿ ಚರ್ಚೆಯಾದ ನಂತರ, ನನಗೆ ಟಪಾಲಿನಲ್ಲಿ ಒಂದು ಕಾಗದ ಬಂದು ಬಿದಿದ್ದೆ. ನನ್ನ ಪಿಜಿಯನ್ ಬಾಕ್ಸ್‌ಗೆ ಬಂದು ಬಿದ್ದಿದೆ ಇದು ಎಲ್ಲಾ ಶಾಸಕರಿಗೂ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಸಂಪೂರ್ಣ ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ, ನಾನು ಅದನ್ನು ಅಧ್ಯಕ್ಷರಿಗೆ ಕಳುಹಿಸಿ ಕೊಡುತ್ತೇನೆ. ಪ್ರಶ್ನೆಗಳ ರೂಪದಲ್ಲಿ ಇದೆ ಅದನ್ನು ಮಾತ್ರ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು

ಹಾಕಿರುವ ಪ್ರಶ್ನೆಗಳಲ್ಲಿ ಪಶುಪಾಲನೆ ಇಲಾಖೆಯಲ್ಲಿ 1992-93ನೇ ಸಾಲಿನಲ್ಲಿ ಇಲಾಖೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಅನೇಕ ದಿನಪತ್ರಿಕೆಗಳಲ್ಲಿ ದಿನಾಂಕ : 16-1-1992 ರಂದು ಪ್ರಕಟವಾಗಿದೆ. ಇದು ನಿಜವೇ? ನಿಜವಾಗಿದ್ದರೆ ಮಂತ್ರಿಗಳು ಹೇಳಬೇಕು. ಆ ಸಮಿತಿಯ ಸದಸ್ಯರ ಮೇಲೆ ಲೋಕಾಯುಕ್ತ ಪೋಲಿಸರು ಪ್ರಥಮ ಮಾಹಿತಿಯನ್ನು ವರದಿಯನ್ನು 2 : 97, ನ್ಯಾಯಾಂಗ 24 ಕಾವೇರಿ ಭವನದಲ್ಲಿ ದಾಖಲಿಸಿದ್ದಾರೆ. ಇದು ನಿಜವೇ? ಒಂದು ವರ್ಷ ಕಳೆದರೂ ಲೋಕಾಯುಕ್ತ ಪೋಲೀಸರು ಪೂರ್ಣ ಮಾಹಿತಿಯ ವರದಿ ಸಲ್ಲಿಸದಿರಲು ಕಾರಣವೇನು ಅಥವಾ ರಿಪೋರ್ಟ್ ಅನ್ನು ಹಾಕದಿರಲು ಕಾರಣವೇನು? ಮೇಲ್ನೋಟಕ್ಕೆ ವ್ಯವಹಾರ ನಡೆದಿರುವುದು ಸಾಬೀತಾಗಿದೆ. ಆದರೂ ಸಹಿತ ವಿಳಂಬ ಮಾಡುವ ಉದ್ದೇಶವಾದರೂ ಏನು? ಇದು ಅವರು ಕೇಳಿರುವಂಥ ಪ್ರಶ್ನೆ, ನನಗೆ ಶಾಸಕರುಗಳಿಗೆ ಕೇಳಿರತಕ್ಕ ಪ್ರಶ್ನೆಗಳನ್ನು ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ. ಈ ಸಮಿತಿಯ ಅಧ್ಯಕ್ಷರಾದ ಮಾನ್ಯ ಡಾ : ಜಿ. ಅಶ್ವಥನಾರಾಯಣರವರು ಕೇಸ್ ನ0 :136 :97, ದಿನಾಂಕ : 22.1.1997ರಂದು ಅವರು ಒಂದು ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ. ಇದು ನಿಜವೇ? ಖರೀದಿ ಸಮಿತಿಯವರು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ಕಾಯಿದೆ 13-1ಎ, 2,3,13(2) 120 ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆಯಲ್ಲಿ ಕ್ರಿಮಿನಲ್ ಕೇಸ್‌ಗಳನ್ನು ಹಾಕಿರುತ್ತಾರೆ. ಆ ಅಧಿಕಾರಿ ಇನ್ನೂ ಅದೇ ಸ್ಥಳದಲ್ಲಿ ಮುಂದುವರೆಯುತ್ತಿದ್ದಾರೆ. ಇದು ಸರಿಯೇ? ಅಂದಿನ ಸಮಿತಿಯ ಅಧ್ಯಕ್ಷರಾದ ಬಿ. ಸತ್ಯನಾರಾಯಣರವರು ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಇದ್ದಾಗ ಭ್ರಷ್ಟಾಚಾರ ಎಸಗಿದ್ದಾರೆ, ಅವರಿಗೆ ಇಲಾಖೆಯಿಂದ ಬಡ್ತಿ ನೀಡಿ ಅವರಿಗೆ ಉನ್ನತ ಹುದ್ದೆಯ ನಿರ್ದೇಶಕರಾಗಿದ್ದಾರೆ ಇದು ನಿಜವೇ, ನಿಜವಾಗಿದ್ದರೆ ಕಾರಣ ಏನು? ಇನ್ನು ಅನೇಕ ಪ್ರಶ್ನೆಗಳು ಇವೆ, ನಾನು ಅದನ್ನು ಬಿಡುತ್ತಿದ್ದೇನೆ. ನಾನು ದರದ ಬಗ್ಗೆ ಹೇಳಿ, ಕೇಸ್ ಮಾಡುತ್ತೇವೆಂದು ಹೇಳಿದರೆ, ಕೆಲವು ಮಾಹಿತಿಗಳನ್ನು ಇಲ್ಲಿ ಕಳುಹಿಸಿದ್ದಾರೆ. ಏನು ಹೇಳುತ್ತಾರೆ, ಮೆಡಿಸಿನ್ ಹೆಸರು ನನಗೆ ಅಷ್ಟೊಂದು ಗೊತ್ತಿಲ್ಲ. ಅಕ್ಸಿಟೋಸಿನ್ ಎಂಬ ಔಷಧಿ 100 ಎಂಎಲ್‌ಗೆ 400 ರೂಪಾಯಿನಂತೆ ಖರೀದಿಸಿದ್ದಾರೆ, ಅದರ ಬೆಲೆ ಮಾರ್ಕೆಟ್‌ನಲ್ಲಿ 35 ರೂಪಾಯಿ ಇದೆ. ಇದರಂತೆ ಇನ್ನು ಸುಮಾರು ಇವೆ. ನ್ಯಾಂ ವೆಂಜಿನ್ ಹೈಕ್ಲೋಫ್ಲೋರೈಡ್ ಅಂದರೆ ಡಿ.ಡಿ.ಟಿ ಪ್ರಯೋಗ ಶಾಲೆಯನ್ನು ವಾಷ್ ಮಾಡಲು ಉಪಯೋಗಿಸುವ 5 ಪರ್ಸೆಂಟ್ ಗ್ರೇಡ್ ಇರತಕ್ಕಂಥ ಡಿಡಿಟಿ ಒಂದು ಕೆಜಿಗೆ 4 ರೂಪಾಯಿ ಇದೆ, ಇವರು 36 ರೂಪಾಯಿಯಂತೆ ಖರೀದಿಸಿದ್ದಾರೆ. ಇದರ ಬಗ್ಗೆ ಸಚಿವರು ಹೇಳಬೇಕಾಗುತ್ತದೆ. ಈ ಎಲ್ಲಾ ವಿಚಾರವನ್ನು ಸಮಿತಿಯ ಉಪ ಸಮಿತಿಯನ್ನು ಮಾಡಿ ಬಚ್ಚೇಗೌಡರು ಸಚಿವರಾಗಿದ್ದಾಗ ಬೆಲ್ಲದ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯ ರಿಪೋರ್ಟ್ ಬಂತು. ಆ ರಿಪೋರ್ಟ್ ಬಂತೋ ಇಲ್ಲವೋ, ಬಂದಿದ್ದರೆ ಅದು ಎಲ್ಲಿ ಇದೆ. ಆ ರಿಪೋರ್ಟ್‌ನಲ್ಲಿ ಅವರು ಏನು ಕೊಟ್ಟಿದ್ದಾರೆ, ಅದನ್ನು ಸದನದ ಮುಂದೆ ಇಟ್ಟರೆ ಸಾಕು. ತೇಜೋವಧೆ ಮಾಡತಕ್ಕಂಥ ಪ್ರಮೇಯವೇ ಇಲ್ಲ. ಈ ರೀತಿಯ ಅವ್ಯವಹಾರ ಸರ್ಕಾರದಲ್ಲಿ ನಡೆಯುತ್ತಿದೆ, ಇದು ಆಗಬಾರದು ಎನ್ನತಕ್ಕಂಥದ್ದು ನಮ್ಮ ಇಚ್ಛೆ. ಗ್ರಾಹಕರ ಮೇಲೆ ಹಾಲಿನ ಬೆಲೆಯಲ್ಲಿ ಏಕಾಏಕಿಯಾಗಿ ಒಂದು ರೂಪಾಯಿ ಏರಿಸಿದಿರಿ. ಇವತ್ತು 4 ರೂಪಾಯಿ ಇರುವಂಥದ್ದನ್ನು 35 ರೂಪಾಯಿ ಬೆಲೆ

ಬಾಳತಕ್ಕಂಥದ್ದು 400 ರೂಪಾಯಿಗಳೆಂದು ಬಿಲ್ ಮಾಡುವುದಾದರೆ ವ್ಯತ್ಯಾಸ ಎಷ್ಟು ಬರುತ್ತದೆ. ಇಂತಹದ್ದನ್ನು ತಡೆಹಿಡಿದು ರೈತರಿಗೆ ಕೊಡಿ ಎಂದು ನಾವು ಕೇಳುತ್ತಿದ್ದೇವೆಯೇ ವಿನಹಃ ರೈತರಿಗೆ ವಿರೋಧವಾಗಿ ನಾವು ಹೇಳಲಿಲ್ಲ. ಇಲ್ಲಿ ಉಳಿದ ವಿಷಯ ಇರುವಂಥದ್ದನ್ನು ನಾನು ಅಧ್ಯಕ್ಷರಿಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ನಾನು ಹೇಳತಕ್ಕಂತಹ ಸಂದರ್ಭದಲ್ಲಿ ಈ ವ್ಯವಹಾರದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಎನ್ನುವ ಕಾರಣಕ್ಕಾಗಿ ಅವರಿಗೆ ತೇಜೋವಧೆ ಆಗಬಾರದೆಂದು ಹೇಳಿದೇನೇ ಹೊರತು ಅವರು ಉದ್ದೇಶಪೂರ್ವಕವಾಗಿ ಮಾಡಿರುತ್ತಾರೆಂದು ಹೇಳಲಿಲ್ಲ. ಎರಡನೆಯದಾಗಿ ದಿ. 9-1-98ರಂದು ಎರಡನೇ ಅರ್ಧವಾರ್ಷಿಕ ಔಷಧಿಯನ್ನು ಕೊಳ್ಳತಕ್ಕಂಥದ್ದರ ಬಗ್ಗೆ ಒಂದು ಸಭೆ ನಡೆದಿತ್ತು ಎನ್ನುವುದನ್ನು ನಾನು ಹೇಳಿದ್ದೆ. ಅವತ್ತು ಮೊದಲನೆ ಸಭೆ ನಡೆದಿತ್ತು. ಆ ಸಭೆಗೆ ಇಲಾಖೆಯ ನಿರ್ದೇಶಕರು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಮತ್ತು ರಾಸಾಯನಿಕವನ್ನು ಖರೀದಿಸಲು ಒಂದು ಪ್ರಸ್ತಾವನೆಯನ್ನು ಮಂಡಿಸುತ್ತಾರೆ. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಖರೀದಿ ಸಮಿತಿ ಇದೆ. ಆ ಖರೀದಿ ಸಮಿತಿಯ ಗಮನಕ್ಕೆ ಪ್ರಸ್ತಾವನೆಯನ್ನು ತಂದು ಅದನ್ನು ಮಂಡಿಸುತ್ತಾರೆ. ದಿನಾಂಕ : 6-1-98ರಂದು ಫಾರ್ಮಸ್ಯೂಟಿಕಲ್, ಸರ್ಜಿಕಲ್ ಔಷಧಿ ತಯಾರಿಕೆಗೆ ಒಂದು ಅರ್ಜಿಯನ್ನು ಕೊಡುತ್ತಾರೆ. ತಾವು ಪ್ರತಿ ಸಾರಿ ಸರ್ಕಾರಿ ಸ್ವಾಮ್ಯದ ಔಷಧಿಗಳನ್ನು ಕೊಂಡುಕೊಂಡು, ನಮಗೆ ಔಷಧಿಗಳನ್ನು ಕೊಂಡಕೊಳ್ಳಲು ಅವಕಾಶವನ್ನು ಕೊಡುತ್ತಾ ಇಲ್ಲ. ನಾವು ಜಿಎಂಪಿ ಸರ್ಟಿಫಿಕೇಟನ್ನು ಕೊಡಬೇಕೆಂದು ಕೇಳುತ್ತಿದ್ದೇವೆ. ಆ ಕಾರಣದಿಂದ ಆ ಅರ್ಜಿಯನ್ನು ಸಂಪೂರ್ಣ ಉನ್ನತಮಟ್ಟದ ಖರೀದಿ ಸಮಿತಿಯಲ್ಲಿ ಚರ್ಚಿಸಿ, ಕೊನೆಗೆ ದಿ. 9-5-98ರ ಸಭೆಯಲ್ಲಿ, 6-1-98ರ ಅರ್ಜಿಯಲ್ಲಿ ಅವರು ದರಗುತ್ತಿಗೆಯನ್ನು ನಿಗದಿ ಮಾಡಿ ನಮಗೂ ಅವಕಾಶವನ್ನು ಕೊಡಿ ಎಂದು ಕೇಳಿರುತ್ತಾರೆ. ಕಾರಣ 91-92 ಮತ್ತು 92-93ನೇ ಸಾಲಿನಲ್ಲಿ ಈ ಪ್ರೈವೇಟ್ ಔಷಧಿ ತಯಾರು ಮಾಡತಕ್ಕಂಥವರು ಕೋರ್ಟಿನ ಮುಂದೆ ಹೋದರು. ಏಕಸ್ವಾಮ್ಯ ಮಾಡಿಕೊಂಡು ಸರ್ಕಾರಿ ಸ್ವಾಮ್ಯದ ಈ ಸಂಸ್ಥೆಗಳಿಗೆ ಕೊಡುತ್ತಾರೆ, ನಮಗೂ ಕೊಡಬೇಕೆಂದು ಒಂದು ಕೋರ್ಟ್ ಆರ್ಡರನ್ನು ತಂದಿರುತ್ತಾರೆ. ಅದರ ಮೇಲೆ ಅರ್ಜಿಯನ್ನು ಕೊಟ್ಟ ಮೇಲೆ ಸರ್ಕಾರದವರು ಸಂಪೂರ್ಣವಾಗಿ ಅದನ್ನು ಉನ್ನತ ಮಟ್ಟದ ಸಮಿತಿಯಲ್ಲಿ ಚರ್ಚಿಸಿ ಕೊನೆಗೆ ಅವರಿಗೂ ಕೂಡ ದರಗುತ್ತಿಗೆಯನ್ನು ನೇಮಿಸಬೇಕೆಂದು ಹೇಳಿ ದಿನಾಂಕ : 9-1-98ರಂದು ದರಗುತ್ತಿಗೆಯನ್ನು ಪ್ರಕಟಿಸಲಾಯಿತು. ಇದಾದ ನಂತರ ದಿನಾಂಕ : 11-2-98ರಂದು ಟೆಂಡರ್ ನೀಡುವ ಕೊನೆಯ ದಿನಾಂಕವನ್ನು ನಿಗದಿಪಡಿಸಲಾಯಿತು.

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಈ ವಿಷಯ, ವಿಷಯ ಸಮಿತಿಯಲ್ಲಿ ಚರ್ಚೆಗೆ ಬಂದಿದೆ. ಇದು ಚರ್ಚೆಗೆ ಬಂದ ನಂತರ ವಿಷಯ ಸಮಿತಿಯಲ್ಲಿ ಒಂದು ಉಪಸಮಿತಿಯನ್ನು ರಚನೆ ಮಾಡಿ ಅದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚನೆ ನೀಡಿದ ಮೇರೆಗೆ ಅವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯ ಬಗ್ಗೆ

ಸರ್ಕಾರದ ನಿಲುವು ಏನು ಎಂದು ಹೇಳಿದರೆ ಈ ವಿಚಾರವೇ ಬೇಡ. ಅದಕ್ಕೆ ಸರ್ಕಾರ ಒಪ್ಪಿಗೆ ಕೊಡುತ್ತದೋ ಅಥವಾ ಇಲ್ಲವೋ ಎಂದು ಹೇಳಿದರೆ ಸಾಕು. ಇದರ ಬಗ್ಗೆ ವಿಶ್ಲೇಷಣೆ ಮಾಡುವಂತಹ ಅಗತ್ಯವಿಲ್ಲ. ಈ ಸದನಕ್ಕೆ ಮಂಡನೆ ಮಾಡುವುದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದೆಯೋ ಅಥವಾ ಇಲ್ಲವೋ ಎನ್ನುವ ಪ್ರಶ್ನೆ ಇದೆ. ಅದರ ಬಗ್ಗೆ ಬಹಳ ಕೂಲಂಕುಷವಾಗಿ ಇಲ್ಲಿ ಮಾನ್ಯ ಮಂತ್ರಿಗಳು ಚರ್ಚೆ ಮಾಡುವುದರ ಬದಲಿಗೆ ವಿಷಯ ಸಮಿತಿಗೆ ಆ ವರದಿಯನ್ನು ಮಂಡನೆ ಮಾಡಿದರೆ ಸಮಸ್ಯೆ ಇರುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಪ್ಪನವರು ನಮ್ಮ ಹೆಸರನ್ನು ಪ್ರಸ್ತಾಪ ಮಾಡಿದರು. ನಾನು ಆಗ ಪಶುಸಂಗೋಪನಾ ಸಚಿವನಾಗಿದ್ದೆ. ಇದೇ ರೀತಿ ವೀರಪ್ಪಮೊಯಿಲಿರವರ ಸರ್ಕಾರ ಬಂದಿತ್ತು. ಅವರ ಅವಧಿ ಮುಗಿದ ನಂತರ ನಾವು 94ರ ಡಿಸೆಂಬರ್‌ಗೆ ಬಂದೆವು. ಈಗ ನಾನು ಪಶುಸಂಗೋಪನಾ ಸಚಿವನಾಗಿದ್ದೆ. ಆಗಲೂ ಸಹ ಔಷಧಿಯ ಖರೀದಿಯಲ್ಲೂ ವಿಳಂಬವಾಗಿ ಏನು ಟೆಕ್ನಿಕಲ್ ಕಮಿಟಿ, ಹೈಪವರ್ ಕಮಿಟಿಗೆ ಕೊಟ್ಟಿದ್ದರೂ, ಅದರಲ್ಲಿ ವಿಶೇಷ ಸಮಿತಿಯನ್ನು ಮಾಡಿ ಎಂದು ಹೇಳಿದರು. ಅದರಲ್ಲಿದ್ದಂತಹ ಸದಸ್ಯರನ್ನು ಪೂಲ್ ಮಾಡಿ ಇವರ ಮುಂದೆ ಪ್ರಸ್ತಾಪ ಹೋಗಬೇಕು ಎಂದು ಬಂತು. ಎಲ್ಲಾ ಕಡೆಗಳಲ್ಲೂ ಕೇಳಿದಾಗ ಔಷಧಿಗಳಿಲ್ಲ ಎಂದು ಹೇಳಿದರು. ಪಶುಗಳಿಗೆ ಸಿಗುವಂತಹ ಔಷಧಿಗಳನ್ನು ತೆಗೆದುಕೊಳ್ಳಲು ಕ್ರಮವನ್ನು ತೆಗೆದುಕೊಳ್ಳೋಣ ಎಂದು ಹೇಳಿ, ನಾನು ಔಷಧಿಗಳನ್ನು ಖರೀದಿ ಮಾಡಿಕೊಳ್ಳುವುದಕ್ಕೆ ಹೈಪವರ್ ಕಮಿಟಿಯವರು ಸೂಚಿಸಿದ್ದಾರೆ ಎಂದು ಹೇಳಿದೆ. ತಾವು ಹೇಳಿದ ಹಾಗೆ ನೂರಾರು ಔಷಧಿಗಳನ್ನು ಸೂಚಿಸಿರುವಂಥದ್ದು ರೇಟ್ ಕಾಂಟ್ರ್ಯಾಕ್ಟ್ ಇವೆಲ್ಲಾ ಇಷ್ಯೂಸ್ ಆಗಿ ಮತ್ತು ಅಂದಿನ ಮುಖ್ಯಮಂತ್ರಿಗಳಾದ ದೇವೇಗೌಡರನ್ನು ಕೇಳಿದೆ. ನೀನು ಹೊಸ ಸಚಿವನಾಗಿದ್ದೀಯಾ ನೀನು ಸಚಿವ ಸಂಪುಟಕ್ಕೆ ಈ ವಿಷಯವನ್ನು ತಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಎಂದು ತಿಳಿಸಿದರು. ಈಗ ನಿವೃತ್ತಿಯಾಗಿರುವ ಶಿವಾನಂದರವರನ್ನು ಕರೆಸಿ ಏನಪ್ಪ ಇದರಲ್ಲಿ ಏನು ಇದೆ ಎಂದು ಕೇಳಿದರು. ಇದನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗಿ ಅಲ್ಲೇ ಇದು ತೀರ್ಮಾನವಾಗಲಿ ಎಂದು ಹೇಳಿದರು. ಸಚಿವ ಸಂಪುಟದಲ್ಲಿ ತೀರ್ಮಾನವಾಗಿ ಇದನ್ನು ಮನಗಂಡು ಈ ಔಷಧಿಗಳನ್ನು ಖರೀದಿ ಮಾಡಬೇಕೆಂದು ಆದೇಶವನ್ನು ನೀಡಿದರು. ನಾನು ಆ ಇಲಾಖೆಯ ವಿಷಯದ ಮೇಲೆ ಮಾತನಾಡುತ್ತಿದ್ದಾಗ ಮಾನ್ಯ ಬೆಲ್ಲದ್‌ರವರು ಕೆಲವು ಔಷಧಿಗಳನ್ನು ತಂದು ಇದು ಸರಿಯಿಲ್ಲವೆಂದು ಪ್ರಸ್ತಾಪವನ್ನು ಮಾಡಿದರು. ಆಗ ಮುಖ್ಯಮಂತ್ರಿಯವರು ಇದು ವಿಷಯ ಸಮಿತಿಗೆ ಹೋಗಿ ಅವರು ತೀರ್ಮಾನ ಕೊಡಲಿ ಎಂದು ಹೇಳಿದರು. ವಿಷಯ ಸಮಿತಿಯನ್ನು ಇಲ್ಲಿ ಇಡುವಂಥದಲ್ಲ, ತಮಗೆ ಕೊಟ್ಟಿರಬೇಕು, ಇದರ ಬಗ್ಗೆ ನಮಗೆ ಮಾಹಿತಿಯಿಲ್ಲ ಸಮಿತಿಯ ವರದಿ ತಮಗೆ ಕೊಡುವಂಥದ್ದು, ಸದನದಲ್ಲಿ ಇಡುವಂಥದ್ದು ಇದು ಸರ್ಕಾರಕ್ಕೆ ಕೊಡುವಂಥದ್ದಲ್ಲ. ಮಾನ್ಯ ಸಗೀರ್ ಅಹಮದ್‌ರವರು ಈ ವಿಷಯವನ್ನು ತಿಳಿದುಕೊಳ್ಳಬೇಕು. ಅದು ಮಾನ್ಯ ಸಭಾಧ್ಯಕ್ಷರ ಕಸ್ಟಡಿಯಲ್ಲಿರತಕ್ಕದ್ದು, ಅವನ್ನು ಮಂಡಿಸಿದ ಮೇಲೆ ಅದು ಅವರ ಕಸ್ಟಡಿಗೆ ಹೋಗುತ್ತದೆ. ಇದು ಅವರ ಮುಂದೆ ಇಡತಕ್ಕಂತಹ ವಿಷಯ. ಮಾನ್ಯ ಸುರೇಶ್ ಕುಮಾರ್‌ರವರು ಇತ್ತೀಚೆಗೆ ಆಗಿರುವಂತಹ

ಅವ್ಯವಹಾರಗಳ ಬಗ್ಗೆ ಎತ್ತಿರತಕ್ಕಂತಹ ಪ್ರಶ್ನೆಯಾದ್ದರಿಂದ ಅದು ಲೋಕಾಯುಕ್ತಕ್ಕೆ ರೆಫರ್ ಆಗಿತ್ತು. ಲೋಕಾಯುಕ್ತದಿಂದ ಬಂದ ವರದಿಗಳೇನು? ಅಲ್ಲಿಂದ ಕೊಟ್ಟಿರತಕ್ಕಂತಹ ಇಂಟೀರಿಯಮ್ ರಿಪೋರ್ಟ್ ಏನು? 1992-93ನೇ ಸಾಲಿನಲ್ಲಿ 30 ಲಕ್ಷ ರೂಗಳ ಅವ್ಯವಹಾರವಾಗಿತ್ತು ಎಂದು ಹೇಳುತ್ತಾ ಇದ್ದಾರೆ. ಅದರ ಬಗ್ಗೆ ಏನು ವರದಿಗಳು ಇದೆ, ಮತ್ತು ಆಗಿನ ಸಚಿವಸಂಪುಟದಲ್ಲಿ ಡಿಪಿಸಿ, ಮುಖ್ಯಮಂತ್ರಿಗಳೇ ಡೈರೆಕ್ಟರ್ ಆಗಬೇಕಾದರೆ, ಡಿಪಿಸಿಯನ್ನು ಕಂಡಕ್ಟ್ ಮಾಡಬೇಕಾಗಿತ್ತು. ಡಿಪಿಸಿಯನ್ನು ಕಂಡಕ್ಟ್ ಮಾಡಿ ಆತನ ಮೇಲೆ ಯಾವುದೇ ನೇರವಾದ ಆಪಾದನೆಗಳಿಲ್ಲವೆಂದು ಅಂದಿನ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ನಾನೂ ಸಚಿವನಾಗಿ I was one of the members in the committee. ಆಗ ತಡವಾಗಿ ಇಷ್ಟು ವರ್ಷವಾದರೂ ಯಾವುದೇ ಒಂದು ನಿರ್ದಿಷ್ಟವಾದ ಆರೋಪವನ್ನು ಆತನ ಮೇಲೆ 30 ಲಕ್ಷ ರೂ. ಖರೀದಿಯ ವ್ಯವಹಾರದಲ್ಲಿ ಯಾವುದೇ ಅವ್ಯವಹಾರವಾಗಿಲ್ಲವೆಂದು ಬಂದಿರುವುದರಿಂದ, ಬರೀ ಮೇಲ್ನೋಟಕ್ಕೆ ಆತನ ಮೇಲೆ ಯಾರೋ ಆಪಾದನೆ ಇದೆ ಎಂದು ಹೇಳಿ ತಮಗೆ ಈ ರೀತಿ ಅರ್ಜಿ ಬಂದಿದೆ. ಇದು ಇಲಾಖೆಗಳಲ್ಲಿ ನಡೆಯುತ್ತಿದೆ. ಇವತ್ತು ಈ ತರಹ ಅರ್ಜಿಗಳನ್ನು ನಮಗೂ ಸಹ ಕೊಡುತ್ತಾರೆ. ಅದೇ ಇಲಾಖೆಗಳಲ್ಲಿ ಇರುವಂತವರೇ ಅವಕಾಶಗಳು ಸಿಗಲಿಲ್ಲವೆಂದರೆ ನೂರೆಂಟು ಅರ್ಜಿಗಳನ್ನು ಬರೆಯುತ್ತಾರೆ. ಇದನ್ನು ಅಲ್ಲಿಯ ನೌಕರರುಗಳು ಬರೆದಿರುತ್ತಾರೆ. ಯಾರೇ ಜನರಾಗಲೀ, ಪಶು ಸಾಕಿರುವವರಾಗಲೀ ಇದನ್ನು ಬರೆದಿರುವುದಿಲ್ಲ. ಅಲ್ಲಿ ಯಾರಿಗಾದರೂ ಅವಕಾಶ ಸಿಗಲಿಲ್ಲವೆಂದು ಈ ತರಹ ಅರ್ಜಿಗಳನ್ನು ಬರೆಯುತ್ತಾರೆ. ಅನಾಮಧೇಯ ಪೆಟಿಷನ್ಸ್‌ಗಳನ್ನು ಹಾಕುತ್ತಾರೆ. ಇದೆಲ್ಲಾ ವ್ಯವಸ್ಥಿತವಾಗಿ ನಡೆಯುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಆಫೀಸಿನಲ್ಲಿ ಒಳಗಡೆ ನಡೆಯುವ ಈ ವ್ಯವಹಾರ ಬರಬೇಕಾದರೆ ಅದು ಅಲ್ಲಿಂದಲೇ ಬರಬೇಕು- ಅದು ಹೊರಗಡೆಯಿಂದ ಬರುವುದಿಲ್ಲ. ಹೊರಗಡೆಯಿಂದ ದನ ಸಾಕುವವನಾಗಲೀ ಹಾಲು ಕರೆಯುವವನಾಗಲೀ ಬರೆಯಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಇದರಲ್ಲಿ ಏನಾಗಿದೆ ಎಂದರೆ, ಇದು ಕೇವಲ ಎರಡು ಕೋಟಿ ರೂಗಳ ವ್ಯವಹಾರ ಇವರು ಹೇಳಿರುವಂತಹ ಸುದ್ದಿ ಎಂದರೆ ಕೋಟ್ಯಾಂತರ ರೂಪಾಯಿ ಎಂದು ಹೇಳುತ್ತಾರೆ. ಇದು ಸಾಮಾನ್ಯವಾಗಿ ಬರತಕ್ಕಂಥದುದ್ದ ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಮಾನ್ಯ ಸುರೇಶ್ ಕುಮಾರ್‌ರವರು ಎತ್ತಿರಕ್ಕಂತಹ ವಿಷಯದಲ್ಲಿ ಗುಲ್ಬರ್ಗಾದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಔಷಧಿ ಖರೀದಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಎಂದು ಹೆಡ್‌ಲೈನ್ ಮಾಡಿದ್ದಾರೆ. ಇದರಲ್ಲಿ ಔಷಧಿಗಳನ್ನು ಪರ್ಚೇಸ್ ಮಾಡಿರುವುದು ಕೇವಲ ಎರಡು ಕೋಟಿ ರೂ.ಗಳಷ್ಟು ಅಂತಹ ಹಣವನ್ನು ಏನು ಅವ್ಯವಹಾರ ಆಗಿದೆ ಎಂಬುದರ ಬಗ್ಗೆ.

ಶ್ರೀ ಎಸ್. ಸುರೇಶ್ ಕುಮಾರ್ : 2 ಕೋಟಿ 3 ಕೋಟಿ ರೂಗಳ ಬದಲಾಗಿ ಸಾವಿರ ಅಥವಾ 10-15 ಲಕ್ಷ ಎನ್ನುವುದಕ್ಕೆ ಆಗುತ್ತದೆಯೇ? ಕೋಟ್ಯಾಂತರ ಎಂಬುದಕ್ಕೆ ಯಾವುದಾದರೂ ಫಿಗರ್ ನಿಮ್ಮ ಹತ್ತಿರ ಇದೆಯಾ?

ಶ್ರೀ ಬಿ.ಎನ್. ಬಚ್ಚೇಗೌಡ : ಅವ್ಯವಹಾರವಾಗಿದೆ ಎಷ್ಟು ಆಗಿದೆ ಎಂಬುದರ ಬಗ್ಗೆ ಮಾಹಿತಿಯಿಲ್ಲ. ಅದಕ್ಕೆ ಕೋಟ್ಯಾಂತರ ರೂಪಾಯಿ ಅವ್ಯವಹಾರ ಎಂದಿದ್ದಾರೆ. ಎಷ್ಟು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಎಂಬುದರ ಬಗ್ಗೆ ಮಾನ್ಯ ಸಚಿವರು ಕೇಳುತ್ತಾರೆ. ನನ್ನ ಹೆಸರನ್ನು ಅವರು ಪ್ರಸ್ತಾಪ ಮಾಡಿದರು ಅದಕ್ಕಾಗಿ ಹೇಳಿದೆ. ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ವಿಷಯ ಸಮಿತಿಯಲ್ಲಿ ಅಧ್ಯಕ್ಷರಾಗಿರುವಂತವರು, ಅದಕ್ಕೊಂದು ಉಪಸಮಿತಿಯನ್ನು ನೇಮಕಮಾಡಿ ಚಂದ್ರಕಾಂತ್ ಬೆಲ್ಲದ್‌ರವರು ಉಪಸಮಿತಿಗೆ ಅಧ್ಯಕ್ಷರಾದಾಗ ಏನು ವರದಿಯನ್ನು ಸಿದ್ದಮಾಡಿದಾರೋ, ಆ ಸಂದರ್ಭದಲ್ಲಿ ಸಚಿವರನ್ನು ಕರೆಸಿದ್ದಾಗಲಿ, ಕೇಳಿದ್ದಾಗಲಿ, ಏನಾಗಿದೆ ನಿಮ್ಮ ಕಾಲದಲ್ಲಿ ಈ ಬಗ್ಗೆ ನಮಗೇನೂ ಮಾಹಿತಿ ಇಲ್ಲ.

8.50 ಪಿಎಂ

ತಮಗೆ ಏನಾದರೂ ಗೊತ್ತಾಗಿರಬೇಕು. ಅಷ್ಟು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) : ಹಿರಿಯ ಸದಸ್ಯರಾದ ಶ್ರೀ ಶಿವಪ್ಪನವರು ಹೇಳಿದ್ದನ್ನು ಕೇಳಿದೆ. ಆದರೆ ಹಿಂದೆ ಒಂದು ಸಾರಿ ನನ್ನ ಮೇಲೆ ಮೈಸೂರಿನಲ್ಲಿ 48 ನಿವೇಶನಗಳು ಇವೆ ಎಂದು ಆಪಾದನೆ ಆಯಿತು. 48 ಅಲ್ಲ, ಇವತ್ತು ಒಂದು ನಿವೇಶನ ಇದ್ದರೆ ಬೇಕಾದರೆ ಬರೆಸಿಕೊಳ್ಳಲಿ, ಲೋಕಾಯುಕ್ತ ವಿಚಾರಣೆ ಆಯಿತು, ಸಿಓಡಿ. ತನಿಖೆ ಆಯಿತು. ಏಕೆಂದರೆ ಕೆಲವರು ಅರ್ಜಿ ಬರೆದಾಗ ಏನೂ ಮಾಡುವುದಕ್ಕಾಗುವುದಿಲ್ಲ. ಕೆಲವು ಸನ್ನಿವೇಶದಲ್ಲಿ ವಿಚಾರಣೆ ಮಾಡಿದರೆ ಸಾಯುವವರೆಗೆ ವರದಿ ಕೊಡುವುದಿಲ್ಲ. ರಾಜಕೀಯದಲ್ಲಿ, ಅವರನ್ನು ಇಟ್ಟುಕೊಳ್ಳಬೇಕೆಂದರೆ ವರದಿ ಕೊಡದೆ ಹಾಗೇ ಇಟ್ಟುಕೊಳ್ಳುತ್ತಾರೆ. ಅಂಥ ತನಿಖೆ ಇದೆ ಎಂದರೆ ಸಾಯುವವರೆಗೆ ಅದನ್ನೇ ಚಾರ್ಜಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಇವತ್ತಿನ ಪಶು ಸಂಗೋಪನಾ ಸಚಿವರು ಉತ್ತರವನ್ನು ಇಡೀ ರಾಜ್ಯ ನೋಡುತ್ತಿದೆ ಎಂಬುದನ್ನು ಅವರು ಮರೆತಿದ್ದಾರೆ ಅನ್ನಿಸುತ್ತದೆ. ತುಂಬಾ ಸ್ಪಷ್ಟವಾಗಿ ತಮ್ಮಲ್ಲಿರತಕ್ಕ ದಾಖಲೆಗಳ ಸಮೇತ ಶ್ರೀ ಸುರೇಶ್ ಕುಮಾರ್ ಅವರು ಸಭೆಯ ಮುಂದಿಟ್ಟಾಗಲೂ ಕೂಡ ಸಚಿವರು ಇದನ್ನು ಒಪ್ಪದೇ ಇರುವುದು ನೋಡಿದರೆ ತುಂಬಾ ಆಶ್ಚರ್ಯವಾಗುತ್ತದೆ. ತುಂಬಾ ಸ್ಪಷ್ಟವಾಗಿ ಇಡೀ ರಾಜ್ಯ ನೋಡುತ್ತಿರತಕ್ಕ ಸಂದರ್ಭದಲ್ಲಿ ನ್ಯಾಯಾಂಗ ತನಿಖೆಗೆ ಹಾಕಿದರೆ ಏನು ತೊಂದರೆ? ಏಕೆಂದರೆ ಇಷ್ಟೊಂದು ದಾಖಲೆಗಳು ನಮ್ಮ ಹತ್ತಿರ ಇವೆ ಎಂದು ಹೇಳುತ್ತಿರುವ ಸಂದರ್ಭದಲ್ಲಿ ತಾವು ಇದಕ್ಕೆ ಒಪ್ಪಲಿಲ್ಲವೆಂದರೆ ಇಡೀ ರಾಜ್ಯದ ಜನರಿಗೆ ಈ ರೀತಿ ಭ್ರಷ್ಟಾಚಾರ ಮಾಡತಕ್ಕ ವ್ಯಕ್ತಿಗಳಿಗೆ ರಕ್ಷಣೆ ಕೊಡತಕ್ಕ ಪ್ರಯತ್ನವನ್ನು ಸಂಬಂಧಪಟ್ಟ ಸಚಿವರು ಮತು ಸರ್ಕಾರ ಮಾಡುತ್ತಿದೆ ಎಂಬ ಭಾವನೆ ಬರುತ್ತದೆ. ಇವರಿಗೆ ಇಷ್ಟು ಹೇಳಿದರೂ ಇವರದ್ದೇ ಇವರಿಗೆ. ಇದು ಪ್ರತಿಸಾರಿ ನಡೆಯುತ್ತಿದೆ. ನಮಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಒಂದು; ಎರಡನೆಯದು, ರೈತರನ್ನು ಅಭಿವೃದ್ಧಿ ಪಡಿಸಬೇಕು ಮತ್ತು ರೈತರಿಗೆ ಹಾಲಿನ ದರ ಜಾಸ್ತಿ

ಕೊಡಿಸಬೇಕೆಂಬುದು ಒಂದು. ಇದರ ಬಗ್ಗೆ ರಾಜ್ಯ ಸರ್ಕಾರ ಏನು ಯೋಚನೆ ಮಾಡಿದೆ ಇದಕ್ಕೆ ಬಿಜೆಪಿ. ಸಂಪೂರ್ಣ ಒಪ್ಪುತ್ತದೆ ಮತ್ತು ಬೆಂಬಲ ಕೊಡುತ್ತದೆ. ಗ್ರಾಹಕರಿಂದ ತೆಗೆದು ರೈತರಿಗೆ ಕೊಟ್ಟರೆ ನೀವು ಏನು ಕೂಡ ಮಾಡಿದ ಹಾಗೆ ಆಯಿತು? ನಿಮ್ಮ ಸಾಧನೆ ಏನು?

ಶ್ರೀ ಸಿ. ಬೈರೇಗೌಡ : ಮರದಲ್ಲಿ ಬಿಡುತ್ತದೆ ಹಣ; ಅಲ್ಲಿಂದ ತೆಗೆದು ಇವರಿಗೆ ಕೊಟ್ಟು ಬಿಡುತ್ತೇವೆ.

ಅಧ್ಯಕ್ಷರು : ಅವರ ಕರ್ತವ್ಯವನ್ನು ಅವರು ಮಾಡುತ್ತಾರೆ. ಸ್ವಲ್ಪ ನೆಮ್ಮದಿಯಿಂದ ಇರಿ; ನಿಮಗೂ ಸಾಕಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ತುಂಬಾ ಸ್ಪಷ್ಟವಾಗಿ ಎಲ್ಲೆಲ್ಲಿ ಲೂಟಿಯಾಗುತ್ತಿದೆ. ಎಂದು ಹೇಳಿದರೆ ಅದನ್ನು ಕಡಿಮೆ ಮಾಡುವುದಕ್ಕೆ ತಯಾರಿಲ್ಲ. ಆ ಲೂಟಿ ಹಾಗೇ ಮುಂದುವರಿಯುತ್ತಿರಬೇಕು. ವಿದ್ಯುತ್ ದರ ಜಾಸ್ತಿ ಮಾಡಿದರು, ಬಸ್ ದರ ಜಾಸ್ತಿ ಮಾಡಿದರು, ಕುಡಿಯುವ ನೀರಿನ ದರ ಜಾಸ್ತಿ ಮಾಡಿದರು, ಹಾಲಿನ ದರ ಜಾಸ್ತಿ ಮಾಡಿದರು. ಮತ್ತೆ ಈಗ ಗ್ರಾಹಕರಿಗೆ ಹಾಲಿನ ದರ ಜಾಸ್ತಿ ಮಾಡುತ್ತಿದ್ದೀರಿ. ರೈತರಿಗೆ ಜಾಸ್ತಿ ಮಾಡಿದ್ದನ್ನು ಖಂಡಿತ ನಾವು ಸ್ವಾಗತ ಮಾಡುತ್ತೇವೆ. ಆದರೆ ಗ್ರಾಹಕರಿಗೆ ಒಂದೂವರೆ ರೂಪಾಯಿ ಏನು ಜಾಸ್ತಿ ಮಾಡುತ್ತೀರಿ ಅದನ್ನು ವಾಪಸು ತೆಗೆದುಕೊಳ್ಳಬೇಕು. ಇವತ್ತು ಏನು ಎರಡು ಕೋಟಿ ಚಿಲ್ಲರೆ ರೂಪಾಯಿಗಳಿಗೆ ಸಂಬಂಧಪಟ್ಟಂತೆ ಭ್ರಷ್ಟಾಚಾರ ನಡೆದಿದೆ. ಅದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ಒತ್ತಾಯ ಮಾಡಿ ನಾವು ಧರಣೆ ಮಾಡುತ್ತೇವೆ.

(ಬಿಜೆಪಿಯ ಮಾನ್ಯ ಸದಸ್ಯರು ಧರಣೆ ಹೂಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇದರ ಬಗ್ಗೆ ಹೋದ ಸಾರಿ ಪ್ರಸ್ತಾಪವಾಗಿತ್ತು. ಪ್ರಸ್ತಾಪ ಆದ ಮೇಲೆ ಮುಂದೂಡಲ್ಪಟ್ಟಿತು. ಮುಂದಿನ ದಿನ ಶ್ರೀ ಸುರೇಶ್‌ಕುಮಾರ್ ಅವರು ತಮ್ಮ ಅನುಮತಿ ತೆಗೆದುಕೊಂಡು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದರು. ನನ್ನದೇನೆಂದರೆ, ಇಂಥವರ ಮೇಲೆ ಇಂಥ ಒಂದು ಆಪಾದನೆ ಇದೆ ಎಂದು ಹೇಳಿದ್ದಾರೆ ಮತ್ತು ರೇಟ್‌ಗಳ ಬಗ್ಗೆ ಕೂಡ ಹೇಳಿದ್ದಾರೆ. ಒಂದೊಂದು ಔಷಧಿಗೆ ಎಷ್ಟೆಷ್ಟು ವ್ಯತ್ಯಾಸವಾಗಿದೆ ಎಂದು ಹೇಳಿದ್ದಾರೆ. ಕೆಲವು ಕಡೆ 30-40 ರೂಪಾಯಿ ವ್ಯತ್ಯಾಸ ಇರತಕ್ಕದ್ದು ಇದೆ. ಅದಕ್ಕೆ ಇದನ್ನೆಲ್ಲಾ ದಯವಿಟ್ಟು ಸದನದ ಸಮಿತಿ ಮಾಡಿ ಒಪ್ಪಿಸಿ ಆ ಮೂಲಕ ತಮ್ಮ ಅಧ್ಯಕ್ಷತೆಯಲ್ಲಿ ಮಾಹಿತಿ ತರಿಸಿಕೊಳ್ಳಿ. ಇಲ್ಲದಿದ್ದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಗಾದರೂ ರೆಫರ್ ಮಾಡಿ. ಏಕೆಂದರೆ ಅದು ನಮ್ಮದೇ ಆದ ಸಮಿತಿ ಇರುತ್ತದೆ. ಅಲ್ಲಿ ಬೇಕಾದರೆ ನೋಡಿಕೊಂಡು ಸೂಕ್ತವಾದ ವ್ಯವಸ್ಥೆ ಮಾಡೋಣ. ಏಕೆಂದರೆ ಹಿಂದೆ ಸಿಮೆಂಟನದ್ದು ಆಗಿದೆ. ಹುಲುಕೋಟೆಯಲ್ಲಿ ದೊಡ್ಡ ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ಸಾಲ ತೆಗೆದುಕೊಂಡು ಅವ್ಯವಹಾರವನ್ನು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಗೆ ರೆಫರ್ ಮಾಡಿದರು. ಸಿಮೆಂಟ್ ಅವ್ಯವಹಾರದ ಬಗ್ಗೆ ಪಬ್ಲಿಕ್

ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡಲಾಗಿದೆ. ಇದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡಿ. ಆಗ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವುದಕ್ಕೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಒಂದು ಪ್ರಶ್ನೆಯನ್ನು ನಾನು ನೇರವಾಗಿ ಕೇಳುತ್ತೇನೆ. ಔಷಧಿ ಖರೀದಿಯಲ್ಲಿ 35 ರಿಂದ 400 ರೂಪಾಯಿಗಳವರೆಗೆ ವ್ಯತ್ಯಾಸವಾಗಿದೆ. ಪ್ರಶ್ನೆ ಕೇಳಿದ್ದು ನಿಜವೇ ಅಲ್ಲವೇ ಎಂದು ಉತ್ತರ ಕೊಡಲಿ. ನಾವು ಏನು ಕೇಳಿದ್ದೇವೆ ಅದು ಸ್ಪಷ್ಟ. 35 ರೂಪಾಯಿಗೆ ಸಿಗತಕ್ಕ ಔಷಧಿಯನ್ನು 400 ರೂಪಾಯಿಗೆ ಖರೀದಿ ಮಾಡಿದ್ದಾರೆಂದರೆ ಇದು ಸ್ಪಷ್ಟ. ಇದು ಮೇಲ್ನೋಟಕ್ಕೆ ಅಲ್ಲ, ನೇರವಾಗಿ ಭ್ರಷ್ಟಾಚಾರ ನಡೆದಿರತಕ್ಕದ್ದು ಸ್ಪಷ್ಟ. ಅದರಲ್ಲಿ ಅನುಮಾನ ಇಲ್ಲ. ಆದಕ್ಕಾಗಿ ನ್ಯಾಯಾಂಗ ತನಿಖೆ ಆಗಬೇಕೆಂಬುದರಲ್ಲಿ ಅರ್ಥ ಇದೆ. ಅದು ತಮಗೆ ಬಿಟ್ಟಿದ್ದು. ನ್ಯಾಯಾಂಗ ತನಿಖೆ ಆಗಬೇಕೇ ಅಥವಾ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಬೇಕೇ ಎಂಬುದು ತಮಗೆ ಬಿಟ್ಟಿದ್ದು. ಇಲ್ಲಿ ಎರಡು ಕೋಟಿ ರೂಪಾಯಿ ಅವ್ಯವಹಾರ ಎಂದರೆ ಇದು ಸಾಮಾನ್ಯ ಏನಲ್ಲ. ಇದು ಮೂಕ ಪ್ರಾಣಿಗಳಿಗೆ ಮಾಡತಕ್ಕ ಮೋಸ. ಇಲ್ಲಿ ನಾನು ವೈಯಕ್ತಿಕವಾಗಿ, ವ್ಯಕ್ತಿಗತವಾಗಿ ಆರೋಪಣೆ ಮಾಡುತ್ತೇನೆಂಬ ಪ್ರಶ್ನೆ ಅಲ್ಲ. ನಮಗೆ ಯಾರೋ ಬರೆದುಕೊಟ್ಟಿದ್ದಾರೆ. ಅದು ಇಲಾಖೆ ಇರಬಹುದು. ಇಲಾಖೆಯಿಂದ ಬರೆದುಕೊಟ್ಟಿರತಕ್ಕ ಪ್ರಶ್ನೆಗಳನ್ನು ಇಲ್ಲಿ ನಾವು ಏನು ಹೇಳಿದ್ದೇವೆ-ಅದು ಸರಿಯೇ ಇಲ್ಲವೇ ಎಂಬುದನ್ನು ನೋಡಿ ಸಾರಾಸಗಟಾಗಿ ಬೇಕಾದರೆ ತಳ್ಳಿಹಾಕಿ. 400 ರೂಪಾಯಿಗೆ ಔಷಧಿ ಕೊಂಡುಕೊಂಡಿದ್ದಾರೆಂದು ಹೇಳಬೇಕಾದರೆ ಭ್ರಷ್ಟಾಚಾರ ನಡೆದಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ನಮ್ಮ ನಿಯಮಾವಳಿ ಪ್ರಕಾರ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ನೇರವಾಗಿ ಯಾವುದರ ಮೇಲೆ ಬೇಕಾದರೂ ಪರಿಶೀಲನೆ ಮಾಡುವುದಕ್ಕೆ ಅಧಿಕಾರ ಇದೆ. ಆದುದರಿಂದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಯಾವತ್ತು ಯಾವ ನಿಮಿಷದಲ್ಲೂ ಸಹ ಇದರಲ್ಲಿ ಪ್ರವೇಶ ಮಾಡಿ ಅಲ್ಲಿ ಏನು ನಡೆಯುತ್ತಿದೆ ಎಂದು ನೋಡತಕ್ಕ ಅಧಿಕಾರ ಇದೆ. ಅದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ. ನಿಯಮಾವಳಿಯಲ್ಲಿರುವುದಕ್ಕೆ ಸರ್ಕಾರ ಅಡ್ಡಿ ಬರುವುದಕ್ಕೆ ತಯಾರಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಡ್ಡಿ ಎಂದರೆ ಅದು ಸ್ಪಸಿಫಿಕ್ ಆಗಿ ರಿಪೋರ್ಟ್ ಕೊಟ್ಟರೆ ಗೊತ್ತಾಗುತ್ತದೆ.

ಶ್ರೀ. ಸಿ. ಬೈರೇಗೌಡ : ಸಾರ್ವನಿಕ ಲೆಕ್ಕಪತ್ರ ಸಮಿತಿಯು ಯಾವತ್ತು ಯಾವಾಗ ಯಾವ ನಿಮಿಷದಲ್ಲಿ ಬೇಕಾದರೂ ಇದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಅಧಿಕಾರ ಇದೆ. ಅದಕ್ಕೆ ಸರ್ಕಾರದ ಯಾವ ಅಭ್ಯಂತರವೂ ಇಲ್ಲ..

ಶ್ರೀ ವಾಟಾಳ್ ನಾಗರಾಜ್ : ನಾನೂ ಕೂಡ ಧರಣಿ ಮಾಡುತ್ತೇನೆ. ಇದಕ್ಕೆ ಮಾನ್ಯ ಅಧ್ಯಕ್ಷರೇ ಹೇಳಲಿ.

(ಶ್ರೀ ವಾಟಾಳ್ ನಾಗರಾಜ್ ಅವರೂ ಸಹ ಧರಣಿ ಹೂಡಿದರು)

ಡಾ : ಎಂ.ಪಿ. ಕರ್ಕಿ : ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾಗಿ ನಾನು ಕೇಳಿದಾಗ ಸರ್ಕಾರ ಎರಡು ತಿಂಗಳಾದರೂ ಕಾಗದ ಪತ್ರಗಳನ್ನು ಕೊಟ್ಟಿಲ್ಲ.

ಶ್ರೀ ಸಿ. ಬೈರೇಗೌಡ : ಸಮಿತಿ ಕೇಳಿದಾಗ ಕೊಡಲೇಬೇಕಾಗುತ್ತದೆ.

ಅಧ್ಯಕ್ಷರು : ಸ್ವಲ್ಪವೂ ತಾಳ್ಮೆ ಇಲ್ಲವಲ್ಲಾ. ಈಶ್ವರಪ್ಪನವರೇ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಇನ್ನೂ ಬಹಳ ಮಹತ್ವವಾದ ವಿಚಾರಗಳನ್ನು ಚರ್ಚೆ ಮಾಡಿ ವರದಿ ಕೊಟ್ಟಿರತಕ್ಕ ಉದಾಹರಣೆಗಳು ನಮ್ಮಲ್ಲಿ ಇವೆ. ತಾವೆಲ್ಲರೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಕೆಲಸ ಮಾಡಿರತಕ್ಕವರೇ. ಮಾನ್ಯ ವಿರೋದ ಪಕ್ಷದ ನಾಯಕರು ಕೊಟ್ಟಿರತಕ್ಕ ಸಲಹೆಯನ್ನು ನೀವು ಒಪ್ಪಿಕೊಂಡರೆ ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಇದನ್ನು ರೆಫರ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿದರೆ ಸ್ವಾಗತಿಸುತ್ತೇನೆ. ಇದನ್ನು ಎಲ್ಲರೂ ಒಪ್ಪಬೇಕು. ಏಕೆಂದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರು ವಿರೋಧ ಪಕ್ಷದವರೇ ಇರುತ್ತಾರೆ. ಯಾರೇ ಇರಲಿ ಇದ್ದಾಗ ಸ್ಕ್ರೂಟಿನಿ ಮಾಡುವುದಕ್ಕೆ, ಸ್ಯಾಂಪಲ್ ರೆಕಾರ್ಡ್ಸ್ ತರಿಸುವುದಕ್ಕೆ ಅವಕಾಶ ಇದೆ. ಅದಕ್ಕಾಗಿ ನಾನು ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಮಾನ್ಯ ಈಶ್ವರಪ್ಪನವರಿಗೆ ಸಲಹೆ ಮಾಡುತ್ತೇನೆ, ದಯವಿಟ್ಟು ಅವರೂ ಬರಲಿ. ಅವರ ಕಡೆಯ ಸದಸ್ಯರು ಇರುತ್ತಾರೆ, ನಮ್ಮ ಕಡೆಯ ಸದಸ್ಯರು ಇರುತ್ತಾರೆ, ಬೇರೆ ಪಕ್ಷದ ಸದಸ್ಯರೂ ಕೂಡ ಇರುತ್ತಾರೆ. ಹೀಗಿರುವಾಗ ಎಲ್ಲರೂ ಕೂಡ ಫೈಲ್ ತರಿಸಿ ನೋಡುವುದಕ್ಕೆ ಆಗುತ್ತದೆ, ವ್ಯತ್ಯಾಸಗಳೇನೇ ಇದ್ದರೂ ಅವನ್ನು ನಾವು ನೋಡುವುದಕ್ಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಪ್ರತಿಪಕ್ಷದ ನಾಯಕರು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಕಳುಹಿಸಬೇಕೆಂದು ಹೇಳಿದ್ದಾರೆ. ಆದರೆ ಒಂದು ವಿಚಾರ; ನಾನು ಮಾತನಾಡುತ್ತಿದ್ದಾಗ ಶ್ರೀ ರಾಜೇಂದ್ರನ್‌ರವರು ಉಲ್ಲೇಖ ಮಾಡಿದ ಅಂಶವನ್ನು ನಾನು ಉಲ್ಲೇಖ ಮಾಡಬೇಕು. ಒಬ್ಬ ವ್ಯಕ್ತಿ Who is handling accounts and purchases is continuning in the same post ನ್ಯಾಚುರಲ್ ಜಸ್ಟೀಸ್ ಏನು? ಅವರನ್ನು ಅದರಿಂದ ದೂರ ಇಡಬೇಕು. ಇನ್ನು ಏನು ಕಾರ್ಯಕ್ರಮ ಎಂಬುದು ಅಲ್ಲ ಪ್ರಶ್ನೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಏನಿದೆ ಅದು ತೀರ್ಮಾನ ಮಾಡುವಾಗಲಾದರೂ ಕೂಡ A person against whom we have made allegations cannot continue in that position. Let the Government comes out with a statement.

(Interruptions)

ಶ್ರೀ ಸಿ. ಬೈರೇಗೌಡ : ಇವರು ಹೇಳಿದ ಹಾಗೆ ಎಲ್ಲಾ ಕೇಳುವುದಕ್ಕಾಗುವುದಿಲ್ಲ. ಇವರು ಆಪಾದನೆ ಮಾಡಿದ ತಕ್ಷಣ ಅವರನ್ನು ಮನೆಗೆ ಕಳುಹಿಸುವುದಕ್ಕಾಗುವುದಿಲ್ಲ. ಆಪಾದನೆ ಮಾಡಿದ

ತಕ್ಷಣ ಮನೆಗೆ ಕಳುಹಿಸಿ ಎಂದು ಹೇಳುವುದಕ್ಕೆ ಯಾವ ಕಾನೂನಿನಲ್ಲಿ ಅವಕಾಶ ಇದೆ? ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅದನ್ನು ನೋಡಲಿ, ಅದನ್ನು ಪರಿಶೀಲನೆ ಮಾಡಲಿ, ವರದಿ ಕೊಡಲಿ. ವರದಿ ಕೊಟ್ಟಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು. ಅದನ್ನು ತೆಗೆದುಕೊಳ್ಳುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಯಾರನ್ನು ಬೇಕಾದರೂ ಶಿಕ್ಷೆಗೆ ಗುರಿಪಡಿಸುವುದಕ್ಕೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದೆ. ತಮ್ಮ ತೀರ್ಪನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ಸಲಹೆ ಮಾಡಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ತಕ್ಷಣ ಅವರ ಮಾತುಗಳನ್ನು ಒಪ್ಪಬೇಕೆನ್ನುವುದು ಖಂಡಿತಾ ಬೇಡ. ಈ ತರಹ ಆಪಾದನೆ ಬಂದಾಗ ಮಾನ್ಯ ಪುಟ್ಟಸ್ವಾಮಿಗೌಡರು ಸಿಬಿಐ ತನಿಖೆಗೆ ಹಾಕಿದರು. ಯಾರೋ ಮೂವ್ ಮಾಡಿದರು. ಸಿಬಿಐ ಹಾಕಿ ಬಿಟ್ಟರಿ. ನಿಮಗೆ ಮಾನ ಮಾರ್ಯದೆ ಇದ್ದರೆ ಅವರನ್ನು ಅಲ್ಲಿಂದ ತೆಗೆದುಹಾಕಿ. ನಿಮಗೆ ಮಾನ ಮರ್ಯಾದೆ ಇದೆಯೇ?

ಶ್ರೀ ಸಿ. ಬೈರೇಗೌಡ : ನಿಮಗೆ ಇದೆ ಏನ್ರಿ? ಮಾನ ಮಾರ್ಯಾದೆ ನಿಮಗೆ ಇದೆಯೆ?

(ಗೊಂದಲ)

ಅಧ್ಯಕ್ಷರು : ನಾನು ತಮ್ಮಲ್ಲಿ ಇಷ್ಟೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ರಾತ್ರಿ ಒಂಬತ್ತು ಗಂಟೆಯಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಯಾವ ಸಲಹೆಯನ್ನು ಕೊಟ್ಟಿದ್ದಾರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಯಾವುದನ್ನು ಸಮರ್ಥನೆ ಮಾಡಿದ್ದಾರೆ ಅದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸೋಣ. ಪ್ರತಿಪಕ್ಷದವರು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಎಲ್ಲಾ ಪಕ್ಷದ ಸದಸ್ಯರು ಅದರಲ್ಲಿ ಪ್ರಾತಿನಿಧ್ಯ ಪಡೆದಿರುತ್ತಾರೆ. ಈ ಹಿಂದೆ ಇಂತಹ ಪ್ರಮುಖ ವಿಚಾರಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಿರತಕ್ಕದ್ದು ನಿಮ್ಮೆದುರಿಗೆ ಎವಿಡೆನ್ಸ್ ಇದೆ. ಇಂತಿಷ್ಟು ದಿವಸದಲ್ಲಿ ಅವರು ವರದಿ ಕೊಡಬೇಕೆಂದು ನಾನು ನಿಗದಿಪಡಿಸುತ್ತೇನೆ. ಸ್ಪಸಿಫಿಕ್ ಮ್ಯಾಟರ್ ರೆಫರ್ ಮಾಡುತ್ತೇನೆ. ಮತ್ತೆ ಗೆಳೆಯರಾದ ಸುರೇಶ ಕುಮಾರ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಆ ವಿಚಾರಣೆ ನಡೆಯುವಾಗ ಯಾರ ಮೇಲೆ ಆರೋಪವಿದೆ ಅವರು ಆ ಸ್ಥಾನದಲ್ಲಿದ್ದಾರೆ. ವಿಚಾರಣೆಗೆ ದಾಖಲೆ ಪತ್ರಗಳು ಹೇಗಾಗುತ್ತವೆ, ನಮಗೆ ನ್ಯಾಯ ಸಿಗುತ್ತದೆಯೇ ಆ ಕಾರಣದಿಂದ ಅವರನ್ನು ಅಲ್ಲಿ ಮುಂದುವರಿಸತಕ್ಕದ್ದು ಸಾಧುವಲ್ಲ ಎನ್ನತಕ್ಕ ವಿಚಾರವನ್ನು ಹೇಳಿದ್ದಾರೆ. ನಾನು ಇಷ್ಟು ಹೇಳುತ್ತೇನೆ, ಜವಾಬ್ದಾರಿ ಸರ್ಕಾರ ನಡೆಸತಕ್ಕವರು ಅವರ ವಿವೇಚನೆಗೆ ಆ ವಿಚಾರ ಬಿಡುತ್ತೇನೆ. ಅವರು ಆ ಸ್ಥಾನದಲ್ಲಿ ಮುಂದುವರಿಯಬೇಕೇ ಬೇಡವೇ ಎನ್ನತಕ್ಕದ್ದು ಅವರೇ ಆಲೋಚನೆ ಮಾಡಬೇಕು. ಅದನ್ನು ಅವರೇ ಇತ್ಯರ್ಥ ಮಾಡಲಿ. ನಾಳೆ ಅವರ ನಾಯಕರ ಜೊತೆಯಲ್ಲಿ ಮಾತನಾಡಲಿ. ಇಂತಹ ಒಂದು ಸನ್ನಿವೇಶ ಬಂತು ಹಾಗೆಂದು ಹೇಳಿ ಅವರು

ತೀರ್ಮಾನ ಮಾಡುತ್ತಾರೆ. ಯಾವ ಡಾಕ್ಯುಮೆಂಟ್ಸ್ ಕೂಡ ಇದರಲ್ಲಿ ಟ್ಯಾಂಪರ್ ಮಾಡುವುದಕ್ಕೆ ಆಗುವುದಿಲ್ಲ. ತಾವು ದಯಮಾಡಿ ನನ್ನಲ್ಲಿ ವಿಶ್ವಾಸ ಇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದ ಬಾರಿಯದು ನೆನಪು ಇದೆ. ನಾವು ಮೈಸೂರು ಪೇಪರ್ ಮಿಲ್‌ನ ಬಗ್ಗೆ ಪ್ರಸ್ತಾಪ ಮಾಡಿದ್ದೆವು, ಅದನ್ನು ತಾವು ದೊಡ್ಡ ಮನಸ್ಸು ಮಾಡಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಹಾಕಿದಿರಿ. ಅದಕ್ಕೆ 40 .ದಿವಸ ಸಮಯವನ್ನು ವರದಿ ಕೊಡಲಿಕ್ಕೆ ಕೊಟ್ಟಿರಿ. ಇವತ್ತಿನವರೆಗೆ ಆ ಸಮಿತಿಯ ರಚನೆಯೇ ಆಗಲಿಲ್ಲ. 40 ದಿವಸ ಸಮಯ ಕೊಟ್ಟು ವರದಿ ಕೊಡಬೇಕೆಂದು ಹೇಳಿದ್ದೀರಿ. 40 ದಿವಸಗಳಾಯಿತು. ಇವತ್ತಿನವರೆಗೆ ಆ ಸಮಿತಿಯೇ ಆಗಲಿಲ್ಲ.

SRI C. BYRE GOWDA : It is a reflection on the committee.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಕೃಷಿ ಮಂತ್ರಿಗಳು ಏಕೆ ಅವಸರ ಪಡುತ್ತೀರಿ; ಸ್ವಲ್ಪ ತಡೆಯಿರಿ. ನಾವು ಸ್ವತಃ ಅನುಭವಿಸುತ್ತಿದ್ದೇವೆ. ನಮ್ಮ ರಕ್ಷಣೆಗೆ ಮಾನ್ಯ ಸಭಾಧ್ಯಕ್ಷರು ಬರಬೇಕು. ಮತ್ತೆ ನಾನು ನಿಮಗೆ ನಿನ್ನೆ ಸದನದಲ್ಲಿ ಪ್ರಸ್ತಾಪವಾಗಿರುವ ವಿಚಾರವನ್ನು ತಿಳಿದು ಸಂಭಂಧಪಟ್ಟ ಅಧಿಕಾರಿ ಕೆಳಗಿನ ಅಧಿಕಾರಿಗಳಿಗೆ ಏನು ಹೇಳಿದ್ದಾರೆ, ಏನು ತೊಂದರೆಯಾಗುತ್ತದೆ ಎನ್ನುವುದನ್ನು ನಾನು ಹೇಳಿದೆ. ಆ ಅಧಿಕಾರಿಯನ್ನು ವರ್ಗಾವಣೆ ಮಾಡಿಯೆಂದು ಹೇಳಿದೆ. ಸರ್ಕಾರದಿಂದ ಉತ್ತರ ಏನು ಬಂತೆಂದರೆ ನೀವು ಹೇಳಿದ್ದೆಲ್ಲಾ ಕೇಳುವುದಕ್ಕಾಗುದಿಲ್ಲ ಅಂದರು. ಇವತ್ತು ಆ ಅಧಿಕಾರಿ ಅಲ್ಲಿರುವುದರಿಂದ ಏನು ಮಾಡುತ್ತಾರೆ ಎನ್ನುವುದನ್ನು ಅವರು ಬರೆದಿರುವ ಪತ್ರವನ್ನು ತಂದು ನಿಮಗೆ ತೋರಿಸಿದೆ. ಇದೇ ಅಧಿಕಾರಿ ಪತ್ರ ಬರೆದಿದ್ದಾನೆ, ಯಾರೋ ಡಾಕ್ಯುಮೆಂಟ್ಸ್‌ಗಳನ್ನು ಕೊಡುತ್ತಾರೆನ್ನುವ ಭ್ರಮೆಯನ್ನು ಇಟ್ಟುಕೊಂಡು ಈ ತರಹ ಪತ್ರ ಬರೆದಿದ್ದಾನೆ. ವಿಧಾನಸಭೆಯಲ್ಲಿ ಏನಾದರೂ ಈ ವಿಷಯ ಪ್ರಸ್ತಾಪವಾದರೆ ನೀವೇ ಮಾಹಿತಿ ಒದಗಿಸಿದ್ದೀರಿ ಎಂದು ಏಕೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬಾರದು ಎಂದು ನೋಟೀಸ್ ಕೊಟ್ಟಿದ್ದಾರೆ. ಏಕೆ ಈ ಸ್ಥಿತಿಗೆ ಬಂತೆಂದರೆ ಆ ಅಧಿಕಾರಿ ಆ ಸ್ಥಾನದಲ್ಲಿ ಮುಂದುವರಿಯುತ್ತಿರುವುದರಿಂದ ಈ ಸ್ಥಿತಿಗೆ ಬಂತು. ರಕ್ಷಣೆ ನಡೆಯುವ ಪ್ರಯತ್ನವನ್ನು ಅಧಿಕಾರಿಗಳು ಮಾಡುತ್ತಾರೆ. ಎನ್ನುವ ಒಂದೇ ಒಂದು ಉದ್ದೇಶದಿಂದ ಇಲ್ಲಿ ಪ್ರಶ್ನೆ ಕೇಳುತ್ತಿದ್ದೇನೆ. ದಾಖಲೆಗಳನ್ನು ಕೊಟ್ಟಿದ್ದಾರೆಂದು ಹೇಳಿ ಪತ್ರವನ್ನು ಅಧಿಕಾರಿಗಳಿಗೆ ಬರೆಯುತ್ತಾರೆ. ಆ ಪತ್ರವನ್ನು ತಮಗೆ ತೋರಿಸಿದ್ದೇನೆ. ಇಲ್ಲಿ ಪ್ರಶ್ನೆ ಮಾಡುತ್ತಿರುವಂತಹ ಉದ್ದೇಶ ಯಾವುದೇ ವ್ಯಕ್ತಿಯ ಮೇಲೆ ಅಥವಾ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆನ್ನುವ ಉದ್ದೇಶದಿಂದಲ್ಲ. ಸರ್ಕಾರದಲ್ಲಿ ಭ್ರಷ್ಟಾಚಾರವಾಗುವುದನ್ನು ನೋಡಿಕೊಂಡು ವಿರೋದಪಕ್ಷದವರು ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ತಮಗೆ ಹೇಳುತ್ತಿದ್ದೇನೆ, ನಿನ್ನೆ ಅವೊಂದು ಪತ್ರವನ್ನು ತಮಗೆ ತೋರಿಸಿದ್ದೇನೆ. ಇದೇ ಒಂದು ಉದ್ದೇಶಕ್ಕೆ ನೀವು ಮಾಡಿದಂತಹ ಆಪಾದನೆಗಳನ್ನು ನೀವು ಹೇಳಿದ ಹಾಗೆ ಕೇಳುವುದಕ್ಕಾಗುವುದಿಲ್ಲವೆಂದು ಈ ರೀತಿ ಹಗುರವಾಗಿ ಮಾತನಾಡಿದರೆ, ಎಷ್ಟೊಂದು ಕಷ್ಟಪಟ್ಟು ಮಾಹಿತಿಗಳನ್ನು ಹುಡುಕಿ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ತಾತ್ಸಾರವಾಗಿ ಮಾತನಾಡಿದರೆ

ವಿರೋಧಪಕ್ಷದವರು ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು ಹೇಳಿ? ನಾವು ಹೇಳತಕ್ಕ ಡಿಮಾಂಡ್ ತಪ್ಪಿದ್ದರೆ ತಪ್ಪು ಎಂದು ಹೇಳಲಿ, ನಾವು ಖಂಡಿತಾ ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು : ನಿಮ್ಮ ಭಾವನೆಗಳನ್ನು ನಾನು ಒಪ್ಪಿದ್ದೇನೆ. ಮೈಸೂರು ಪೇಪರ್ ಮಿಲ್ಸ್ ವಿಚಾರದಲ್ಲಿ ನೀವು ಹೇಳುತ್ತಿರುವ ವಿಚಾರದಲಿ ಒಂದು ಅಕ್ಷರ ಕೂಡ ತಪ್ಪಿಲ್ಲ. ಪೂರ್ಣ ಸತ್ಯ ಇದೆ. ನನ್ನ ಜೊತೆ ಪತ್ರ ವ್ಯವಹಾರ ಮಾಡುತ್ತಿದ್ದೀರಿ. ಆ ಕಾಗದ ಕೂಡ ನಾನು ನೋಡಿದ್ದೇನೆ. ಆದರೆ ಸ್ಥಾಯಿ ಸಮಿತಿ ರಚನೆ ಮಾಡತಕ್ಕದ್ದು ಇಲ್ಲಿ ಒಪ್ಪಂದದ ಮೂಲಕ ಒಡಂಬಡಿಕೆ ಮೂಲಕ ಪಟ್ಟಿಯನ್ನು ಕೊಟ್ಟು ಪಾರ್ಲಿಮೆಂಟರಿ ಮಿನಿಸ್ಟರ್ ಚೀಫ್‌ವಿಪ್ ನಾವೆಲ್ಲರೂ ಕುಳಿತು ಮಾಡಬೇಕಾಗಿರತಕ್ಕದ್ದು. ಈಗ ಅಧಿವೇಶನ ನಡೆಯುತ್ತಿದೆ. ಎಲೆಕ್ಷನ್ ಬಂತು ಇವೆಲ್ಲಾ ಕಾರಣಗಳಿಂದ ಫೈನಲ್ ಮಾಡಲಿಲ್ಲ? ನಿನ್ನೆ ಬಂದು ಪಾರ್ಲಿಮೆಂಟರಿ ಮಿನಿಸ್ಟರ್ ಇವತ್ತು ನಾಳೆಯೊಳಗೆ ಫೈನಲ್ ಮಾಡಿ ಅಧಿವೇಶನದ ಕಡೆಯ ದಿವಸ ಅನೌನ್ಸ್ ಮಾಡುತ್ತೇವೆಂದು ಹೇಳಿದ್ದಾರೆ. 40 ದಿವಸ ಏನು ಅವಧಿಯನ್ನು ಕೊಟ್ಟಿದೆ, ಸಮಿತಿ ರಚನೆಯಾದ ಮೇಲೆ 40 ದಿವಸ ಅವಧಿ ಕೊಡುತ್ತೇನೆ. ಸಮಿತಿಯವರು ಬೇರೆ ಯಾವುದೇ ಕೆಲಸವನ್ನು ತೆಗೆದುಕೊಳ್ಳದೆ ಮೊದಲು ಆ ಕೆಲಸ ಮಾಡುವುದಕ್ಕೆ ನಾನು ವ್ಯವಸ್ಥೆ ಮಾಡಿಕೊಡುತ್ತೇನೆ. ಈ ವಿಚಾರದಲ್ಲಿ ಕೂಡ ನಾನು ಅವರಿಗೆ ಅವಧಿಯನ್ನು ಫಿಕ್ಸ್ ಮಾಡಿ ವರದಿಯನ್ನು ಬೇಗ ಕೊಡುವ ಕೆಲಸವನ್ನು ಮಾಡಿಸಿಕೊಡುತ್ತೇನೆ. ನಾನು ಒಂದು ಪದವನ್ನು ಬಳಸಿದ್ದೇನೆ, ತಾವು ದಯವಿಟ್ಟು ಯೋಚನೆ ಮಾಡಿ. ಏಕೆಂದರೆ ಅಧ್ಯಕ್ಷಸ್ಥಾನದಲ್ಲಿದ್ದಾಗ ನಾನೇ ಇರಬಹುದು ಅಥವಾ ಬೇರೆ ಯಾರೇ ಇರಬಹುದು, ಇಲ್ಲಿಂದ ಬಳಸತಕ್ಕ ಪದಕ್ಕೆ ಬಹಳ ಬೆಲೆ ಇರಬೇಕಾಗುತ್ತದೆ. ಜವಾಬ್ದಾರಿಯುತ ಸರ್ಕಾರವನ್ನು ನಡೆಸುತ್ತಿದ್ದಾರೆ ಅವರ ವಿವೇಚನೆಗೆ ಬಿಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ವಿವೇಚನೆ ಎನ್ನತಕ್ಕ ಪದದ ಅರ್ಥ ಅನಂತ. ಆದ್ದರಿಂದ ಅವರ ವಿವೇಚನೆಗೆ ನಾನು ಬಿಡುತ್ತೇನೆ. ಹೇಗೆ ಮಾಡಬೇಕೆನ್ನುವುದನ್ನು ಚರ್ಚೆ ಮಾಡಿಕೊಳ್ಳಲಿ ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಮಾನ್ಯ ಯಡಿಯೂರಪ್ಪನವರು ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರು ಮತ್ತು ಎಲ್ಲರೂ ಕಿರಿಯರಿದ್ದೀರಿ; ದಯಮಾಡಿ ಸಹಕರಿಸಿ, ತಾವು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದಲ್ಲಿ ಯಾರೇ ಇರಲಿ. ಈ ತರಹ ಒಂದು ಸಂದರ್ಭ ಬಂದಾಗ ಇದುವರೆಗೆ ನಡೆದುಕೊಂಡು ಬಂದಂತಹದ್ದನ್ನು ತಾವು ನೋಡುತ್ತಿದ್ದೀರಿ. ಒಂದು ಸಾರಿ ಪ್ರತಿಪಕ್ಷದವರು ಹೇಳತಕ್ಕ ಮಾತನ್ನು ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡೋಣವೆಂದು ಸರ್ಕಾರವೇ ಮುಂದು ಬಂದು ತಾವು ಹೇಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿದ್ದೀರಿ ಅದು ಎನ್‌ಕ್ವೈರಿ ಮಾಡಿ ವರದಿ ಕೊಡುವವರೆಗೆ ಯಾವ ಅಧಿಕಾರಿಯ ಮೇಲ ಆರೋಪವಿದೆ ಅವರನ್ನು ಬೇರೆ ಸ್ಥಾನದಲ್ಲಿಡುತ್ತೇವೆ ನಿಷ್ಪಕ್ಷಪಾತ ಎನ್‌ಕ್ವಾಯರಿ ಮಾಡುವುದಕ್ಕೆ ಅನುಕೂಲವಾಗಲಿದೆಯೆಂದು ಹೇಳಬೇಕಾಗಿತ್ತು. ಆ ಅಧಿಕಾರಿ ಆ ರೀತಿ ಅಲ್ಲ

ಅದರಲ್ಲಿ ಅವರದೇನು ಪಾತ್ರವಿಲ್ಲವೆಂದರೆ ಅವರಿಗೆ ಬೇಕಾದರೆ ಇನ್ನು ಹೆಚ್ಚಿನ ಸ್ಥಾನ ಮಾನ ಕೊಟ್ಟು ಅವರನ್ನು ಗೌರವಿಸಲಿ ನಾವೇನೂ ಬೇಡ ಎನ್ನುವುದಿಲ್ಲ. ಈ ಸಂದರ್ಭದಲ್ಲಿ ಅವರನ್ನು ಅದೇ ಸ್ಥಾನದಲ್ಲಿಟ್ಟುಕೊಂಡು ಮುಂದುವರಿಸುವಂತಹದ್ದು. ಇದು ಸುಮ್ಮನೆ ಮೇಲ್ನೋಟಕ್ಕೆ ತನಿಖೆ ಮಾಡುತ್ತೇವೆ ಅಂದರೆ ಏನೂ ಆಗುವುದಿಲ್ಲ. ಇದುವರೆಗೆ ಯಾವ ಅಧಿಕಾರಿಯೂ ಮನೆಗೆ ಹೋಗಿಲ್ಲ. ಸಮಯ ವ್ಯರ್ಥವಾಗಿದೆ. ನಾವು ಚರ್ಚೆ ಮಾಡುವುದು ಅನಗತ್ಯವಾಗುತ್ತಿದೆ. ಏನೂ ಬೇಕಾದರೂ ಮಾಡಿ ಮನೆಗೆ ಹೋಗಬಹುದು ಎನ್ನುವುದಕ್ಕೆ ನಾವೇ ಸರ್ಟಿಫಿಕೇಟ್ ಕೊಟ್ಟಹಾಗೆ ಆಗುತ್ತದೆ. ನಾಳೆ ಹೇಳುತ್ತಾರೆ ಆವತ್ತು ಆರೋಪ ಮಾಡಿದ್ದರಲ್ಲ ರೀ; ತಾವು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿಸಿದ್ದರಲ್ಲಾ ಎಂದು. ಯಾವ ದಾಖಲೆಪತ್ರಗಳನ್ನು ಸಮಿತಿಗೆ ಒದಗಿಸಬೇಕೋ ಅವುಗಳನ್ನೆಲ್ಲಾ ಸರಿ ಮಾಡಿ ಇಟ್ಟುಕೊಳ್ಳುವುದಕ್ಕೆ ಅವರನ್ನು ಅಲ್ಲಿಯೇ ಇಡುತ್ತೀರಾ? ಸಚಿವರು ಯುವಕರಿದ್ದೀರಿ; ಪ್ರಾಮಾಣಿಕರು ಇದ್ದೀರಿ ಒಂದು ತಿಂಗಳು ಎನ್‌ಕ್ವಾಯರಿ ಮಾಡುವವರೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿ ಬರುವವರೆಗೆ ಅವರನ್ನು ಬೇರೆ ಸ್ಥಾನದಲ್ಲಿಡುತ್ತೇವೆ. ಅದೇ ಸ್ಥಾನದಲ್ಲಿ ಮುಂದುವರಿಸುವುದಿಲ್ಲವೆಂದು ಹೇಳಿದರೆ ಸರ್ಕಾರ ದೊಡ್ಡತನ ತೋರಿದ ಹಾಗೆ ಆಗುವುದಿಲವೇ? ದಯಮಾಡಿ ಅದನ್ನು ಮಾಡಿ. ನಾವು ಹೇಳುತ್ತಿರುವುದು ಇದುವರೆಗಿನ ಅನುಭವ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಏಕೆ ಕೇಳುತ್ತಿದ್ದೇನೆಂದರೆ, ನಾವು ಧರಣಿಯನ್ನು ಖಂಡಿತಾ ವಾಪಸ್ಸು ತೆಗೆದುಕೊಳ್ಳುತ್ತೇವೆ. ಇಲ್ಲಿ ಪ್ರಶ್ನೆ ಬಂದಿರುವುದು, ನನ್ನ ನೋವು ನಿಮ್ಮ ಹತ್ತಿರ ತೋಡಿಕೊಂಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿಯೆಂದು ಹೇಳಿದ್ದೇವೆ. ಅದಕ್ಕೆ ನೀವು ಒಪ್ಪಿಲಿಲ್ಲವೆಂದರೆ ಬಿಡಿ. ಏನೇನು ನಡದಿದೆ ಎನ್ನುವ ದಾಖಲೆ ಸಮೇತ ನಿಮಗೆ ಕೊಟ್ಟಿದ್ದೇನೆ. ವಿಧಾನಸಭೆಯಲ್ಲಿ ಈ ವಿಷಯ ಚರ್ಚೆಯಾಗಲು ಕಾರಣರಾದ ನಿಮ್ಮ ಮೇಲೆ ಕ್ರಮವನ್ನು ಏಕೆ ತೆಗೆದುಕೊಳ್ಳಬಾರದೆಂದು ನೋಟೀಸ್ ಕೊಟ್ಟಿರುವ ಬಗ್ಗೆ ಆ ಅಧಿಕಾರಿ ಬಗ್ಗೆ ಏನು ಮಾಡಬೇಕೋ ಗೊತ್ತಿಲ್ಲ. ನಾವು ಧರಣಿ ಮಾಡುತ್ತಿರುವ ಉದ್ದೇಶ ಏನು? ಏನೋ ಸಾಧನೆ ಮಾಡುವುದಕ್ಕೆ ಹೊರಟ್ಟಿದ್ದೇವೆ ಎಂದೇ? ಅದಕ್ಕೋಸ್ಕರ ನಾನು ಹೇಳುತ್ತಿರುವುದು, ನಮಗೆ ಖಂಡಿತ ಅಧಿಕಾರಿ ಯಾರು ಎಂದು ಅವರ ಮುಖ ನೋಡಿಲ್ಲ ಇಲ್ಲಿ ಪ್ರಶ್ನೆ ಬಂದಿರುವುದು, ಈ ರೀತಿ ಇಷ್ಟೊಂದು ಆರೋಪ ಆಗಿರುವ ಸಂದರ್ಭದಲ್ಲಿ ಸಂಬಂಧ ಪಟ್ಟವರನ್ನು ಒಂದು ತಿಂಗಳು ಡಿಸ್‌ಮಿಸ್ ಮಾಡಿ. ಸಸ್ಪೆಂಡ್ ಮಾಡಿ ಎಂದು ಏನು ನಾವು ಹೇಳಲಿಲ್ಲ. ಆ ಜಾಗದಲ್ಲಿ ಒಂದು ತಿಂಗಳೋ, 15 ದಿವಸವೋ ವಿಚಾರಣೆ ಆಗುವವರೆಗೆ ಆ ಜಾಗದಲ್ಲಿ ಇರಕೂಡದೆಂದು ನಮ್ಮ ಆಸೆ. ಉಳಿದಿದ್ದು ನಿಮಗೆ ಬಿಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ತಾವು ಅತ್ಯಂತ ಜವಾಬ್ದಾರಿಯುತವಾಗಿ ಸರ್ಕಾರ ನಡೆಸತಕ್ಕವರ ವಿವೇಚನೆಗೆ ಬಿಡುತ್ತಿದ್ದೇನೆಂಬ ಮಾತನ್ನು ಹೇಳಿದಿರಿ. ಆದರೆ ಸರ್ಕಾರದ ವಿವೇಚನೆಗೆ ಬಿಡುತ್ತೇನೆಂದರೆ ಸರ್ಕಾರ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು. ಅವರ ಮೇಲೆ ಹೊಣೆಗಾರಿಕೆ ಇದೆ. ಆದುದರಿಂದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡುವಾಗ ಒಂದು ಕಾಲಾವಧಿಯನ್ನು ನಿಗದಿ ಮಾಡಿ. ಸರ್ಕಾರ ಯಾವ ರೀತಿ ತನ್ನ ಜವಾಬ್ದಾರಿ ನಿರ್ವಹಣೆ

ಮಾಡುತ್ತಿದೆ ಎಂಬುದನ್ನು ನೋಡಬೇಕು. ಸತ್ಯಾಸತ್ಯತೆಯನ್ನು ಶೋಧನೆ ಮಾಡುವ ಕೆಲಸವನ್ನು ಸರ್ಕಾರ ಯಾವ ರೀತಿ ನಿರ್ವಹಣೆ ಮಾಡುತ್ತದೆಂದು ಅವರು ಹೇಳತಕ್ಕ ವಿಷಯದಲ್ಲಿನ ಒಳ ಅರ್ಥ ಅತ್ಯಂತ ಜವಾಬ್ದಾರಿಯುತವಾದುದು. ತಮ್ಮ ಅನಿಸಿಕೆ ಏನಿದೆ ಆ ಜವಾಬ್ದಾರಿಯನ್ನು ಸೇರಿಸಿ ಸರ್ಕಾರಕ್ಕೆ ಜವಾಬ್ದಾರಿ ಕೊಡುತ್ತಿದ್ದೀರಿ. ಸರ್ಕಾರ ಯಾವ ರೀತಿ ಆ ಹೊಣೆಗಾರಿಕೆಯನ್ನು ನಿರ್ವಹಣೆ ಮಾಡುತ್ತದೆ ಸತ್ಯವನ್ನು ಕಂಡುಹಿಡಿಯುವುದರ ಮೂಲಕ ಎಂಬುದನ್ನು ಸರ್ಕಾರ ದಯವಿಟ್ಟು ಚಿಂತನೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆಯವರೆಗೆ ಸದನವನ್ನು ಮುಂದೂಡಿ; ನಾವು ತಮ್ಮ ಕೊಠಡಿಗೆ ಬರುತ್ತೇವೆ, ತಮ್ಮನ್ನು ಕನ್‌ವಿನ್ಸ್ ಮಾಡುವ ಪ್ರಯತ್ನ ಮಾಡುತ್ತೇವೆ. ಇಲ್ಲದಿದ್ದರೆ ತಾವು ಏನು ಹೇಳುತ್ತೀರಿ ಅದನ್ನು ನಾನು ಕೇಳುವುದಕ್ಕೆ ಸಿದ್ದರಿದ್ದೇವೆ.

ಅಧ್ಯಕ್ಷರು : ನಾನು ಆ ಕೆಲಸವನ್ನು ಯಾವಾಗಲೋ ಮಾಡುತ್ತಿದ್ದೆ. ಆದರೆ ಬೇಡಿಕೆ ಮೇಲೆ ಚರ್ಚೆ ನಡೆಯುವ ಸಂದರ್ಭದಲ್ಲಿ ಒಂದು ಸಾರಿ ಸಂಬಂಧಪಟ್ಟ ಮಂತ್ರಿಗಳು ಉತ್ತರ ಪ್ರಾರಂಭಿಸಿದ ಮೇಲೆ ಅವತ್ತಿನ ದಿವಸಕ್ಕೆ ಅದನ್ನು ಪೂರ್ತಿ ಮಾಡಬೇಕು. ರಿಪ್ಲೈ ಮಾಡುವ ಪ್ರೋಸೆಸ್ ಅನ್ನು ಮರು ದಿವಸಕ್ಕೆ ಕ್ಯಾರಿ ಮಾಡುವುದಕ್ಕೆ ಬರುವುದಿಲ್ಲ. ನಾನು ಇವತ್ತು ಉಳಿದ ಇಬ್ಬರು ಮಂತ್ರಿಗಳ ರಿಪ್ಲೈ ಪೂರ್ತಿ ಮಾಡಿಸಿ ಆ ಡಿಮ್ಯಾಂಡ್ ಅನ್ನು ಕ್ಲೋಸ್ ಮಾಡಬೇಕು. ಮಾನ್ಯ ಸದಸ್ಯರೇನಾದರೂ ಬೇಡಿಕೆ ಮೇಲೆ ಮಾತನಾಡುತ್ತಿದ್ದು ಅಪೂರ್ಣವಾಗಿದ್ದರೆ ಅವರಿಗೆ ಮರುದಿವಸಕ್ಕೆ ಮುಂದುವರಿಸಲು ಹೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರವನ್ನು ಮರುದಿವಸ ಕೊಟ್ಟಿರತಕ್ಕ ಅನೇಕ ಉದಾಹರಣೆಗಳು ಇವೆ.

ಅಧ್ಯಕ್ಷರು : ಅದು ಬೇರೆ ವಿಚಾರಗಳ ಮೇಲೆ ಬರುತ್ತದೆ; ಆದರೆ ಬೇಡಿಕೆಗಳ ಮೇಲೆ ಬರುವುದಿಲ್ಲ. ಆಗಲೇ ಮಾನ್ಯ ಪಶುಸಂಗೋಪನಾ ಸಚಿವರು ಕೆ.ಜಿ.ಎಫ್. ನಲ್ಲಿ ಒಂದು ಸಭೆಯ ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದೇನೆ. ಇವತ್ತು ತಡವಾಗುವುದಾದರೆ ನನಗೆ ನಾಳೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡುತ್ತೀರಾ ಎಂದು ಕೇಳಿದರು. ಅಲ್ಲಿ ಶಾಸಕರಾದ ಶ್ರೀ ರಾಜೇಂದ್ರನ್ ಅವರು ಕಾಯುತ್ತಿದ್ದಾರೆ, ನಾನು ಅಲ್ಲಿಗೆ ಹೋಗಿ ಬರುತ್ತೇನೆ ಅಂದರು. ನಾನು ಅವರಿಗೆ ಆಗಬಹುದೆಂದು ಹೇಳಿದ ಮೇಲೆ ನಮ್ಮ ಕಾರ್ಯದರ್ಶಿಯವರು ಓಡಿ ಬಂದು ಹೇಳಿದರು; ಇಲ್ಲ; ಹಾಗೆ ಆಗುವುದಿಲ್ಲ, ಇವತ್ತೇ ಮುಗಿಸಬೇಕಾಗುತ್ತದೆ. ಒಂದು ಸಾರಿ ಉತ್ತರ ಪ್ರಾರಂಭ ಆದಮೇಲೆ ಅವತ್ತೇ ಅದನ್ನು ಮುಗಿಸಬೇಕು, ಬೇಡಿಕೆಗಳನ್ನು ಪಾಸ್ ಮಾಡಿಕೊಡಬೇಕು ಅಂದರು. ಆಮೇಲೆ ಅವರಿಗೆ ಹೇಳಿಕಳುಹಿಸಿ ವಾಪಸ್ಸು ಕರೆಸಿಕೊಂಡೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಇತಿಮಿತಿಯನ್ನು ಅರ್ಥಮಾಡಿ ಕೊಳ್ಳಬೇಕಲ್ಲಾ. ಈ ವಿಷಯ ಬಿಡಿ. ನಾವು ಬೆಳಿಗ್ಗೆ 10 ಗಂಟೆಗೆ ಬಂದಿದ್ದೇವೆ.

ಅಧ್ಯಕ್ಷರು : ನಾನು ಹೊಸ ಸಂಪ್ರದಾಯವನ್ನು ಹೇಗೆ ಮಾಡಲಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ 9-15 ಆಗಿದೆ. ಅವರಾದರೂ ವಿಚಾರ ಮಾಡಬೇಕಲ್ಲಾ. ನಾವು ಎಷ್ಟು ಜನ ಮಾತನಾಡಿದರೂ ಅವರು ಉತ್ತರ ಕೊಡಬೇಕಲಾ. ಮಾನ್ಯ ಬೈರೇಗೌಡರು 5 ಗಂಟೆ ತೆಗೆದುಕೊಂಡಿದ್ದಾರೆ. ಇನ್ನು ಒಬ್ಬೊಬ್ಬರು ಒಂದೊಂದು ಗಂಟೆ ತೆಗೆದುಕೊಂಡರೂ ರಾತ್ರಿ 11 ಗಂಟೆಯಾಗುತ್ತದೆ.

ಅಧ್ಯಕ್ಷರು : ಸಿರಿಕಲ್ಚರ್ ಮೇಲೆ ಒಬ್ಬರೇ ಮಾತನಾಡಿರುವುದು. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಫಿಷರೀಸ್ ಮೇಲೆ ಒಬ್ಬರು ಮಾತನಾಡಿದ್ದಾರೆ, ಸೆರಿಕಲ್ಚರ್ ಮೇಲೆ ಒಬ್ಬರು ಮಾತನಾಡಿದ್ದಾರೆ. ಆದ್ದರಿಂದ ಇವತ್ತು ಎಷ್ಟು ಹೊತ್ತಾದರೂ ಆಗಲಿ ಬಹಳ ಹೊತ್ತು ಮಾತನಾಡಬೇಕು, ಕ್ಲಾರಿಫಿಕೇಷನ್ ಕೇಳಬೇಕೆಂದರೆ ನಾನು ಅಡ್ಡ ಬರುವುದಕ್ಕಾಗುವುದಿಲ್ಲ ಆದರೆ ಒಂದು ಸಾರಿ ಬೇಡಿಕೆ ಮೇಲೆ ಚರ್ಚೆಗೆ ಮಾನ್ಯ ಮಂತ್ರಿಗಳು ಉತ್ತರ ಪ್ರಾರಂಭಿಸಿದ ಮೇಲೆ ಅದನ್ನು ಮುಕ್ತಾಯ ಮಾಡಿ ಬೇಡಿಕೆಯನ್ನು ಮತಕ್ಕೆ ಹಾಕಬೇಕೇ ಹೊರತು ಅದನ್ನು ಮರು ದಿವಸಕ್ಕೆ ಕ್ಯಾರಿ ಮಾಡುವುದಕ್ಕೆ ಬರುವುದಿಲ್ಲ. ಅದೇ ಸದಸ್ಯರ ಭಾಷಣವಾದರೆ ಅರ್ಧಕ್ಕೆ ನಿಲ್ಲಿಸಿ ಮರು ದಿವಸ ಮುಂದುವರಿಸಿ ಎಂದು ಹೇಳಬಹುದು. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮತ್ತು ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಮಾಡುವಾಗ ಮಾಡಬಹುದು; ಆದರೆ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವ ವೇಳೆಗೆ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಇದುವರೆಗೆ ಏನು ಸಂಪ್ರದಾಯ ನಡೆದುಕೊಂಡು ಬಂದಿದೆ ಅದರ ಪ್ರಕಾರ ನಡೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊದಲು ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದೆವು. ಮಾನ್ಯ ಪ್ರತಿಪಕ್ಷದ ನಾಯಕರು ಇದನ್ನು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗೆ ಒಪ್ಪಿಸಿ ಎಂದು ಸಲಹೆ ಮಾಡಿದರು.

ಅಧ್ಯಕ್ಷರು : ನಾನು ತಮ್ಮಲ್ಲಿ ಇಷ್ಟೇ ವಿನಂತಿಸುತ್ತೇನೆ. ನಾನು ಆಡಿರತಕ್ಕ ಮಾತು ತಾವು ಎಲ್ಲರೂ ಹೇಳಿರತಕ್ಕದ್ದಕ್ಕಿಂತ ಹರಿತವಾದುದು. ಸುರೇಶ್ ಕುಮಾರ್, ಈಶ್ವರಪ್ಪನವರು ಹಾಗೂ ತಾವೆಲ್ಲರೂ ಏನು ಭಾಷೆ ಬಳಸಿದ್ದೀರಿ ಅದೆಲ್ಲಕ್ಕಿಂತ ಹರಿತವಾದ ಮಾತನ್ನು ನಾನು ಸರ್ಕಾರಕ್ಕೆ ಹೇಳಿದ್ದೇನೆ. ನಾನು ಇಷ್ಟೇ ಹೇಳಿದೆ; ಜವಾಬ್ದಾರಿಯುತವಾಗಿ ಸರ್ಕಾರವನ್ನು ನಡೆಸುತ್ತಿದ್ದಾರೆ, ಅವರ ವಿವೇಚನೆಗೆ ಬಿಡುತ್ತೇನೆಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಮಾತನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲವಲ್ಲಾ.

ಅಧ್ಯಕ್ಷರು : ನಾನು ಅದರ ವಿವೇಚನೆಗೆ ಬಿಡುತ್ತೇನೆ. ಬೇಕಾದರೆ ನಾಳೆ ದಿವಸ ಅವರ ನಾಯಕರ ಹತ್ತಿರ ಮಾತನಾಡಲಿ ಎಂದು ಹೇಳಿದ್ದೇನೆ. ಆ ಅಧಿಕಾರಿಯನ್ನು ಮುಂದುವರಿಸುವ ಅಥವಾ ಬಿಡತಕ್ಕ ವಿಚಾರವನ್ನು ಅವರು ವಿಚಾರ ಮಾಡಲಿ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ತಾವು ವಿರೋಧಪಕ್ಷದ ನಾಯಕರಾಗಿ ಮತ್ತಿತರ ಸಂದರ್ಭದಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದೀರಿ.

ಸುಮಾರು ಹತ್ತು ವರ್ಷಗಳ ಕೆಳಗೆ ತಾವು ಮತ್ತು ನಾನು ಒಟ್ಟಿಗೆ ಒಂದು ಸಮಿತಿಯಲ್ಲಿ ಕೆಲಸ ಮಾಡಿದ್ದೇವೆ. ಯಾವ ಯಾವ ರೀತಿ ಸಮಿತಿ ಕೆಲಸ ಮಾಡಿದೆ ಎಂದು ತಮಗೆ ಗೊತ್ತಿದೆ, ಆ ಬಗ್ಗೆ ಅನುಭವ ಇದೆ. ನಾವು ಆಗ್ರೋ ಇಂಡಸ್ಟ್ರೀಸ್‌ನ ವರದಿ ತಯಾರು ಮಾಡಬೇಕಾದರೆ ಯಾವ ರೀತಿ ಒತ್ತಡ ತಂದಿದ್ದರು ಎಂಬುದು ಗೊತ್ತಿದೆ ಅವತ್ತು ನಾನು ಆಡಳಿತ ಪಕ್ಷದ ಸದಸ್ಯನಾಗಿದ್ದೇ. ಆ ಸಂದರ್ಭದಲ್ಲಿ ನಾವು ಹೇಗೆ ಮಾಡಿದ್ದೇವೆಂದು ತಮಗೆ ಗೊತ್ತು. ತಾವು ದಯಮಾಡಿ ನನ್ನ ಜೊತೆ ಸಹಕರಿಸಬೇಕು. ನಮ್ಮ ಸ್ಥಾಯಿ ಸಮಿತಿಯಲ್ಲಿ ದಯಮಾಡಿ ವಿಶ್ವಾಸವಿಡಿ ದಯಮಾಡಿ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳಿ. ಏಕೆಂದರೆ ಈಗ ಭಾರತ ಸರ್ಕಾರವನ್ನು ಒತ್ತಾಯಿಸುವ ಒಂದು ನಿರ್ಣಯ ಕೂಡ ಇದೆ. ಅದನ್ನು ಯುನಾನಿಮಸ್ ಆಗಿ ಅಡಾಫ್ಟ್ ಮಾಡಬೇಕಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಎರಡು ನಿಮಿಷಗಳಲ್ಲಿ ಅವರು ಉತ್ತರವನ್ನು ಮುಗಿಸುತ್ತಾರೆ. ತಾವು ನನ್ನ ಜೊತೆಯಲ್ಲಿ ದಯಮಾಡಿ ಸಹಕರಿಸಬೇಕೆಂದು ವಿನಂತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿರ್ಣಯವನ್ನು ನಾಳೆ ತೆಗೆದುಕೊಳ್ಳೋಣ ಈಗ ಅದಕ್ಕೆ ಮಹತ್ವ ಬರುವುದಿಲ್ಲ.

ಅಧ್ಯಕ್ಷರು : ನಿರ್ಣಯವನ್ನು ನಾಳೆ ತೆಗೆದುಕೊಳ್ಳುತ್ತೇನೆ. ಈಗ ಬೇಡಿಕೆಗಳನ್ನು ಮಾತ್ರ ಮುಗಿಸೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ತಾವು ಸಭಾಧ್ಯಕ್ಷರ ಸ್ಥಾನದಲ್ಲಿದ್ದೀರಿ. ನಿಜಕ್ಕೂ ತಮಗೆ ಗೌರವ ಕೊಡುವ ದೃಷ್ಟಿಯಲ್ಲಿ ನಾವು ನಿಮ್ಮ ಮಾತು ಕೇಳುವುದಕ್ಕೆ ತಯಾರಿದ್ದೇವೆ. ಸರ್ಕಾರಕ್ಕೂ ಕೂಡ ತಾವು ತುಂಬಾ ಸ್ಪಷ್ಟವಾಗಿ ವಿವೇಚನೆಯಿಂದ ತೀರ್ಮಾನ ತೆಗೆದುಕೊಳ್ಳಿ ಎಂದು ನಿರ್ದೇಶನ ಕೊಟ್ಟಿದ್ದೀರಿ : ಒಂದು ವಿರೋಧ ಪಕ್ಷವಾಗಿ ನಾವು ನಿಮ್ಮ ಮಾತಿಗೆ ಗೌರವ ಕೊಡುವುದಕ್ಕೆ ತಯಾರಿದ್ದೇವೆ. ಈಗ ಸರ್ಕಾರ ತಮ್ಮ ಮಾತು ಕೇಳಿ, ನಮ್ಮ ಮಾತು ಕೇಳಿ ಒಂದು ತೀರ್ಮಾನಕ್ಕೆ ಬರಲಿ ನಾವು ಯಾರ ಮೇಲೂ ವೈಯಕ್ತಿಕ ಪ್ರತಿಷ್ಠೆ ಇಟ್ಟುಕೊಳ್ಳದೆ ಇರತಕ್ಕ ಸಂದರ್ಭದಲ್ಲಿ ಮೊದಲೂ ಕೂಡ ನಾವು ಆ ವ್ಯಕ್ತಿಯನ್ನು ನೋಡಿಲ್ಲ. ಈಗ ಯಾವ ಅಧಿಕಾರಿ ಇದ್ದಾರೆ ಅವರಿಗೆ ಒಂದು ತೀರ್ಮಾನ ಬರುವವರೆಗೆ, ಕನಿಷ್ಟ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ತನಿಖೆ ಆಗುವವರೆಗೆ ಅವರನ್ನು ಪಕ್ಕಕ್ಕೆ ಇಡುವುದಕ್ಕೆ ನಾವು ತಯಾರಿದ್ದೇವೆಂದು ಸರ್ಕಾರ ಉತ್ತರ ಕೊಡಲಿ.

ಶ್ರೀ ಬಿ.ಬಿ. ನಿಂಗಯ್ಯ : ಎರಡನೇ ಅರ್ಧ ವರ್ಷಕ್ಕೆ ಏನು ಔಷಧಿ ಕೊಂಡಿದ್ದಾರೆ.....

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಉತ್ತರವನ್ನು ನಾವು ನೋಡಿದ್ದೇವೆ. ನಿಮ್ಮ ಉತ್ತರ ಬಹಳ ಸೂಕ್ತವಾಗಿದೆ, ಬಹಳ ನ್ಯಾಯವಾಗಿದೆ. ಜ್ಞಾನವಂತರು, ನಿಷ್ಠಾವಂತರು ಎಂದು ನಿಮ್ಮ ಬಗ್ಗೆ ಬೇಡ. ನಾವು ಅಧ್ಯಕ್ಷರ ಬಗ್ಗೆ ಗೌರವ ಕೊಟ್ಟು ಬಂದಿದ್ದೇವೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಕಳುಹಿಸುವುದಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಮತ್ತೆ ಅದರ ಬಗ್ಗೆ ಚರ್ಚೆ ಏತಕ್ಕೆ ಈಗ? ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಚರ್ಚೆಯಾದ ಮೇಲೆ ನೀವು ಅಲ್ಲಿ ಉತ್ತರ ಕೊಡಿ.

ಶ್ರೀ ಸಿ. ಬೈರೇಗೌಡ : ತಾವು ಬಹಳ ಸೂಕ್ಷ್ಮವಾಗಿ ಹೇಳಿದ್ದೀರಿ; ಮತ್ತೆ ಮುಂದೆ ಹೋಗಿ ಏನು ಹೇಳಿದ್ದೀರೆಂದರೆ, ನಿಮ್ಮ ನಾಯಕ ಹತ್ತಿರ ಮಾತುಕತೆ ನಡೆಸಬೇಕಾಗುತ್ತದೆ ಎಂಬ ಮಾತನ್ನು ಕೂಡ ತಾವು ಹೇಳಿದ್ದೀರಿ. ನಾವು ತಮ್ಮ ಮಾತಿಗೆ ಗೌರವ ಕೊಟ್ಟು ಇವತ್ತಿನ ದಿವಸ ತಮ್ಮ ಸಲಹೆಯನ್ನು ಒಪ್ಪುತ್ತಿದ್ದೇವೆ.

ಅಧ್ಯಕ್ಷರು : ಈಗಲೇ ಘೋಷಣೆ ಮಾಡಿ ಎಂದು ಹೇಳುವುದಕ್ಕೆ ಅವಕಾಶ ಕೊಡೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಸರ್ಕಾರದ ಪರವಾಗಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಒಂದು ತಿಂಗಳಲ್ಲಿ ತನಿಖೆ ಮಾಡುವುದಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಸಿ. ಬೈರೇಗೌಡ : ತಮ್ಮ ಮೇಲೆ ನಿರ್ಬಂಧ ಹೇರತಕ್ಕದ್ದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಯಾವ ನಿರ್ಬಂಧವನ್ನೂ ಹಾಕುತ್ತಿಲ್ಲ. ನಮ್ಮ ಮನವಿ ಅಷ್ಟೇ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಯಾವ ನಿರ್ಬಂಧದ ಪ್ರಶ್ನೆ ಅಲ್ಲ, ನನ್ನ ಮೇಲೆ ಒತ್ತಡ ಹೇರತಕ್ಕದ್ದು ಅಲ್ಲ. ವಿಷಯದ ಗಂಭೀರತೆಯನ್ನು ಗಮನಿಸಿ, ಇವತ್ತು ನಾಳೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯನ್ನು ಏನು ಪ್ರಕಟ ಮಾಡುತ್ತಿದ್ದೇವೆ, ಅವರು ಪ್ರಥಮವಾಗಿ ಆದ್ಯತೆ ಮೇರೆಗೆ ಈ ಕೆಲಸವನ್ನು ತೆಗೆದುಕೊಂಡು 30 ದಿನಗಳೊಳಗೆ ವರದಿಯನ್ನು ಕೊಡತಕ್ಕದ್ದು. ಒಂದು ವೇಳೆ 30 ದಿನಗಳು ಸಾಕಾಗುವುದಿಲ್ಲವೆಂಬ ಅಭಿಪ್ರಾಯವನ್ನು ಸಮಿತಿಯವರು ತಾವಾಗಿ ಬಂದು ನನ್ನ ಹತ್ತಿರ, ಇನ್ನೂ ಒಂದು ವಾರ ಅಥವಾ 15 ದಿವಸ ಕಾಲಾವಧಿ ಬೇಕೆಂದು ಕೇಳಿದರೆ ನಾನು ಅವಧಿಯನ್ನು ವಿಸ್ತರಣೆ ಮಾಡುತ್ತೇನೆಯೇ ಹೊರತು, ನಾನು ಯಾವ ಕಾರಣಕ್ಕೂ ಅವಧಿ ವಿಸ್ತರಣೆ ಮಾಡುವುದಿಲ್ಲ. 30 ದಿನಗಳೊಳಗೆ ವರದಿ ಕೊಡಿಸತಕ್ಕ ಪ್ರಯತ್ನ ಮಾಡುತ್ತೇನೆ. ಮಾನ್ಯ ಈಶ್ವರಪ್ಪನವರು ಒಂದು ಮಾತು ಹೇಳಿದರು, ಅಧ್ಯಕ್ಷರಿಗೆ ಗೌರವ ಕೊಡುತ್ತೇನೆ ಎಂದು. ಅಧ್ಯಕ್ಷಪೀಠದಲ್ಲಿ ಕುಳಿತಂಥ ಯಾರ ಬಗ್ಗೆಯೂ ಸಾಮಾನ್ಯವಾಗಿ ಸದನದ ಎಲ್ಲಾ ಸದಸ್ಯರು ಗೌರವ ಪೂರ್ವಕವಾಗಿ, ಸಾಂಪ್ರದಾಯಿಕವಾಗಿ ಹೇಳತಕ್ಕ ಮಾತು ಇದು. ಆದರೆ ನನ್ನದು ಒಂದು ಪದ್ಧತಿ ಇದೆ.

9.20 ಪಿ.ಎಂ

ಯಾವ ಕಾರಣಕ್ಕೂ ಕೂಡ ಸಾಂಪ್ರದಾಯಿಕವಾಗಿ ಆ ಗೌರವಕ್ಕೆ ನಾನು ಅರ್ಹನಾಗಬಾರದು. ಶುದ್ಧ ಅಂತಃಕರಣದಿಂದ ನಿಮ್ಮ ಗೌರವಕ್ಕೆ ನಾನು ಅರ್ಹನಾಗಿಯೇ ನಾನು ಈ ಸ್ಥಾನದಲ್ಲಿ ಕುಳಿತಿರಬೇಕು. ಯಾವ ಮಾತನ್ನು ನೀವು ಹೇಳುತ್ತೀರಿ, ಆ ಮಾತು ನಿಮ್ಮ ಹೃದಯಾಂತರಾಳದಿಂದ ಬರಬೇಕು. ಆ ವಿಶ್ವಾಸಕ್ಕೆ ಅರ್ಹನಾಗಿರುವಷ್ಟು ದಿನ ಮಾತ್ರ ನಾನು ಈ ಕುರ್ಚಿಯಲ್ಲಿರಬೇಕೆಂದು ಯೋಚನೆ ಮಾಡುತ್ತೇನೆ. ಕೆಲವು ಸನ್ನಿವೇಶಗಳು ಬಂದಾಗ ನಾನೂ ಕೂಡ ಮಾನಸಿಕವಾಗಿ ತೀರಾ

ಗೊಂದಲಕ್ಕೆ ಒಳಗಾಗುತ್ತೇನೆ. ಅಂದರೆ, ಕೆಲವು ಅಭಿಪ್ರಾಯಗಳನ್ನು ಹೇಳತಕ್ಕ ಸ್ವಾತಂತ್ರ್ಯ ನೀವು ಪಡೆದುಕೊಂಡಿದ್ದೀರಿ. ಆ ಸ್ವಾತಂತ್ರ್ಯವನ್ನು ನಾನು ಕಳೆದುಕೊಂಡು ಇಲ್ಲಿ ಕುಳಿತಿರುವುದರಿಂದ ನನ್ನ ವಿವೇಚನೆಯನ್ನು ಕೂಡ ಉಪಯೋಗ ಮಾಡುತ್ತೇನೆಂಬ ಮಾತನ್ನು ಹೇಳಿ, ತಾವೇನು ಸಹಕಾರ ಕೊಟ್ಟಿದ್ದೀರಿ, ತಮಗೆ ನನ್ನ ವಂದನೆಗಳನ್ನರ್ಪಿಸುತ್ತಿದ್ದೇನೆ. ದಯಮಾಡಿ ನನ್ನಲ್ಲಿ ವಿಶ್ವಾಸವಿಡಿ. ಈ ವಿಚಾರವನ್ನು ಬಗೆಹರಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇಂದು ನಾವು ಬೆಳಿಗ್ಗೆ 10 ಗಂಟೆಗೆ ಬಂದೆವು....

ಅಧ್ಯಕ್ಷರು : ಇನ್ನು 5-10 ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಉತ್ತರ ಸಮಾಧಾನವಾಗುವುದಿಲ್ಲ. ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ.

ಅಧ್ಯಕ್ಷರು : ಇನ್ನು ಉಳಿದಿರುವುದು ಜಯಪ್ರಕಾಶ್ ಹೆಗಡೆಯವರು ಮೀನುಗಾರಿಕೆ ಇಲಾಖೆ ಮತ್ತು ರೇಷ್ಮೆ ಇಲಾಖೆ ಮಾತ್ರ. ನನಗೆ ರೂಲ್ಸ್ ಪರ್ಮಿಟ್ ಮಾಡುವುದಿಲ್ಲ. ನನ್ನ ಸಮಸ್ಯೆ ಅದು.

ಶ್ರೀ ವಾಟಾಳ್ ನಾಗರಾಜ್ : ಈಗ ಅವರಿಗೆ ಅವಕಾಶ ಕೊಡುವುದಕ್ಕಿಂತ ಹೆಚ್ಚಾಗಿ, ಸುದೀರ್ಘವಾದ ಉತ್ತರ ಕೊಡುತ್ತಾರೆ ಅವರಿಗೂ ಒಂದು ಅವಕಾಶ ಸಿಕ್ಕಿದಹಾಗೆ ಆಗುತ್ತದೆ.

ಅಧ್ಯಕ್ಷರು : ನಾನು ಮಾರನೇ ದಿವಸಕ್ಕೆ ತೆಗೆದುಕೊಂಡುಹೋಗುವಂತಾದ್ದು ಇದ್ದಿದ್ದರೆ, ಇಷ್ಟೆಲ್ಲಾ ಕಸರತ್ತು ಮಾಡಬೇಕಾಗಿರಲಿಲ್ಲ. 5 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಶ್ರೀ ಹೆಚ್. ಶಿವಪ್ಪ : ಇಲ್ಲಿ ಎರಡೂ ಕಡೆಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ತಲೆ ತಿರುಗುತ್ತಿದೆ. ನಮ್ಮ ಗತಿ ಏನು?

ಅಧ್ಯಕ್ಷರು : ನಾನು ತಮ್ಮೆಲ್ಲರಲ್ಲೂ ಕೂಡ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇಂತಹ ಸನ್ನಿವೇಶ ಯಾವಾಗಲೂ ಉದ್ಭವವಾಗಿರಲಿಲ್ಲ. ಬೇಡಿಕೆಗಳ ಮೇಲೆ ಉತ್ತರ ಪ್ರಾರಂಭವಾದ ಮೇಲೆ ನಿಲ್ಲಿಸುವುದಕ್ಕೆ ಬರುವುದಿಲ್ಲ. 5-10 ನಿಮಿಷಗಳ ಕಾಲ ಸಹಕರಿಸಿ. ನಿರ್ಣಯವನ್ನು ನಾಳೆ ತೆಗೆದು ಕೊಳ್ಳುತ್ತೇನೆ. ವರದೇಗೌಡರೇ, ತಾವು ಉತ್ತರವನ್ನು ಪ್ರಾರಂಭ ಮಾಡಿ. 5 ನಿಮಿಷದಲ್ಲಿ ಮುಗಿಸಿಬಿಡಿ ನೀವೇನು ಕೆಲಸದಲ್ಲಿ ನಂಬಿಕೆ ಇರುವವರು, ಮಾತನಾಡುವುದಿಲ್ಲ, ಏನೂ ಇಲ್ಲ, ಬೇಗ ಮುಗಿಸಿಬಿಡಿ. ನಾನು ಮಾಡಿರತಕ್ಕ ಕೆಲಸಕ್ಕೆ ಪ್ರೋತ್ಸಾಹ ಕೊಡಿ ಎಂದು ಹೇಳಿ.

## ರೇಷ್ಮೆ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಇಲಾಖೆ ಸೂಕ್ಷ್ಮವಾದ ಇಲಾಖೆ, ಮುಖ್ಯವಾಗಿ ಮೈಸೂರು ಬಿತ್ತನೆ ವಲಯದಲ್ಲಿ ರೋಗಗಳನ್ನು ತಡೆಗಟ್ಟಲು